ಏಪ್ರಿಲ್ 2024 ₹ 15/-

# ಯುಗರಶ್ಮಿ

ತ್ರೈಮಾಸಿಕ



- ಸಾಮಾಜಿಕ – ಆರ್ಥಿಕ ಶಾಂತಿ
- ಇಸ್ಲಾಂ, ಧಾರ್ಮಿಕ ಸ್ವಾತಂತ್ರ್ಯ, ಸಾಮಾಜಿಕ ಸಾಮರಸ್ಯ
- ದೇವಭಕ್ತಿ – ಉಪವಾಸದ ನಿಜವಾದ ತಿರುಳು
- ಮುಸ್ಲಿಮೇತರರೊಡನೆ ಸಮಾನತೆ ಹಾಗೂ ಉತ್ತಮ ನಡವಳಿಕೆಯ ಕುರಿತು ಪವಿತ್ರ ಖುರ್‌ಆನ್‌ನ ಬೋಧನೆಗಳು
- ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವನ ಚರಿತ್ರೆ
- ಶಾಂತಿ ಮತ್ತು ಪರಸ್ಪರ ಗೌರವದ ಸ್ಥಾಪನೆ
- ನೀನು ಮಾಡು – ಮಾಡಬೇಡ

“ಎಲೈ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ವ್ರತಾನುಷ್ಠಾನವನ್ನು ವಿಧಿಸಲಾಗಿದೆ – ನೀವು (ನೈತಿಕ ಮತ್ತು ಆಧ್ಯಾತ್ಮಿಕ ನ್ಯೂನತೆಗಳಿಂದ ಸುರಕ್ಷಿತರಾಗುವಂತೆ) ದೋಷಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕೋಸ್ಕರ.”

(ಪವಿತ್ರ ಖುರ್‌ಆನ್ 2: 184)

# ಯುಗರಶ್ಮಿ

ವಿಷಯ ಸೂಚಿಕೆ | ಪುಟ


- ವ್ರತಾನುಷ್ಠಾನ 01
- ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 02
- ಸಾಮಾಜಿಕ – ಆರ್ಥಿಕ ಶಾಂತಿ 03
- ಇಸ್ಲಾಂ, ಧಾರ್ಮಿಕ ಸ್ವಾತಂತ್ರ್ಯ, ಸಾಮಾಜಿಕ ಸಾಮರಸ್ಯ 08
- ದೇವಭಕ್ತಿ – ಉಪವಾಸದ ನಿಜವಾದ ತಿರುಳು 11
- ಮುಸ್ಲಿಮೇತರರೊಡನೆ ಸಮಾನತೆಯ ಹಾಗೂ ಉತ್ತಮ ನಡೆವಳಿಕೆಯ ಕುರಿತು ಪವಿತ್ರ ಖುರ್‌ಆನಿನ ಬೋಧನೆಗಳು 17
- ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವನ ಚರಿತ್ರೆ 22
- ಶಾಂತಿ ಮತ್ತು ಪರಸ್ಪರ ಗೌರವದ ಸ್ಥಾಪನೆ ಇಸ್ಲಾಮಿನ ಅಧ್ಯಾಪನೆಗಳ ಬೆಳಕಿನಲ್ಲಿ 23
- ನೀನು ಮಾಡು – ಮಾಡಬೇಡ 27
- ಓದಿದ್ದು : 29

• 100 ಭಾಷೆಗಳ ಅನುವಾದಕ್ಕೂ ಸೈ ! • ಪ್ರಧಾನಿಗೆ 265 ಪತ್ರ ಬರೆದ ಗೃಹಿಣಿ ! • ಸುಪ್ರೀಂನ ಮೊದಲ ಮಹಿಳಾ ನ್ಯಾ। ಮೂರ್ತಿ ಫಾತಿಮಾ ನಿಧನ • ಹಾವು ಬಿಟ್ಟು ಪತ್ನಿ, ಪುತ್ರಿಯನ್ನು ಕೊಂದ ! • ಡ್ರಗ್ಸ್‌ಗಾಗಿ ಮಕ್ಕಳ ಮಾರಿದ ದಂಪತಿ !
• ಚಪ್ಪಲಿ ಬಾಯಲ್ಲಿಟ್ಟು ಥಳಿತ ! • ಬರ್ತ್‌ಡೇಗೆ ದುಬ್ಯಾಗೆ ಕರೆದೊಯ್ಯದ ಪತಿಯನ್ನು ಗುದ್ದಿ–ಗುದ್ದಿ ಕೊಂದ ಪತ್ನಿ
• ಎಂಟು ಮಕ್ಕಳನ್ನು ಪಡೆಯಿರಿ. ರಷ್ಯಾದ ಮಹಿಳೆಯರಿಗೆ ಅಧ್ಯಕ್ಷ ವ್ಲಾದಿಮಿರ್ ಪುತಿನ್ ಕರೆ
• ಲೈಂಗಿಕ ಕಿರುಕುಳ : 189 ವರ್ಷ ಸಜೆ • ‘ಜೈ ಶ್ರೀರಾಮ್’ ಹೇಳುವಂತೆ ಅಂಧ ವೃದ್ಧನ ಮೇಲೆ ದೌರ್ಜನ್ಯ ಆರೋಪ
• ಎಂಜಿಲು ತಟ್ಟೆ ಮೈ ಸೋಕಿದ್ದಕ್ಕೆ ಕೊಲೆ ! • ಅಯೋಧ್ಯೆ ಮಸೀದಿಯಲ್ಲಿ ವಿಶ್ವದ ಅತೀ ದೊಡ್ಡ ಕೇಸರಿ ಕುರಾನ್‌ಗೆ ಸ್ಥಾನ
• ನಾಲ್ಕು ಸ್ನಾತಕೋತ್ತರ ಪದವಿ, ಪಿಎಚ್‌ಡಿ ಪದವೀಧರನಿಂದ ತರಕಾರಿ ಮಾರಾಟ !
• ಮನುಷ್ಯನ ದೇಹಕ್ಕೆ ತೀವ್ರಹಾನಿಕಾರಕ : 1ಲೀ. ಬಾಟಲಿ ನೀರಲ್ಲಿ 2.40 ಲಕ್ಷ ಪ್ಲಾಸ್ಟಿಕ್ ಕಣ !
• ದೇವರೆದುರು ಎಲ್ಲರೂ ಸಮಾನರು • ಬ್ಯಾಟರಿ, ಸ್ಕ್ರೂ ತಿನ್ನಿಸಿ ಸ್ನೇಹಿತನ ಮಗುವನ್ನೇ ಕೊಂದ ಪಾಪಿ ಮಹಿಳೆ !
• ಭಾರತದ ಹಿಂಸಾ ಕೃತ್ಯಗಳು ಕಳವಳಕರ – ಯುರೋಪಿಯನ್ ಸಂಸತ್ ನಿರ್ಣಯ
• ಮುಸ್ಲಿಮೇತರ ರಾಜತಾಂತ್ರಿಕರಿಗಾಗಿ ಮೊದಲ ಮದ್ಯದಂಗಡಿ ತೆರೆಯಲು ಸಜ್ಜಾದ ಸೌದಿ ಅರೇಬಿಯ
• 18 ವರ್ಷ ಅಧ್ಯಯನ ಮಾಡಿ ಪಿಎಚ್‌ಡಿ ಪಡೆದ 89ರ ಅಜ್ಜ ! • 103ನೇ ವಯಸ್ಸಿನಲ್ಲಿ 3ನೇ ಮದುವೆ !
• ಮಕ್ಕಳನ್ನು ಹಡೆದರೆ 60 ಲಕ್ಷ ನಗದು ! • ನಾಯಿಗೂಡಿನಲ್ಲಿ ಬೆಳೆದ ಓಕ್ಸಾನಾ, ನಾಯಿಯಂತೆಯೇ ಆದಳು
• ವಿಶ್ವದ ಅತೀ ದೊಡ್ಡ ಅನಕೊಂಡ ಪತ್ತೆ • 900 ಕೈದಿಗಳ ಬಿಡುಗಡೆಗಾಗಿ 2.5 ಕೋಟಿ ದಾನ ಮಾಡಿದ ಭಾರತೀಯ ಉದ್ಯಮಿ
• ಅಲರ್ಜಿಯ ಕಾರಣಕ್ಕೆ ಸ್ನಾನವನ್ನೇ ತ್ಯಜಿಸಿದ ಅಮೆರಿಕದ ಯುವತಿ
• ವಿವಾಹ ಯೋಜನೆಯ ಲಾಭಕ್ಕೆ ಸೋದರನ ಜತೆಗೆ ವಿವಾಹವಾದ ಮಹಿಳೆ
• ಕೆರೆಯಲ್ಲಿ ಬಟ್ಟೆ ತೊಳೆಯುತ್ತಿದ್ದ ದಲಿತರಿಗೆ ಸವರ್ಣೀಯರಿಂದ ತಡೆ
• ಮುಸ್ಲಿಮರ ‘ಭಾರತ್ ಮಾತಾ ಕಿ ಜೈ ಘೋಷಣೆ’ ಬಿಡ್ತೀರಾ ? : ಪಿಣರಾಯಿ


ಮುಖಪುಟ ಚಿತ್ರ : ಮಸ್ಜಿದ್ ನೂರುದ್ದೀನ್, ಡರ್ಮ್‌ಸ್ಟಡ್‌ಟ್, ಜರ್ಮನಿ


ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–



ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575001.
ಸಂಪರ್ಕಿಸಿರಿ : 9900410789

بِسۡمِ اللّٰہِ الرَّحۡمٰنِ الرَّحِیۡمِ
نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

ಎಪ್ರಿಲ್ 2024

| ಆರಂಭ : 1975 | ಸಂಪುಟ : 40 | ಶಹಾದತ್ : 1403 ಹಿಜರೀ ಶಮ್ಸೀ | ಸಂಚಿಕೆ : 2 |
|---|---|---|---|


## ವ್ರತಾನುಷ್ಠಾನ

"ಇಸ್ಲಾಮಿನ ಅನುಷ್ಠಾನ ಕರ್ಮಗಳಲ್ಲಿ ಮೂರನೆಯದು ಉಪವಾಸವಾಗಿದೆ. ಉಪವಾಸದ ಯಥಾರ್ಥತೆಯ ಕುರಿತು ಜನರು ಅಜ್ಞರಾಗಿದ್ದಾರೆ. ವಾಸ್ತವಾಂಶವೇನೆಂದರೆ, ಹೋಗಿ ಕಂಡಿಲ್ಲದ ರಾಜ್ಯದ ಕುರಿತು ಮತ್ತು ಅರಿವಿಲ್ಲದ ಲೋಕದ ಕುರಿತು ಮನುಷ್ಯನಿಗೆ ಏನು ಹೇಳಲು ಸಾಧ್ಯ? ಮನುಷ್ಯನು ಹಸಿದು, ದಾಹಿಸಿ ಇರುವುದು ಮಾತ್ರವಲ್ಲ ಉಪವಾಸ. ಅದಕ್ಕೆ ಒಂದು ತತ್ವವಿದೆ. ಅದಕ್ಕೆ ಒಂದು ಪ್ರಭಾವವಿದೆ. ಅದು ಅನುಭವ ಮೂಲಕ ತಿಳಿಯಲು ಸಾಧ್ಯ. ಆಹಾರ ಕಡಿಮೆಗೊಳಿಸುವುದಕ್ಕೆ ಅನುಸಾರ ಆತ್ಮ ಪರಿಶುದ್ಧವಾಗುತ್ತದೆಂಬುದು ಮನುಷ್ಯ ಪ್ರಕೃತಿಯಲ್ಲಿರುವುದಾಗಿದೆ. ದರ್ಶನ ಶಕ್ತಿ ವರ್ಧಿಸುತ್ತದೆ. ಭೌತಿಕಾಹಾರ ಕಮ್ಮಿ ಮಾಡಿ ಆತ್ಮೀಯಾಹಾರ ಹೆಚ್ಚಿಸುವುದು ಎಂಬುದೇ ಅಲ್ಲಾಹನು ಇದರ ಮೂಲಕ ಉದ್ದೇಶಿಸುವುದು. ಹಸಿವು ಮಾತ್ರವಲ್ಲ ಅವನಿಂದ ಪ್ರತೀಕ್ಷಿಸುವುದು ಎಂಬ ವಿಚಾರ ಉಪವಾಸಿಗನ ದೃಷ್ಟಿಯಲ್ಲಿರಬೇಕು. ಮಾತ್ರವಲ್ಲ, ಏಕಾಂತ ವಾಸ ಮತ್ತು ಭೌತಿಕತೆಯಿಂದ ಅಗಲುವಿಕೆ ಲಭಿಸಲಿಕ್ಕಾಗಿ ದೇವಸ್ಮರಣೆಯಲ್ಲಿ ಹೆಚ್ಚು ಹೆಚ್ಚು ಮಗ್ನರಾಗಬೇಕು. ಕೇವಲ ಶರೀರಕ್ಕೆ ಪೋಷಣೆ ನೀಡುವ ಆಹಾರ ಬಿಟ್ಟು ಆತ್ಮದ ತೃಪ್ತಿಗೂ ಸಂಪುಷ್ಟಿಗೂ ಒದಗುವ ಆಹಾರ ಸ್ವೀಕರಿಸುವುದು ಎಂಬುದು ವ್ರತಾನುಷ್ಠಾನದ ಉದ್ದೇಶ. ಒಂದು ವಾಡಿಕೆ ಎಂಬ ಸ್ಥಿತಿಯಲ್ಲಲ್ಲದೆ ಯಾರು ಅಲ್ಲಾಹನಿಗೋಸ್ಕರ ಉಪವಾಸ ಮಾಡುತ್ತಾನೋ ಆತನು ಆಧ್ಯಾತ್ಮಿಕ ಆಹಾರ ಲಭಿಸಲಿಕ್ಕೋಸ್ಕರ ಅಲ್ಲಾಹನ ಸ್ತುತಿಕೀರ್ತನೆ ಮಾಡುವುದರಲ್ಲಿ ಮಗ್ನನಾಗಿರಬೇಕಾಗಿದೆ." **(ಮಲ್‌ಫೂಝಾತ್ – ಸಂಪುಟ 9, ಪುಟ 123, 1984)**

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು

## ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ಕರುಣೆ ತೋರಿಸದವನ ಮೇಲೆ ಕರುಣೆ ತೋರಿಸಲ್ಪಡಲಾರದು.
- ತನ್ನ ಸಂಪತ್ತನ್ನು ಸಂರಕ್ಷಿಸುವಾಗ ವಧಿಸಲ್ಪಡುವವನು ಶಹೀದ್ (ಹುತಾತ್ಮ) ಆಗುತ್ತಾನೆ.
- ಶುಚಿತ್ವ ಸತ್ಯವಿಶ್ವಾಸದ ಅಂಶವಾಗಿದೆ.
- ಬಲಗೈಯಿಂದ ತಿನ್ನಿರಿ; ತನ್ನ ಮುಂದಿರುವ ಭಾಗದಿಂದ ತಿನ್ನಿರಿ.
- ಕೆಲವು ಕವಿತೆಗಳು ವಿವೇಕಯುತವೂ ಕೆಲವು ಭಾಷಣಗಳು ಸಮ್ಮೋಹಕವೂ ಆಗಿವೆ.
- ಊಹೆಯಿಂದ ಸುರಕ್ಷಿತರಾಗಿರಿ. ಖಂಡಿತವಾಗಿಯೂ ಊಹೆಗಳು ಬಲುದೊಡ್ಡ ಸುಳ್ಳಾಗಿವೆ.
- ಅಸೂಯೆಯಿಂದ ಸುರಕ್ಷಿತರಾಗಿರಿ. ಬೆಂಕಿ ಕಟ್ಟಿಗೆಯನ್ನು ಸುಟ್ಟುಹಾಕುವ ರೀತಿಯಲ್ಲಿ ಖಂಡಿತವಾಗಿಯೂ ಅಸೂಯೆ ಒಳಿತುಗಳನ್ನು ಸುಟ್ಟುಬಿಡುತ್ತದೆ.
- ದೇಶಪ್ರೇಮ ಸತ್ಯವಿಶ್ವಾಸದ ಅಂಶವಾಗಿದೆ.
- ಯಾವುದಾದರೂ ವಸ್ತುವಿನ ಮೇಲಿರುವ ನಿನ್ನ ಪ್ರೀತಿ ನಿನ್ನನ್ನು ಅಂಧನೂ ಕಿವುಡನೂ ಆಗಿ ಬದಲಾಯಿಸುತ್ತದೆ.
- ಔದಾರ್ಯ ಮಾಡುವವರೊಡನೆ ಪ್ರೀತಿ ಮತ್ತು ಕೆಡುಕು ಮಾಡುವವರೊಡನೆ ದ್ವೇಷ ಸಹಜವಾಗಿಯೇ ಹೃದಯದಲ್ಲಿ ಇರುತ್ತದೆ.

(“ಹದೀಸ್ ಸಮಾಹಾರಂ” ಪುಸ್ತಕದಿಂದ ಆಯ್ದುದು)

**SWORDS CAN WIN TERRITORIES**
**BUT NOT HEARTS.**
**FORCES CAN BEND HEADS**
**BUT NOT MINDS.**

**- Hazrat Mirza Tahir Ahmad, Khalifathul Masih IV**

ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು
ಆದರೆ ಹೃದಯಗಳನ್ನಲ್ಲ.
ಬಲದಿಂದ ಶಿರಗಳನ್ನು ಬಾಗಿಸಬಹುದು
ಆದರೆ ಮನಸ್ಸುಗಳನ್ನಲ್ಲ.

– ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಚತುರ್ಥ ಖಲೀಫ

# ಸಾಮಾಜಿಕ – ಆರ್ಥಿಕ ಶಾಂತಿ

♦ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಮುಸ್ಲಿಂ ಜಮಾಅತಿನ ನಾಲ್ಕನೇ ಖಲೀಫ

**"ಅಲ್ಲಾಹನ ಪ್ರೀತಿಯನ್ನು ಗಳಿಸಲಿಕ್ಕಾಗಿ ಮತ್ತು ತಮ್ಮ ಆತ್ಮಗಳನ್ನು ಬಲಪಡಿಸಲಿಕ್ಕಾಗಿ ತಮ್ಮ ಧನವನ್ನು ವ್ಯಯ ಮಾಡುವವರ ಸ್ಥಿತಿ ಪೀಠಭೂಮಿಯ ಮೇಲಿರುವ ತೋಟದಂತೆ. ಅದರ ಮೇಲೆ ಭಾರೀ ಮಳೆ ಸುರಿದಾಗ ಇಮ್ಮಡಿ ಫಲಗಳು ಉತ್ಪಾದಿಸಲ್ಪಡುತ್ತವೆ. ಸಮೃದ್ಧವಾದ ಮಳೆ ಅದರ ಮೇಲೆ ಬೀಳದಿದ್ದರೆ ಲಘುವಾದ ಮಳೆ ಅದಕ್ಕೆ ಸಾಕಾಗುತ್ತದೆ. ನೀವು ಮಾಡುವುದನ್ನೆಲ್ಲ ಅಲ್ಲಾಹನು ಕಾಣುತ್ತಾನೆ."** (ಪವಿತ್ರ ಖುರ್‌ಆನ್ 2 :266).

**"ಮನುಷ್ಯರಿಗೆ ಸ್ತ್ರೀಯರು, ಮಕ್ಕಳು, ಚಿನ್ನ–ಬೆಳ್ಳಿಯ ಭವ್ಯ ಭಂಡಾರ, ಉತ್ತಮ ಜಾತಿಯ ಕುದುರೆಗಳು, ಜಾನುವಾರುಗಳು ಮತ್ತು ಕೃಷಿಭೂಮಿಗಳ ಮೇಲಿನ ಪ್ರೀತಿ ಆಕರ್ಷಕಗೊಳಿಸಲ್ಪಟ್ಟಿದೆ. ಇವೆಲ್ಲ ಐಹಿಕ ಜೀವನದ ಸುಖ ಸೌಕರ್ಯಗಳಾಗಿವೆ. ಆದರೆ ಅಲ್ಲಾಹನ ಬಳಿ ಅತ್ಯುತ್ತಮವಾದ ನಿವಾಸವಿದೆ."** (ಪವಿತ್ರ ಖುರ್‌ಆನ್ 3:15).

**ಸಮಾಜದ ಮತ್ತು ಆರ್ಥಿಕತೆಯ ದಿಗಂತಗಳು ಪರಸ್ಪರ ಸೇರುವ ಪ್ರದೇಶಗಳಲ್ಲಿ ಒಂದು ಉಪದೇಶ ಇಸ್ಲಾಮ್‌ಗೆ ನೀಡಲಿಕ್ಕಿದೆ. ಇಸ್ಲಾಮಿನ ಉಪದೇಶಗಳನ್ನು ಕೃತಿ ರೂಪಕ್ಕಿಳಿಸಿದರೆ ಅವು ನಮ್ಮ ಸಂಧ್ಯಾಕಾಲಗಳನ್ನೂ ಮುಂಜಾವುಗಳನ್ನೂ ಅತ್ಯಪೂರ್ವ ಸೌಂದರ್ಯ ಭರಿತ ಪ್ರಕಾಶಮಯ ಕಾಲಗಳನ್ನಾಗಿ ಪರಿವರ್ತಿಸುವುದು.**

## ಭಂಡವಾಳಶಾಹಿತ್ವ, ಸಮಾಜವಾದ ಮತ್ತು ಇಸ್ಲಾಮ್‌ನಲ್ಲಿ ಆರ್ಥಿಕ ನ್ಯಾಯಪಾಲನೆ

ಆರ್ಥಿಕ ನ್ಯಾಯಪಾಲನೆ ಎನ್ನುವುದು ಸುಂದರವಾದೊಂದು ಘೋಷಣೆಯಾಗಿದೆ. ಇತರರನ್ನು ಹೊರಗಿರಿಸಿ ಅದನ್ನು ತಮ್ಮ ಏಕ ಸ್ವಾಮಿತ್ವಕ್ಕೊಳಪಡಿಸಲು ಪ್ರಯತ್ನಗಳನ್ನು ನಡೆಸಲಾಗಿದ್ದರೂ ಸ್ವತಂತ್ರ ಮಾರುಕಟ್ಟೆಯನ್ನು ಪ್ರತಿಪಾದಿಸುವ ಭಂಡವಾಳಶಾಹಿ ಸಮಾಜ ಮತ್ತು ವೈಜ್ಞಾನಿಕ ಸಮಾಜವಾದಿ ಸಮಾಜ ಇವೆರಡು ಇದರ ಬಗ್ಗೆಯೇ ಪ್ರತಿಪಾದಿಸುತ್ತವೆ. ಆದರೆ ಇವೆರಡು ಸಮಾಜ ವ್ಯವಸ್ಥೆಗಳು ಆರ್ಥಿಕ ನ್ಯಾಯಪಾಲನೆಯ ಸುವರ್ಣ ತತ್ವವನ್ನು ಅನುಷ್ಠಾನಕ್ಕೆ ತರಲು ವಿಫಲವಾಗಿವೆ ಎಂದು ಹೇಳಲು ಬಯಸುತ್ತೇನೆ.

ಪರಿಪೂರ್ಣ ನ್ಯಾಯಪಾಲನೆ ಎಂಬ ಇಸ್ಲಾಮೀ ತತ್ವವು ಎಲ್ಲವನ್ನೂ ಆವರಿಸುವಂತಹದ್ದೂ ಎಲ್ಲದಕ್ಕೂ ಅನ್ವಯಿಸುವಂತಹದ್ದೂ ಆಗಿದೆ. ಇಸ್ಲಾಮಿನ ಪ್ರತಿಯೊಂದು ಉಪದೇಶದಲ್ಲಿ ಇದು ಒಳಗೊಂಡಿದೆ. ಇಷ್ಟುಮಾತ್ರವಲ್ಲ, ಇಸ್ಲಾಮ್ ಇದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಸಾಗಿದೆ.

ವೈಜ್ಞಾನಿಕ ಸಮಾಜವಾದಿ ವ್ಯವಸ್ಥೆಯಲ್ಲಿ ಆರ್ಥಿಕ ನೆಲವನ್ನು ಸಮತಟ್ಟುಗೊಳಿಸಲು ಎಷ್ಟು ಚೆನ್ನಾಗಿ ಪ್ರಯತ್ನಮಾಡಲಾಗಿದೆ ಎಂದರೆ ಅದರಲ್ಲಿ ಯಾವುದೇ ಏರು ತಗ್ಗುಗಳಿರುವುದಿಲ್ಲ. ನೀರು ಹಾಯಿಸಿದರೆ ನೆಲದ ಎಲ್ಲ ಭಾಗಗಳೂ ಸಮಾನವಾಗಿ ನೀರು ಗಳಿಸುವುದು. ಅಲ್ಲಿ ಬಡವರು ಏನನ್ನೂ ಆವಶ್ಯಪಡುವ ಮತ್ತು ಶ್ರೀಮಂತರು ಅವರಿಗಿಂತ ಕಡಿಮೆ ಅದೃಷ್ಟವಂತರಾದವರಿಂದ ಬೆದರಿಕೆಗೆ ಒಳಗಾಗುವ ಮತ್ತು ತಮ್ಮ "ಮಿಗತೆಯಾದ ಸಂಪತ್ತನ್ನು" ತಮ್ಮಿಂದ ಬಲಾತ್ಕಾರವಾಗಿ ಕಸಿದುಕೊಳ್ಳುವ ಪ್ರಶ್ನೆ ಇರಲಾರವು.

ಭಂಡವಾಳಶಾಹಿ ವ್ಯವಸ್ಥೆಯಲ್ಲಿ ಸಮಾನ ಸಂದರ್ಭಗಳ ಬಗ್ಗೆ, ಸಮತಟ್ಟಾದ ಮೈದಾನಗಳ ಬಗ್ಗೆ ಮತ್ತು ಸ್ವತಂತ್ರ ಆರ್ಥಿಕ ವ್ಯವಸ್ಥೆಯ ಬಗ್ಗೆ ಮಾತನಾಡುತ್ತಾರೆಯೇ ಹೊರತು ಸಂಪತ್ತನ್ನು ಸಮಾನವಾಗಿ ಹಂಚುವ ಬಗ್ಗೆ ಅಲ್ಲ. ಆದುದರಿಂದ ಹಕ್ಕುಗಳಿಗೆ ಹೋರಾಡುವವರು, ಒತ್ತಡ ಹಾಕುವ ಗುಂಪುಗಳಾದ ಟ್ರೇಡ್ ಯೂನಿಯನ್ ಮೊದಲಾದುವು ಈ ವ್ಯವಸ್ಥೆಯಲ್ಲಿರುತ್ತವೆ. ಅವರು ಸರಕಾರದಿಂದ ಮತ್ತು ಭಂಡವಾಳಗಾರರಿಂದ ತಮ್ಮ ಅಧೀನದಲ್ಲಿರುವ ಕಾರ್ಮಿಕರಿಗೋಸ್ಕರ ಸಾಧ್ಯವಿರುವಷ್ಟು ಪಡೆದುಕೊಳ್ಳಲು ಪ್ರಯತ್ನಿಸುತ್ತಾ ಇರುತ್ತಾರೆ. ಕಾರ್ಮಿಕರು ಯಾವಾಗಲೂ ತಮಗೆ ಅರ್ಹವಾದಷ್ಟು ದೊರಕಿಲ್ಲ ಎಂಬ ಭಾವನೆಯಲ್ಲಿ ಯಾವಾಗಲೂ ಇರುತ್ತಾರೆ.

ವೈಜ್ಞಾನಿಕ ಸಮಾಜವಾದಿ ವ್ಯವಸ್ಥೆ ಅದರ ಸಿದ್ಧಾಂತಕ್ಕೆ ಅನುಸಾರವಾಗಿ ಸ್ಥಾಪಿತವಾದರೆ ಸಮಾಜದ ಯಾವುದೇ ವಿಭಾಗ ಯಾವುದಾದರೂ ಬೇಡಿಕೆ ಸಮರ್ಪಿಸುವ ಆವಶ್ಯಕತೆ ಉಂಟಾಗಲಾರದು. ಅಂತಹ ಸಮಾಜ ಐಶ್ವರ್ಯವನ್ನು ಹೊಂದಿದ್ದು ರಾಷ್ಟ್ರೀಯ ಆದಾಯವನ್ನು ತಮ್ಮ ಆವಶ್ಯಕತೆಗಳಿಗೆ ಅನುಸಾರವಾಗಿ ಹಂಚಿಕೊಂಡಿರುವುದು ಅಥವಾ ಅದು ಎಷ್ಟು ಬಡವಾಗಿರುವುದೆಂದರೆ ಅದರ ಸದಸ್ಯರ ಆವಶ್ಯಕತೆಗಳನ್ನು ಈಡೇರಿಸಲು ಸಾಧ್ಯವಾಗದೆ ಆ ಸಮಾಜದ ಪ್ರತಿಯೊಬ್ಬ ಪುರುಷ ಮತ್ತು ಮಹಿಳೆ ಕಷ್ಟವನ್ನು ಸಮಾನವಾಗಿ ತಮ್ಮಲ್ಲಿ ಹಂಚಿಕೊಳ್ಳುತ್ತಾರೆ. ಈ ಎರಡು ಪರಿಸ್ಥಿತಿಗಳಲ್ಲಿ ಎಂತಹ ಸಮಾಜ ಸ್ಥಾಪಿತವಾಗುವುದೆಂದರೆ, ಅದರಲ್ಲಿ ಆವಶ್ಯಕತೆಗೆ ಯಾವುದೇ ಮುಖ್ಯ ಪಾತ್ರ ಇರುವುದಿಲ್ಲ.

ಭಂಡವಾಳಶಾಹಿ ವ್ಯವಸ್ಥೆಯು ಆವಶ್ಯಕತೆಗಳನ್ನು ಅಭಿಮುಖೀಕರಿಸುತ್ತದೆ. ಸಮಾಜದಲ್ಲಿ ಕಡಿಮೆ ಅದೃಷ್ಟವಂತರಾದವರಿಗೆ ತಮ್ಮ ಅಸಂತೋಷವನ್ನು ಸೂಚಿಸಲು ಮತ್ತು ತಮ್ಮ ಬೇಡಿಕೆಗಳನ್ನು ಆಲಿಸುವಂತೆ ಮಾಡಲು ಹಕ್ಕು ನೀಡಲಾಗುತ್ತಿದೆ. ಈ ಕಾರಣದಿಂದ ಒತ್ತಡ ಬೀರುವ ಗುಂಪುಗಳು, ಮುಷ್ಕರಗಳು, ಕೈಗಾರಿಕೆಗೆ ಸಂಬಂಧಿಸಿದ ಸಂಘರ್ಷಗಳು, ಲಾಕ್‌ಔಟ್‌ಗಳು ಆವಶ್ಯಕವಾಗುತ್ತವೆ.

ಇಸ್ಲಾಮ್ ಎಂತಹ ಮನೋಭಾವವನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದೆ ಎಂದರೆ ಸರಕಾರಗಳನ್ನು ಮತ್ತು ಶ್ರೀಮಂತರನ್ನು ನಿರಂತರವಾಗಿ ನೆನಪಿಸಲಾಗುತ್ತಿದೆ – ನ್ಯಾಯಪೂರ್ಣವಾದ ಆರ್ಥಿಕ ವ್ಯವಸ್ಥೆಯನ್ನು ಸ್ಥಾಪಿಸುವುದು ಅಂತಿಮವಾಗಿ ಅವರಿಗೆ ಹಿತಕರವಾಗುತ್ತದೆ ಎಂದು. ಅನ್ಯರ ಹಕ್ಕುಗಳನ್ನು ಈಡೇರಿಸುವ ಕಾಳಜಿ ಹೊಂದಬೇಕೆಂದು ನಿರಂತರವಾಗಿ ಅವರಿಗೆ ಉಪದೇಶಿಸಲಾಗುತ್ತಿದೆ. ಬಡವರನ್ನೂ ಬಲಹೀನರನ್ನೂ ಮೂಲಭೂತ ಆರ್ಥಿಕ ಹಕ್ಕುಗಳಿಂದ, ಇಷ್ಟವಿರುವ ಉದ್ಯೋಗವನ್ನು ಆಯ್ಕೆ ಮಾಡುವುದು, ಸಮಾನ ಸಂದರ್ಭಗಳ

ಒದಗಿಸುವಿಕೆ ಮತ್ತು ಜೀವನಕ್ಕೆ ಮೂಲಾಧಾರವಾದ ವಸ್ತುಗಳಿಂದ ವಂಚಿತರನ್ನಾಗಿ ಮಾಡಬಾರದು. ಈ ವಿಶಿಷ್ಟ ಮನೋಭಾವದ ಕೊರತೆಯಿಂದ ಬಹಳ ಕಷ್ಟಗಳು, ನೋವು ಮತ್ತು ಅಸ್ತವ್ಯಸ್ತತೆ ಮಾನವನ ಬದುಕಿ ಬಾಳುವ ಚರಿತ್ರೆಯಲ್ಲಿ ಸಂಭವಿಸಿದೆ. ಇಸ್ಲಾಮಿನಲ್ಲಿ ಕೊಡುವ ಬಗ್ಗೆ ಹೆಚ್ಚು ಒತ್ತು ನೀಡಲಾಗುತ್ತಿದೆ – ತೆಗೆದುಕೊಳ್ಳುವ ಮತ್ತು ಇಟ್ಟುಕೊಳ್ಳುವ ಬಗ್ಗೆಯಲ್ಲ. ಸರಕಾರಗಳು ಮತ್ತು ಶ್ರೀಮಂತರು ಯಾವಾಗಲೂ ತಮ್ಮ ಹೊಣೆಗಾರಿಕೆ ಬಗ್ಗೆ ಪ್ರಜ್ಞೆವುಳ್ಳವರಾಗಬೇಕು. ಹೀಗೆ ಮಾಡದಿದ್ದರೆ ಬಡಜನರು ಜೀವಿಸಲು ಆವಶ್ಯಕವಾದ ಸಾಮಗ್ರಿಗಳಿಂದ ವಂಚಿತರಾಗಿ ಕಷ್ಟಪಡುವರು. ವಾಸ್ತವಿಕವಾಗಿಯೂ ಇಸ್ಲಾಮಿನ ಆದರ್ಶಗಳನ್ನು ಪಾಲಿಸುವ ಸರಕಾರ ಈ ಆವಶ್ಯಕತೆಗಳನ್ನು ಕಂಡುಕೊಂಡು ಈಡೇರಿಸುವುದು. ದುಃಖವು ಪ್ರತಿಭಟನೆಯ ಕೂಗುಗಳಿಗೆ ಪರಿವರ್ತಿಸುವ ಮೊದಲು ಮತ್ತು ಜನರ ಆವಶ್ಯಕತೆಗಳು ಶಾಂತಿಗೆ ಭಂಗತರುವ ಮೊದಲು ದುಃಖದ ಕಾರಣವನ್ನು ಹೋಗಲಾಡಿಸಿ ಆವಶ್ಯಕತೆಗಳನ್ನು ಈಡೇರಿಸಬೇಕು.

ಮೇಲಿಂದ ಮೇಲೆ ನೋಡುವಾಗ ಇಸ್ಲಾಮ್ ಪ್ರತಿಪಾದಿಸುವುದು ವೈಜ್ಞಾನಿಕ ಸಮಾಜವಾದ ಪ್ರತಿಪಾದಿಸುವ ಸಮಾಜದ ಹಾಗೆ ಎಂದು ತೋರಬಹುದು. ಅದರೆ ವಾಸ್ತವಿಕವಾಗಿ ಇದು ಮೇಲಿಂದ ಮೇಲೆ ತೋರುವುದಾಗಿದೆ. ಇಸ್ಲಾಮ್ ತನ್ನ ಗುರಿಯನ್ನು ಈಡೇರಿಸುವುದು ವೈಜ್ಞಾನಿಕ ಸಮಾಜವಾದ ಪ್ರತಿಪಾದಿಸುವ ಹಿಂಸಾತ್ಮಕ ಮಾರ್ಗದ ಮೂಲಕವಲ್ಲ. ಇಸ್ಲಾಮ್ ಇದನ್ನು ಹೇಗೆ ಈಡೇರಿಸುತ್ತದೆ ಎಂದು ಸವಿಸ್ತರವಾಗಿ ವಿವರಿಸಲು ಈಗ ಸಾಧ್ಯವಿಲ್ಲ. ಆದರೆ ಇಸ್ಲಾಮ್ ಇದನ್ನು ಈಡೇರಿಸಿಕೊಡುವುದು ವೈಜ್ಞಾನಿಕ ಸಮಾಜವಾದ ಪ್ರತಿಪಾದಿಸುವ ಜೀವರಹಿತ, ಯಾಂತ್ರಿಕ ಮಾದರಿಯಲ್ಲಿ ಅಲ್ಲ. ಇಸ್ಲಾಮೀ ಸಾಮಾಜಿಕ ವ್ಯವಸ್ಥೆ ಮಾನವರ ಸಹಜ ಗುಣಗಳೊಂದಿಗೆ ಅತಿನಿಕಟ ಸಂಬಂಧ ಹೊಂದಿದೆ.

ಇಸ್ಲಾಮ್ ಎಂತಹ ವಾತಾವರಣ ಸೃಷ್ಟಿಸುತ್ತದೆ ಎಂದರೆ ಒಬ್ಬನು ತನ್ನ ಹಕ್ಕುಗಳನ್ನು ಈಡೇರಿಸಿಕೊಳ್ಳುವಾಗ ಅನ್ಯರ ಹಕ್ಕುಗಳ ಬಗ್ಗೆ ಸಾಕಷ್ಟು ಗಮನ ಕೊಡಬೇಕೆಂದು ಅದು ಹೇಳುತ್ತದೆ. ತಮ್ಮ ಸಹಜೀವಿಗಳ ಕಷ್ಟದ ಬಗ್ಗೆ ಎಷ್ಟು ಪ್ರಜ್ಞೆ ಹೊಂದಬೇಕೆಂದರೆ ಸಮಾಜದ ಜನರು, ತಾವು ಸಮಾಜಕ್ಕೆ ಏನನ್ನು ನೀಡಬೇಕೆಂಬುದರ ಬಗ್ಗೆ, ತಮಗೆ ಏನು ದೊರೆಯಬೇಕು ಎಂಬುದಕ್ಕಿಂತ ಹೆಚ್ಚು ಶ್ರದ್ಧೆ ವಹಿಸಬೇಕು.

ಇಸ್ಲಾಮಿನ ಪವಿತ್ರ ಪೈಗಂಬರರು[ಸ] ಹೀಗೆ ಹೇಳಿರುವರು: **"ನೀವು ಕಾರ್ಮಿಕನಿಗೆ ಅವನಿಗೆ ಕೊಡಬೇಕಾದುದಕ್ಕಿಂತ ಹೆಚ್ಚಿಗೆ ಕೊಡಿರಿ. ಅವನ ಬೆವರು ಆರಿಹೋಗುವ ಮೊದಲು ಅವನ ಕೂಲಿ ಕೊಡಿರಿ. ನೀವು ಸ್ವತಃ ಮಾಡಲು ಸಾಧ್ಯವಿಲ್ಲದ ಕಷ್ಟದ ಕೆಲಸವನ್ನು ಕಾರ್ಮಿಕನಿಂದ ಮಾಡಿಸಬೇಡಿರಿ. ನೀವು ನಿಮ್ಮ ಕುಟುಂಬದವರಿಗೆ ಕೊಡುವ ಆಹಾರವನ್ನೇ ಕೆಲಸಗಾರರಿಗೂ ಕೊಡಿರಿ. ನೀವು ಧರಿಸುವಂತಹ ಬಟ್ಟೆಗಳ ಹಾಗಿರುವುದನ್ನೇ ನಿಮ್ಮ ಕೆಲಸಗಾರರು ಧರಿಸುವಂತೆ ಮಾಡಿರಿ. ನೀವು ಬಲಹೀನರ ಮೇಲೆ ಅತಿರೇಕದಿಂದ ವರ್ತಿಸಬೇಡಿರಿ. ನೀವು ನಿಮ್ಮ ವರ್ತನೆಗಳಿಗೆ ಅಲ್ಲಾಹನ ಮುಂದೆ ಜವಾಬ್ದಾರರಾಗುವಿರಿ. ನೀವು ಅಹಂಭಾವಿಗಳಾಗದಿರಲು ಕೆಲವು ಸಾರಿ ನಿಮ್ಮೊಂದಿಗೆ ಜೊತೆಸೇರಿ ಆಹಾರ ತಿನ್ನಲು ನಿಮ್ಮ ಕೆಲಸಗಾರರಿಗೆ ಸಂದರ್ಭ ಒದಗಿಸಿರಿ ಮತ್ತು ಅವರಿಗೆ ಆಹಾರ ಬಡಿಸಿಕೊಡಿರಿ."** (ವಿವಿಧ ಹದೀಸು ಗ್ರಂಥಗಳಿಂದ ಉಲ್ಲೇಖಿತ)

## ಕಷ್ಟಕಾಲದಲ್ಲಿಯೂ ದೇವಮಾರ್ಗದಲ್ಲಿ ಖರ್ಚುಮಾಡುವುದು

ಜೀವಿತದ ಎಲ್ಲ ಕ್ಷೇತ್ರಗಳಲ್ಲೂ ಮಾನವನ ಗೌರವಕ್ಕೆ ಒತ್ತು ನೀಡಲಾಗಿದೆ. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಗಳು ಬಡವರ ಆವಶ್ಯಕತೆಗಳನ್ನು ಈಡೇರಿಸುವ ಬಗ್ಗೆ ಮಾರ್ಗದರ್ಶನ ನೀಡುತ್ತವೆ.

ಅಲ್ಲಾಹನು ಕ್ಷಮೆ ನೀಡುವವರು ಹೀಗಿದ್ದಾರೆ: **"ಅವರು (ಆ ಸಜ್ಜನರು) ಏಳಿಗೆ ಕಾಲದಲ್ಲೂ ಕಷ್ಟಕಾಲದಲ್ಲೂ ದೇವಮಾರ್ಗದಲ್ಲಿ ಧನವನ್ನು ಖರ್ಚು ಮಾಡುವವರೂ ಕೋಪವನ್ನು ನಿಯಂತ್ರಿಸುವವರೂ ಜನರಿಗೆ ಕ್ಷಮೆ ನೀಡುವವರೂ ಆಗಿದ್ದಾರೆ. ಸಜ್ಜನರನ್ನು ಅಲ್ಲಾಹನು ಇಷ್ಟಪಡುತ್ತಾನೆ."** (3:135).

## ಬಡ ಜನರಿಗೋಸ್ಕರ ಖರ್ಚು

ದಾನಧರ್ಮ ಎಂದು ಹೇಳುವುದು ಲೋಕದಲ್ಲಿ ಎರಡು ಅಲಗುಗಳನ್ನು ಹೊಂದಿರುತ್ತದೆ. ಮೊದಲನೆಯದಾಗಿ, ಅದು ದಾನ ನೀಡುವವನನ್ನು ಅಭಿನಂದಿಸುತ್ತದೆ. ಎರಡನೆಯದಾಗಿ, ದಾನ ಪಡೆಯುವವನನ್ನು ಅಪಮಾನಿಸುವುದಿಲ್ಲವಾದರೂ ಅದು ಆತನಿಗೆ ಬೇಸರವನ್ನುಂಟುಮಾಡುತ್ತದೆ. ದಾನಧರ್ಮವನ್ನು ತೆಗೆದುಕೊಳ್ಳುವುದು ಅದನ್ನು ಪಡೆದುಕೊಳ್ಳುವವನ ಅಂತಸ್ಸನ್ನು ಕುಗ್ಗಿಸುತ್ತದೆ. ಇಸ್ಲಾಮ್ ಇದಕ್ಕೆ ಸಂಬಂಧಿಸಿ ಕ್ರಾಂತಿಕಾರಿ ಬದಲಾವಣೆ ಮಾಡಿದೆ.

ಕೆಲವರು ಬಹಳ ಬಡವರೂ ಕೆಲವರು ಶ್ರೀಮಂತರೂ ಆಗಿರುವುದೇಕೆಂಬ ಬಗ್ಗೆ ಪವಿತ್ರ ಖುರ್‌ಆನ್ ಈ ಕೆಳಗಿನಂತೆ ಮೋಹಕ ವಿವರಣೆ ನೀಡಿದೆ: **"ಅವರ ಸಂಪತ್ತಿನಲ್ಲಿ ಯಾಚಿಸುವವರಿಗೂ ದರಿದ್ರರಿಗೂ ಹಕ್ಕು ಇದೆ."** (51 :20).

ಈ ವಚನದಲ್ಲಿ ಬಳಸಲಾದ **"ಹಕ್ಕು"** ಎಂಬ ಪದದ ವ್ಯಾಪಕ ಅರ್ಥವನ್ನು ಸಾಮಾನ್ಯವಾಗಿ ಪರಿಗಣಿಸಲಾಗುವುದಿಲ್ಲ. ಈ ಶಬ್ದ ದಾನ ಕೊಡುವವನ ಮತ್ತು ದಾನ ಪಡೆದುಕೊಳ್ಳುವವನ ಮನೋಭಾವದ ಬಗ್ಗೆ ವಿಸ್ತಾರವಾಗಿ ಹೇಳುತ್ತದೆ. ದಾನ ಕೊಡುವವನೊಂದಿಗೆ, "ನೀನು ಬಡವರಿಗೆ ಕೊಡುತ್ತಾ ಇರುವುದು ವಾಸ್ತವಿಕವಾಗಿ ನಿನಗೆ ಸೇರಿದುದಲ್ಲ." ಎಂದು ಹೇಳುತ್ತದೆ. ಒಂದು ಆರ್ಥಿಕ ವ್ಯವಸ್ಥೆಯಲ್ಲಿ ಕೆಲವರು ನಿರ್ಗತಿಕರಾಗಿ ಭಿಕ್ಷೆ ಬೇಡುವವರಾಗಿದ್ದರೆ ಆ ಆರ್ಥಿಕ ವ್ಯವಸ್ಥೆ ದೋಷಪೂರ್ಣವಾಗಿದೆ. ಆರೋಗ್ಯಕರವಾದ ಆರ್ಥಿಕ ವ್ಯವಸ್ಥೆಯಲ್ಲಿ ನಿರ್ಗತಿಕರಿರಬಾರದು. ಜೀವಿಸಲು ಭಿಕ್ಷೆ ಬೇಡುವ ಆವಶ್ಯಕತೆ ಇರಬಾರದು. ದಾನ ಪಡೆದುಕೊಳ್ಳುವವನಿಗೆ ಹೀಗೆ ಸಂದೇಶ ನೀಡಲಾಗುತ್ತಿದೆ: ನೀನು ದಾನವನ್ನು ಪಡೆದ ಬಗ್ಗೆ ಬೇಸರಗೊಳ್ಳಬೇಡ. ನೀನು ಪಡೆದುಕೊಂಡದ್ದು ಅಲ್ಲಾಹನು ನಿನಗೆ ಜೀವಿಸಲು ನೀಡಿದ ಮೂಲಭೂತ ಹಕ್ಕು ಪ್ರಕಾರವಾಗಿದೆ. ಆದುದರಿಂದ ನೀನು ದಾನವಾಗಿ ಪಡೆದುದು ನಿನ್ನದೇ ಹಕ್ಕನ್ನಾಗಿದೆ. ಆ ಹಕ್ಕು ನಿನಗೆ ದಾನ ನೀಡಿದವನ ಸ್ವಾಧೀನಕ್ಕೆ ಹೇಗೆಯೋ ವರ್ಗಾಯಿಸಲ್ಪಟ್ಟಿದ್ದಿತು.

ಇದರ ಮೊದಲು ವಿವರಿಸಿದ ಹಾಗೆ ದೇವನಿಂದ ನಿರ್ಮಿತ ನಿಯಮಗಳು ಮನುಷ್ಯನ ಸಹಜಗುಣಗಳಿಗೆ ಅನುಸಾರವಾಗಿರುತ್ತವೆ.

ಸಾಮಾಜಿಕ ಸಮತೋಲನವನ್ನು ಬಿಗಡಾಯಿಸಬಲ್ಲ ಆಜ್ಞೆಯನ್ನು ಅದನ್ನು ಸರಿಪಡಿಸುವ ಕ್ರಮದೊಂದಿಗೆ ಸೇರಿಸಲಾಗಿದೆ.

## ಕೃತಜ್ಞತೆ

ಮೇಲೆ ವಿವರಿಸಿದ ವಿಷಯಕ್ಕೆ ಸಂಬಂಧಿಸಿ ಕೆಲವರು ತಮಗೆ ದಾನ ನೀಡಿದವರಿಗೆ ಕೃತಜ್ಞತೆ ಸೂಚಿಸದೆ ಇರುವ ಸಾಧ್ಯತೆಗಳಿವೆ. ಅವರು ಅನ್ಯರಿಂದ ದೊರೆತ ಉಪಕಾರಗಳಿಗೆ ಕೃತಜ್ಞತೆ ಸೂಚಿಸದೆ, "ನಮಗೆ ದೊರೆತುದುದು ನಮಗೆ ದೊರೆಯಬೇಕಾದ ಹಕ್ಕಾಗಿದೆ. ನಾವು ಯಾವ ಕೃತಜ್ಞತೆಯನ್ನೂ ಅರ್ಪಿಸಬೇಕಾಗಿಲ್ಲ" ಎಂದು ಹೇಳುವ ಸಾಧ್ಯತೆಗಳಿವೆ. ಇಂತಹ ಮನೋಭಾವವನ್ನು ಬೆಳೆಸಲು ಬಿಟ್ಟರೆ ಅದರಿಂದ ಶಿಷ್ಟಾಚಾರಭರಿತ ಸಭ್ಯ ಸ್ವಭಾವಕ್ಕೆ ಕೊರತೆ ಉಂಟಾಗುವುದು.

ಉಪಕಾರಗಳನ್ನು ಗಳಿಸಿದವನು ತನಗೆ ದೊರೆತ ಅತ್ಯಂತ ಸಣ್ಣ ಉಪಕಾರಗಳಿಗೂ ಕೃತಜ್ಞತೆ ಸೂಚಿಸಬೇಕೆಂದು ಪವಿತ್ರ ಖುರ್‌ಆನ್ ಹೇಳಿದೆ. ಅಲ್ಲಾಹನು ಕೃತಘ್ನರನ್ನು ಪ್ರೀತಿಸುವುದಿಲ್ಲವೆಂದು ಸತ್ಯವಿಶ್ವಾಸಿಗಳೊಂದಿಗೆ ಪದೇ ಪದೇ ಹೇಳಲಾಗಿದೆ. ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ನೋಡಿರಿ:

**"ನೀವು ಕೃತಘ್ನರಾಗುವಿರಾದರೆ (ತಿಳಿದುಕೊಳ್ಳಿರಿ) ಅಲ್ಲಾಹನು ನಿಮ್ಮ ಆಶ್ರಯದಲ್ಲಿಲ್ಲದ ಸ್ವಯಂಪೂರ್ಣನಾಗಿದ್ದಾನೆ. ಅವನು ತನ್ನ ದಾಸರ ಕೃತಘ್ನತೆಯನ್ನು ಇಷ್ಟಪಡುವುದಿಲ್ಲ. ನೀವು ಕೃತಜ್ಞತೆ ಸೂಚಿಸಿದರೆ ನಿಮಗೆ ಅವನು ಅದನ್ನು ಇಷ್ಟಪಡುತ್ತಾನೆ. ಭಾರಹೊರುವ ಯಾವೊಬ್ಬನೇ ಆಗಲಿ ಇನ್ನೊಬ್ಬನ ಭಾರವನ್ನು ಹೊರಲಾರ. ಆ ಬಳಿಕ ನಿಮ್ಮ ಪ್ರಭುವಿನ ಬಳಿಗೆ ನಿಮ್ಮ ಮರಳಿಕೆಯಾಗಿದೆ. ಆಗ ನಿಮ್ಮ ಕೃತ್ಯಗಳ ಬಗ್ಗೆ ನಿಮಗೆ ವಿವರಿಸಿಕೊಡಲಾಗುವುದು. ನಿಮ್ಮ ಹೃದಯಗಳೊಳಗೆ ಬಚ್ಚಿಡಲಾದ ವಿಚಾರಗಳನ್ನೆಲ್ಲ ಅವನು ಚೆನ್ನಾಗಿ ಬಲ್ಲವನಾಗಿದ್ದಾನೆ"** (39:8).

ಇಸ್ಲಾಮಿನ ಪವಿತ್ರ ಸ್ಥಾಪಕರು(ಸ) ಕೃತಜ್ಞತೆ ಅರ್ಪಿಸುವ ಮನೋಭಾವವನ್ನು ಹೊಂದುವ ಬಗ್ಗೆ ಸತ್ಯವಿಶ್ವಾಸಿಗಳೊಂದಿಗೆ ಹೀಗೆ ಒತ್ತಿ ಹೇಳುತ್ತಾರೆ: **"ಯಾರು ಮನುಷ್ಯರಿಗೆ ಕೃತಜ್ಞತೆ ಅರ್ಪಿಸುವುದಿಲ್ಲವೋ ಅವರು ಅಲ್ಲಾಹನಿಗೂ ಕೃತಜ್ಞತೆ ಅರ್ಪಿಸುವವರಾಗಿರುವುದಿಲ್ಲ."**

(ತಿರ್ಮಿಧಿ)

ಇದರ ವ್ಯಾಖ್ಯಾನ ಹೀಗೆ: **ಒಬ್ಬನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವವನಾಗಿದ್ದರೂ ಅವನು ಮನುಷ್ಯರಿಗೆ ಕೃತಜ್ಞತೆ ಅರ್ಪಿಸದಿದ್ದರೆ ಅವನು ಅಲ್ಲಾಹನಿಗೆ ಅರ್ಪಿಸುವ ಕೃತಜ್ಞತೆ ಅಲ್ಲಾಹನಿಂದ ಸ್ವೀಕರಿಸಲ್ಪಡಲಾರದು. ಆದುದರಿಂದ ಮೇಲೆ ಉಲ್ಲೇಖಿಸಿದ** (ಪವಿತ್ರ ಖುರ್‌ಆನ್ 39:8) ವಚನ ಸಭ್ಯತೆಯನ್ನೂ ಕೃತಜ್ಞತೆಯನ್ನೂ ನಿರುತ್ಸಾಹಪಡಿಸುತ್ತದೆ ಎಂದು ಭಾವಿಸಬಾರದು. ಈ ವಚನದಲ್ಲಿ ದಾನ ಪಡೆಯುವವನಿಗೆ, ಅವನು ಯಾವುದೇ ಕೀಳರಿಮೆಗೆ ತುತ್ತಾಗಬಾರದೆಂದೂ ಅವನ ಗೌರವಕ್ಕೆ ಹಾನಿಯಾಗದೆಂದೂ ಸೂಕ್ಷ್ಮವಾಗಿ ಸೂಚಿಸಲಾಗಿದೆ. ಇದರಿಂದ ತಿಳಿಯುವುದೇನೆಂದರೆ, ಕೃತಜ್ಞತೆ ಸೂಚಿಸುವುದು ಕೃತಜ್ಞತೆ ಸೂಚಿಸುವವನ ಗೌರವಕ್ಕೆ ಹಾನಿಕರವಾಗದು; ಅದು ಅವನ ಗೌರವವನ್ನು ಹೆಚ್ಚಿಸುತ್ತದೆ.

ದಾನ ನೀಡುವವನು ಬೇರೆಯೇ ಒಂದು ಮನೋಭಾವ ಹೊಂದಬೇಕೆಂದು ಇಸ್ಲಾಮ್ ಆವಶ್ಯಪಡುತ್ತದೆ. ಕೃತಜ್ಞತೆಯನ್ನು ಪಡೆಯುವುದಕ್ಕೆ ತನಗೆ ಅರ್ಹತೆ ಇದೆ ಎಂದು ಭಾವಿಸುವುದು ಗೌರವಾರ್ಹವಲ್ಲವೆಂದು ಇಸ್ಲಾಮ್ ಗಣಿಸುತ್ತದೆ. ಇಂತಹ ಮನೋಭಾವ ಲೋಕದ ಎಲ್ಲ ಕಡೆಗಳಲ್ಲೂ ಇರುವ ನಾಗರಿಕರ ವರ್ತನೆಯ ಭಾಗವಾಗಿದೆ. ಆದರೆ ಈ ಸಾರ್ವತ್ರಿಕ ಶಿಷ್ಟಾಚಾರಕ್ಕೂ ಇಸ್ಲಾಮಿನ ಉಪದೇಶಗಳಿಗೂ ಮಧ್ಯೆ ಮೂಲಭೂತ ವ್ಯತ್ಯಾಸಗಳಿವೆ. ಇಸ್ಲಾಮ್ ದಾನ ನೀಡುವವರಿಗೆ, ಅವರು ಉನ್ನತವಾದೊಂದು ಗುರಿ ಸಾಧಿಸಲು (ದೇವನ ಸಂಪ್ರೀತಿ ಗಳಿಸಲು) ದಾನ ನೀಡಬೇಕೆಂದು ಹೇಳುತ್ತದೆ. ತಮ್ಮ ಸಹಜ ಭಾವನೆಗಳನ್ನು ತೃಪ್ತಿಪಡಿಸಲು ಅಥವಾ ಕೀರ್ತಿ ಗಳಿಸಲು ಉಪಕಾರ ಮಾಡುವ ಮನೋಭಾವ ಹೊಂದಬಾರದೆಂದು ಆವಶ್ಯಪಡುತ್ತದೆ. ಮನುಷ್ಯನು ದೇವನ ಪ್ರೀತಿ ಗಳಿಸಲು ಪರೋಪಕಾರ ಮಾಡಬೇಕೆಂದು ಇಸ್ಲಾಮ್ ಪದೇ ಪದೇ ಹೇಳುತ್ತದೆ.

ಇದರಿಂದ ತಿಳಿಯುವುದೇನೆಂದರೆ, ಒಬ್ಬ ಸತ್ಯವಿಶ್ವಾಸಿಯಾದ ಮುಸ್ಲಿಮನು ಯಾರಿಗಾದರೂ ದಾನವಾಗಿ ಏನನ್ನಾದರೂ ನೀಡುವಾಗ ಅದನ್ನು ತನ್ನ ಲಾಭಕ್ಕೋಸ್ಕರ ಅಥವಾ ಬೇರೆ ಯಾರದಾದರೂ ಲಾಭಕ್ಕೋಸ್ಕರ ನೀಡುವುದಿಲ್ಲ. ಅವನ ಉದ್ದೇಶ ತನ್ನದೆಲ್ಲವನ್ನೂ ತನಗೆ ನೀಡಿದ ದೇವನ ಸಂಪ್ರೀತಿಯನ್ನೂ ಅನುಗ್ರಹಗಳನ್ನೂ ಪಡೆಯುವುದಾಗಿರುತ್ತದೆ.

ಇಸ್ಲಾಮಿನ ಈ ತತ್ವಕ್ಕೆ ಅನುಸಾರವಾಗಿ, ಒಬ್ಬ ಮುಸ್ಲಿಮನು ಅನ್ಯರಿಗೋಸ್ಕರ ಖರ್ಚು ಮಾಡುವುದು ತನಗೆ ದೇವನು ನೀಡಿದ ಅನುಗ್ರಹಗಳಿಗೆ ಕೃತಜ್ಞತೆ ಅರ್ಪಿಸುವುದಕ್ಕೆ ಹೊರತು ಬೇರೆ ಉದ್ದೇಶದಿಂದಲ್ಲ. ಈ ಶ್ರೇಷ್ಠ ಮನೋಭಾವವನ್ನು ಪವಿತ್ರ ಖುರ್‌ಆನ್‌ನಲ್ಲಿ ಅದರ ಆರಂಭ ಕಾಲದಲ್ಲಿಯೇ ಅವತೀರ್ಣವಾದ ಈ ಕೆಳಗಿನ ವಚನದಲ್ಲಿ ಸತ್ಯ ವಿಶ್ವಾಸಿಗಳಲ್ಲಿ ಉಂಟುಮಾಡಲಾಗಿದೆ: **"ನಾವು ಅವರಿಗೆ ನೀಡಿದವುಗಳಿಂದ ಒಂದು ಭಾಗವನ್ನು ಅವರು ಖರ್ಚು ಮಾಡುತ್ತಾರೆ."** (2:4).

ಒಬ್ಬ ವಿಶ್ವಾಸಿ ಕೃತಜ್ಞತೆಯನ್ನು ಬಯಸದೆ ಇರುವುದು ಕೇವಲ ಶಿಷ್ಟಾಚಾರದ ಕಾರಣದಿಂದಲ್ಲ. ತನ್ನಿಂದ ಪ್ರಯೋಜನ ಪಡೆದವನು ಯಾರಿಗಾದರೂ ಕೃತಜ್ಞತೆ ಅರ್ಪಿಸಬೇಕಾದುದು ಅದು ಅಲ್ಲಾಹನಿಗೆ ಮಾತ್ರವಾಗಿದೆ; ತನಗಲ್ಲ ಎಂದು ಸತ್ಯವಿಶ್ವಾಸಿ ನಂಬುತ್ತಾನೆ. ಸತ್ಯವಿಶ್ವಾಸಿಗಳು ಯಾವುದಾದರೂ ಉಪಕಾರ ಮಾಡಿದರೆ ಅದಕ್ಕೆ ಅವರಿಗೆ ಕೃತಜ್ಞತೆ ಅರ್ಪಿಸುವಾಗ ಅವರಿಗೆ ಅದು ಮುಜುಗರವಾಗುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ಅವನ (ಅಲ್ಲಾಹನ) ಸಂಪ್ರೀತಿಗೋಸ್ಕರ ಅವರು ಬಡವರಿಗೂ ಅನಾಥರಿಗೂ ಕೈದಿಗಳಿಗೂ ಅನ್ನದಾನ ಮಾಡುತ್ತಾರೆ. (ಅವರು ಹೇಳುತ್ತಾರೆ) ಅಲ್ಲಾಹನ ಸಂತುಷ್ಟಿಗೋಸ್ಕರ ಮಾತ್ರ ನಾವು ನಿಮಗೆ ಆಹಾರ ನೀಡುತ್ತೇವೆ. ನಿಮ್ಮಿಂದ ಪ್ರತಿಫಲವನ್ನಾಗಲಿ, ಕೃತಜ್ಞತೆಯನ್ನಾಗಲಿ ನಾವು ಬಯಸುವುದಿಲ್ಲ."** (76:9–10)

ಕೇವಲ ಅನ್ನದಾನ ಮಾಡಿದರೆ ಸಾಕಾಗಲಾರದು. ನೀವು ಸ್ವತಃ ಹಸಿವು ಮತ್ತು ಕಷ್ಟವೇನೆಂದು ಮನವರಿಕೆ ಮಾಡಿಕೊಂಡು ಅದರ ಬಗ್ಗೆ ಸಹಾನುಭೂತಿ ಹೊಂದಿ ಅನ್ನದಾನ ಮಾಡಬೇಕು. ಅದಕ್ಕೆ ಪ್ರತಿಫಲವಾಗಿ ಪ್ರತ್ಯುಪಕಾರವನ್ನಾಗಲಿ, ಕೃತಜ್ಞತೆಯನ್ನಾಗಲಿ ಬಯಸಬಾರದು.

ಈ ವಚನದ ಸೌಂದರ್ಯ ಕಣ್ಣು ಕುಕ್ಕುವಂತಿದೆ. ಸತ್ಯವಿಶ್ವಾಸಿಗಳಿಗೆ ಉಪಕಾರಕ್ಕೆ ಪ್ರತಿಫಲಬೇಡವೆಂದು ಹೇಳಲು ಮಾತ್ರ ಕಲಿಸಿದ್ದರೆ ಮತ್ತು ವಿನಯವಂತರಂತೆ ವರ್ತಿಸಲು ಮಾತ್ರ ಕಲಿಸಿದ್ದರೆ ಅದರಿಂದ ಕಪಟವರ್ತನೆ ತಲೆದೋರಲು ಸಾಧ್ಯವಿತ್ತು. ನೋ ಥ್ಯಾಂಕ್ಸ್ (ಕೃತಜ್ಞತೆ ಅರ್ಪಣೆ ಬೇಕಾಗಿಲ್ಲ) ಎಂದು ಹೇಳುವಾಗ ನಮ್ಮಿಂದ ಉಪಕಾರ ಪಡೆದವನ ದೃಷ್ಟಿಯಲ್ಲಿ ನಮ್ಮ ಬಗ್ಗೆ ಉತ್ತಮ ಭಾವನೆ ಉಂಟಾಗುತ್ತದೆ.

ಇಸ್ಲಾಮಿನ ಉಪದೇಶ ಬಹಳ ಹೆಚ್ಚು ಉತ್ತಮವಾಗಿದೆ. ಉಪಕಾರ ಮಾಡುವವನಿಗೆ ಹೀಗೆ ನೆನಪಿಸಿಕೊಡಲಾಗಿದೆ: ಅವನು ತನ್ನ ಒಂದೇ ಸಾಮಗ್ರಿಯನ್ನು ಇಬ್ಬರಿಗೆ ಮಾರಾಟ ಮಾಡಲು ಸಾಧ್ಯವಿಲ್ಲ. ಒಂದು ಒಳ್ಳೆಯ ಕೆಲಸವನ್ನು ದೇವನ ಸಂಪ್ರೀತಿ ಗಳಿಸಲು ಮಾಡಬೇಕು ಅಥವಾ ಜನರ ಮೆಚ್ಚಿಗೆ ಗಳಿಸಲು ಮಾಡಬೇಕು. ಪವಿತ್ರ ಖುರ್‌ಆನಿನ ಪ್ರಕಾರ ಉಪಕಾರ ಮಾಡುವವನು ಎರಡು ಉದ್ದೇಶಗಳನ್ನು ಒಟ್ಟಿಗೆ ಈಡೇರಿಸಲಾರನು.

ಒಬ್ಬ ಸತ್ಯವಿಶ್ವಾಸಿ ಒಬ್ಬ ಬಡವನಿಗೆ ಉಪಕಾರ ಮಾಡುವಾಗ, **"ನನ್ನ ಉದ್ದೇಶ ದೇವನ ಸಂಪ್ರೀತಿ ಗಳಿಸುವುದಾಗಿದೆ"** ಎಂದು ಹೇಳುವಾಗ ಉಪಕಾರ ಪಡೆದವನು, **"ನನ್ನ ನಿಜವಾದ ಸಹಾಯಕ ದೇವನು"** ಎಂದು ಯೋಚಿಸುವನು. ಆದುದರಿಂದ ಅವನಿಗೆ ಉಪಕಾರ ಪಡೆಯುವಾಗ ಇರಬಹುದಾದ ಕೀಳರಿಮೆ ನಾಶವಾಗುವುದು.

## ಮಾಡಿದ ಉಪಕಾರಗಳಿಗೆ ಮಾನವರಿಂದ ಪ್ರತಿಫಲವಿಲ್ಲ

ಅನ್ಯರೊಂದಿಗೆ ಸಭ್ಯ ರೀತಿಯಲ್ಲಿ ವರ್ತಿಸುವುದು ನಾಗರಿಕ ಮೌಲ್ಯಗಳಿಗೆ ಅನುಸಾರವಾಗಿ ಮೇಲಿಂದ ಮೇಲೆ ಇರದೆ ವಾಸ್ತವಿಕವಾಗಿರಬೇಕೆಂದೂ ಅದು ದೇವ ವಿಶ್ವಾಸದಲ್ಲಿ ಬೇರೂರಿರಬೇಕೆಂದೂ ಇಸ್ಲಾಮ್ ಆವಶ್ಯಪಡುತ್ತದೆ. ಬಡವರಿಗೆ ನೀಡಿದ ದಾನಧರ್ಮ ಯಾವುದೇ ಪ್ರತಿಫಲವು ದೊರೆಯುವುದೆಂಬ ಉದ್ದೇಶದಿಂದಾಗಬಾರದು. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: **"ಮರಳಿ ಹೆಚ್ಚು ಪಡೆಯುವ ಉದ್ದೇಶದಿಂದ ಉಪಕಾರ ಮಾಡದಿರು."** (74 :7)

ಒಂದು ಉಪಕಾರವನ್ನು ಮಾಡಿದರೆ ಅದನ್ನು ಮರೆತುಬಿಡಬೇಕೆಂದು ಇಸ್ಲಾಮ್ ಹೇಳುತ್ತದೆ. ತಾನು ಮಾಡಿದ ಒಳ್ಳೆಯ ಕೆಲಸಗಳ ಬಗ್ಗೆ ಹೆಮ್ಮೆ ಕೊಚ್ಚಿಕೊಳ್ಳುವುದು ಮತ್ತು ಅದರ ಬಗ್ಗೆ ಚುಚ್ಚಿ ಹೇಳುವುದು ಸತ್ಕರ್ಮಿಗಳಿಗೆ ಆತ್ಮಹತ್ಯೆಯ ಹಾಗೆಯೂ ವಿನಾಶಕರವೂ ಆಗಿದೆ ಎಂದು ಇಸ್ಲಾಮ್ ಘೋಷಿಸುತ್ತದೆ. ಸತ್ಯವಿಶ್ವಾಸಿ ಈ ಕೆಳಗಿನ ಪವಿತ್ರ ಖುರ್‌ಆನ್ ವಚನಗಳ ಪ್ರಕಾರ ವರ್ತಿಸುತ್ತಾನೆ. ಅದು ಸರಿಯಾದ ನಡೆವಳಿಕೆ ಮತ್ತು ತಪ್ಪು ನಡೆವಳಿಕೆಗಳನ್ನು ಹೋಲಿಸಿ ಸಮಗ್ರವಾಗಿ ವಿವರಿಸುತ್ತದೆ.

**"ಅಲ್ಲಾಹನ ಮಾರ್ಗದಲ್ಲಿ ತಮ್ಮ ಧನವನ್ನು ವ್ಯಯಮಾಡುವವರ ಹೋಲಿಕೆ, ಒಂದು ಧಾನ್ಯ ಏಳು ತೆನೆಗಳನ್ನು ಹೊಂದಿ, ಪ್ರತಿಯೊಂದು ತೆನೆಯಲ್ಲಿ ನೂರು ಕಾಳುಗಳನ್ನು ಉತ್ಪಾದಿಸುವಂತಾಗಿದೆ. ಅಲ್ಲಾಹನು ತಾನಿಚ್ಛಿಸುವವರಿಗೆ (ಇದಕ್ಕಿಂತಲೂ) ಅಧಿಕಪಟ್ಟು ನೀಡುತ್ತಾನೆ. ಅಲ್ಲಾಹನು ಅತಿ ಉದಾರಿಯೂ ಸರ್ವಜ್ಞನೂ ಆಗಿದ್ದಾನೆ. ಅಲ್ಲಾಹನ ಮಾರ್ಗದಲ್ಲಿ ತಮ್ಮ ಧನವನ್ನು ಖರ್ಚುಮಾಡಿ, ಆ ಬಳಿಕ ಖರ್ಚು ಮಾಡಿದ್ದನ್ನು (ಅದನ್ನು ಪಡೆದವರೊಡನೆ) ಔದಾರ್ಯವಾಗಿ ಬಣ್ಣಿಸದೆಯೂ (ಅವರ ಮನಸ್ಸನ್ನು) ನೋಯಿಸದೆಯೂ ಇರುವವರಿಗೆ ಅವರ ಪ್ರಭುವಿನಿಂದ ಅವರ ಕೃತ್ಯಗಳ ಪ್ರತಿಫಲವಿದೆ. ಅವರಿಗೆ ಯಾವುದೇ ಭಯವಿಲ್ಲ. ಅವರು ದುಃಖಿಸಲಾರರು. ನಲ್ಮೆಯ ಮಾತು ಮತ್ತು ಕ್ಷಮೆ ಮನನೋಯಿಸುವ ದಾನಧರ್ಮಕ್ಕಿಂತ ಉತ್ತಮ. ಅಲ್ಲಾಹನು ಸ್ವಯಂಪೂರ್ಣನೂ ಕ್ಷಮಾಶೀಲನೂ ಆಗಿದ್ದಾನೆ. ಎಲೈ ವಿಶ್ವಾಸಿಗಳೇ, ಅಲ್ಲಾಹನನ್ನೂ ಅಂತ್ಯ ದಿನವನ್ನೂ ನಂಬದೆ, ಜನರಿಗೆ ತೋರಿಸಲಿಕ್ಕಾಗಿ ತನ್ನ ಧನವನ್ನು ಖರ್ಚು ಮಾಡುವವನ ಹಾಗೆ, ನೀವು (ಮಾಡಿದ) ಉಪಕಾರದ ಬಗ್ಗೆ ನೆನಪು ಹುಟ್ಟಿಸಿಯೂ ಮನನೋಯಿಸುವ ಮಾತನ್ನಾಡಿಯೂ ನಿಮ್ಮ ದಾನಧರ್ಮವನ್ನು ನಿಷ್ಫಲಗೊಳಿಸಬೇಡಿರಿ. ಅವನ ಉಪಮೆ ಮಣ್ಣಿನಿಂದ ಮುಚ್ಚಿದ ಒಂದು ನುಣುಪಾದ ಬಂಡೆಯ ಮೇಲೆ ಭಾರೀ ಮಳೆ ಬಿದ್ದಾಗ ಆ ಮಣ್ಣು ಕರಗಿ ಹೋಗಿ ಬರಿದಾದ ಬಂಡೆ ಬಾಕಿಯುಳಿಯುವ ತರವಾಗಿದೆ. ಅವರ ಸಂಪಾದನೆಯಿಂದ ಅವರಿಗೆ ಏನೂ ಕರಗತವಾಗದು. (ಇಂತಹ) ಅವಿಶ್ವಾಸಿಗಳಿಗೆ ಅಲ್ಲಾಹನು (ವಿಜಯದ) ಮಾರ್ಗದರ್ಶನ ಮಾಡುವುದಿಲ್ಲ."** (2 :262–265).

ಇನ್ನೊಂದು ವಚನ: **"ನಿನ್ನ ಸಹಾಯ ಯಾಚಿಸುವವನನ್ನು ಝುಂಕಿಸಬೇಡ."** (93 :11).

## ಭಿಕ್ಷೆ ಬೇಡುವುದು

ಭಿಕ್ಷೆ ಬೇಡುವವರೊಂದಿಗೆ ಸಹ ಮರ್ಯಾದೆಯಿಂದ ವರ್ತಿಸಬೇಕು. ಭಿಕ್ಷೆ ಬೇಡುವವನೊಂದಿಗೆ ಕಟುವಾಗಿ ಮಾತನಾಡಬಾರದು. ಭಿಕ್ಷೆ ಬೇಡುವುದನ್ನು ನಿರುತ್ಸಾಹಪಡಿಸಲಾಗಿದ್ದರೂ ತೀವ್ರವಾಗಿ ಆವಶ್ಯಕವಾದಾಗ ಬೇಡುವ ಹಕ್ಕನ್ನು ನೀಡಲಾಗಿದೆ. ಇಷ್ಟುಮಾತ್ರವಲ್ಲ, ಭಿಕ್ಷೆ ಬೇಡಲು ನಿರ್ಬಂಧಿತನಾದ ಬಡವನ ಆತ್ಮಾಭಿಮಾನಕ್ಕೆ ನೋವನ್ನುಂಟುಮಾಡಲು ಯಾರಿಗೂ ಅನುಮತಿ ನೀಡಿಲ್ಲ.

ಇಸ್ಲಾಮಿನ ಆರಂಭದ ಕಾಲದಲ್ಲಿ ಭಿಕ್ಷೆ ಬೇಡುವವರ ಆತ್ಮಾಭಿಮಾನವನ್ನು ಸಂಪೂರ್ಣವಾಗಿ ರಕ್ಷಿಸಲಾಗಿದ್ದರೂ ಬೇಡುವುದಕ್ಕಿಂತ ಬೇಡದಿರುವುದೇ ಉತ್ತಮವೆಂಬುದನ್ನು ಸಮಾಜವು ಮನವರಿಕೆ ಮಾಡಿಕೊಂಡಿತ್ತು. ಪವಿತ್ರ ಪೈಗಂಬರರು(ಸ) ಹೀಗೆ ಹೇಳಿದರು: **"ಕೊಡುವವನ ಕೈ ಪಡಕೊಳ್ಳುವವನ ಕೈಗಿಂತ ಉತ್ತಮವಾಗಿದೆ."** (ಬುಖಾರಿ).

ಇದರ ಪರಿಣಾಮವಾಗಿ ಬಹಳ ಸಂಖ್ಯೆಯಲ್ಲಿ ಮುಸ್ಲಿಮರು ಜೀವಿಸಲು ಬೇಡುವುದಕ್ಕಿಂತ ಉತ್ತಮ ಬಡತನದಲ್ಲಿ ಸಾಯುವುದೆಂದು ಆಯ್ಕೆ ಮಾಡಿದ್ದರು. ಇಂತಹ ಬಡವರ ಆವಶ್ಯಕತೆಗಳನ್ನು ಈಡೇರಿಸಲು ಸಮಾಜದ ಕರ್ತವ್ಯದ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"(ಈ ದಾನಧರ್ಮಗಳು) ಅಲ್ಲಾಹನ ಮಾರ್ಗದಲ್ಲಿ (ಕರ್ತವ್ಯ ನಿಷ್ಠರಾದ ಕಾರಣ ಇತರ ಕೆಲಸಗಳಿಂದ) ತಡೆದು ನಿಲ್ಲಿಸಲ್ಪಟ್ಟ ಬಡವರಿಗಾಗಿದೆ. ಅವರಿಗೆ (ಸ್ವತಂತ್ರವಾಗಿ) ಊರಿನಲ್ಲಿ ಸಂಚರಿಸಲು ಸಾಧ್ಯವಿಲ್ಲ. ಇತರರೊಡನೆ ಯಾಚಿಸದೆ ಅವರು ಸ್ವಾಭಿಮಾನವನ್ನು ಕಾಪಾಡುವುದರಿಂದ ನಿಜಸ್ಥಿತಿಯನ್ನು ಅರಿಯದವನು ಅವರನ್ನು ಧನಿಕನೆಂದು ತಿಳಿಯುತ್ತಾನೆ. ಅವರ ಚಹರೆಯಿಂದ ನೀನು ಅವರನ್ನು ತಿಳಿದುಕೊಳ್ಳಬಹುದು. ಅವರು ಜನರನ್ನು ಪೀಡಿಸಿ ಕಾಡಿಸಿ ಬೇಡುವುದಿಲ್ಲ.**

**ನೀವು ವ್ಯಯ ಮಾಡುವ ಉತ್ತಮ ಸಂಪತ್ತಿನ ಕುರಿತು ಅಲ್ಲಾಹನು ಚೆನ್ನಾಗಿ ತಿಳಿದಿರುತ್ತಾನೆ."** (2 :274).

ಈ ತತ್ವವನ್ನು ಇನ್ನೊಂದು ವಚನದಲ್ಲಿ ಹೀಗೆ ವಿವರಿಸಲಾಗಿದೆ: **"ಅಲ್ಲಾಹನು ಆ ಊರಿನವರಿಂದ ವಶಪಡಿಸಿ ತನ್ನ ಸಂದೇಶವಾಹಕನಿಗೆ ನೀಡಿದ ಸಂಪತ್ತು ಅಲ್ಲಾಹನಿಗೂ ಅವನ ಸಂದೇಶವಾಹಕನಿಗೂ ನಿಕಟ ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ದಾರಿಹೋಕರಿಗೂ ಆಗಿದೆ – ಅದು ನಿಮ್ಮಲ್ಲಿರುವ ಧನಿಕರ ಮಧ್ಯೆ ಚಲಾವಣೆ ಆಗಬಾರದು. ಪ್ರವಾದಿ ನಿಮಗೆ ಏನನ್ನು ನೀಡುತ್ತಾರೋ ಅದನ್ನು ನೀವು ಸ್ವೀಕರಿಸಿರಿ. ಯಾವುದನ್ನು ಅವರು ನಿಮಗೆ ನಿಷಿದ್ಧಗೊಳಿಸುತ್ತಾರೋ ಅದರಿಂದ ದೂರವಿರಿ. ಅಲ್ಲಾಹನಿಗೆ ಭಯಪಡಿರಿ. ಅಲ್ಲಾಹನು ಶಿಕ್ಷಿಸುವುದರಲ್ಲಿ ಕಠಿಣನೇ ಸರಿ."** (59 :8).

ಇಸ್ಲಾಮಿನ ಪವಿತ್ರ ಪೈಗಂಬರರು(ಸ) ಇದೇ ತತ್ವವನ್ನು ಒಂದು ಹದೀಸಿನಲ್ಲಿ ಹೀಗೆ ವಿವರಿಸಿದ್ದಾರೆ: ಹಕೀಮ್ ಇಬ್ನು ಹಿಝಾಮ್ ಹೀಗೆ ವರದಿ ಮಾಡಿದ್ದಾರೆ – ಹಝ್ರತ್ ಪೈಗಂಬರರು(ಸ) ಹೇಳಿದರು: **"ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. (ಎಂದರೆ ಧಾನಧರ್ಮ ಕೊಡುವವನು ಅದನ್ನು ಪಡೆದುಕೊಳ್ಳುವವನಿಗಿಂತ ಉತ್ತಮನಾಗಿದ್ದಾನೆ). ತನ್ನ ಅಧೀನವಿರುವವರಿಗೆ ಮೊದಲು ದಾನಧರ್ಮ ನೀಡಬೇಕು. ಉತ್ತಮ ದಾನಧರ್ಮ ಐಶ್ವರ್ಯವಂತನು (ತನ್ನ ಖರ್ಚು ವೆಚ್ಚಗಳನ್ನು ಕಳೆದು ಮಿಗತೆಯಾದ ಹಣದಿಂದ) ನೀಡುವ ದಾನಧರ್ಮವಾಗಿದೆ. ಯಾರು ಅನ್ಯರಿಂದ ಸಾಂಪತ್ತಿಕ ಸಹಾಯ ಬೇಡುವುದರಿಂದ ತನ್ನನ್ನು ತಡೆದಿಟ್ಟುಕೊಳ್ಳುತ್ತಾನೋ ಅವನಿಗೆ ಅಲ್ಲಾಹನು ಸಹಾಯ ನೀಡಿ ಅವನು ಬೇಡದಿರುವಂತೆ ಮಾಡುವನು. ಅವನನ್ನು ಅಲ್ಲಾಹನು ಸ್ವಯಂಪೂರ್ಣತೆ ತಲಪುವಂತೆ ಮಾಡುವನು."** (ಬುಖಾರಿ).

ನೀವು ನಿಮ್ಮ ಕೈ ಮೇಲ್ಗಡೆ ಇರುವಂತೆ ಮಾಡಬೇಕು. ನೀವು ದಾನ ನೀಡುವವರೂ ಪರರಿಗೆ ಸೇವೆ ಮಾಡುವವರೂ ಆಗಬೇಕು. ನೀವು ದಾನಧರ್ಮ ಪಡೆಯುವವರೂ ಉಪಕಾರ ಪಡೆಯುವವರೂ ಆಗಬಾರದು.

### ದಾನಧರ್ಮವಾಗಿ ಏನನ್ನು ಕೊಡಬೇಕು?

ನೀವು ಯಾರಿಗೆ ಕೊಡಬೇಕು ಎನ್ನುವುದರೊಂದಿಗೆ ನೀವು ಏನನ್ನು ಕೊಡಬೇಕು ಎನ್ನುವುದು ಸಹ ಮುಖ್ಯವಾಗಿದೆ. ನೀವು ಸ್ವತಃ ಅನ್ಯರಿಂದ ಪಡೆದುಕೊಳ್ಳಲು ಹಿಂಜರಿಯುವ ವಸ್ತುವನ್ನು ನೀವು ಬಡವರಿಗೆ ದಾನವಾಗಿ ಕೊಡುವಿರಾದರೆ ಅದು ಪವಿತ್ರ ಖುರ್‌ಆನ್ ಹೇಳುವ ಸದಖ (ದಾನಧರ್ಮ) ಆಗಲಾರದು. ಅದು ನಿರರ್ಥಕವಾದುದನ್ನು ಕಸದ ಬುಟ್ಟಿಗೆ ಎಸೆದಂತಾಗುವುದು. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ಎಲೈ ಸತ್ಯವಿಶ್ವಾಸಿಗಳೇ, ನೀವು ಸಂಪಾದಿಸಿಟ್ಟಿರುವ ಒಳ್ಳೆಯ ವಸ್ತುಗಳಿಂದ ಮತ್ತು ಭೂಮಿಯಿಂದ ನಾವು ನಿಮಗೆ ಉತ್ಪಾದಿಸಿ ಕೊಟ್ಟಿರುವ ವಸ್ತುಗಳಿಂದ (ಒಂದಂಶವನ್ನು ಅಲ್ಲಾಹನ ಮಾರ್ಗದಲ್ಲಿ) ಖರ್ಚು ಮಾಡಿರಿ. ಅದರಿಂದ ಹಾಳಾದುದನ್ನು ನೀಡಲಿಕ್ಕೆ ನೀವು ಬಯಸಬಾರದು. (ನಿಮಗೆ ಅದು ನೀಡಲ್ಪಡುವುದಾದರೆ) ಕಂಡೂ ಕಾಣದಂತಲ್ಲದೆ ನೀವು ಅದನ್ನು ಸ್ವೀಕರಿಸಲಾರಿರಷ್ಟೆ. ಅಲ್ಲಾಹನು ಸ್ವಯಂಪೂರ್ಣನೂ ಸ್ತುತ್ಯರ್ಹನೂ ಆಗಿದ್ದಾನೆ ಎಂದು ತಿಳಿದುಕೊಳ್ಳಿರಿ."** (2:268)

ಇನ್ನೊಂದು ವಚನ ಹೀಗಿದೆ: **"(ಬಲಿಯರ್ಪಿಸಿದ ಮೃಗಗಳ) ಮಾಂಸವಾಗಲಿ, ರಕ್ತವಾಗಲಿ ಅಲ್ಲಾಹನಿಗೆ ತಲಪುವುದಿಲ್ಲ. ಆದರೆ ನಿಮ್ಮ ಭಯಭಕ್ತಿ ಮಾತ್ರ ಅವನಿಗೆ ತಲಪುತ್ತದೆ. ಅಲ್ಲಾಹನು ನಿಮಗೆ ಮಾರ್ಗದರ್ಶನ ನೀಡಿದುದಕ್ಕಾಗಿ ನೀವು ಅವನನ್ನು ಕೊಂಡಾಡಲಿಕ್ಕೋಸ್ಕರ ಈ ರೀತಿಯಾಗಿ ಅವನು ಅವುಗಳನ್ನು ನಿಮ್ಮ ಅಧೀನಕ್ಕೊಳಪಡಿಸಿರುವನು. ಸತ್ಕರ್ಮ ನಿರತರಿಗೆ ನೀನು ಶುಭವಾರ್ತೆಯನ್ನು ಅರುಹು."** (22 :38).

### ಬಹಿರಂಗವಾಗಿ ಮತ್ತು ರಹಸ್ಯವಾಗಿ ಕೊಡುವುದು

ಸತ್ಯವಿಶ್ವಾಸಿಗಳು ಬಹಿರಂಗವಾಗಿ ಅಥವಾ ರಹಸ್ಯವಾಗಿ ಖರ್ಚು ಮಾಡಬಹುದು. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

**"ನೀವು (ಅಲ್ಲಾಹನಿಗಾಗಿ) ಖರ್ಚು ಮಾಡುವುದನ್ನು ಅಥವಾ ಹರಕೆ ಮಾಡುವುದನ್ನು ಖಂಡಿತವಾಗಿಯೂ ಅಲ್ಲಾಹನು ತಿಳಿಯುತ್ತಾನೆ (ಅದಕ್ಕೆ ಪ್ರತಿಫಲ ನೀಡುತ್ತಾನೆ). ಅಧರ್ಮಿಗಳಿಗೆ ಯಾರೂ ಸಹಾಯಕರಿಲ್ಲ. ನೀವು ದಾನಧರ್ಮವನ್ನು ಬಹಿರಂಗವಾಗಿ ನೀಡುವಿರಾದರೆ ಅದು ಉತ್ತಮವೇ ಸರಿ. ಅದನ್ನು ಗೋಪ್ಯವಾಗಿಟ್ಟು ಬಡವರಿಗೆ ನೀಡುವಿರಾದರೆ ನಿಮಗೆ ಅದು ಇನ್ನೂ ಉತ್ತಮ (ಅದರ ಫಲವಾಗಿ) ಅವನು (ಅಲ್ಲಾಹನು) ನಿಮ್ಮ ಅನೇಕ ಕೆಡುಕುಗಳನ್ನು ದೂರಮಾಡುವನು. ನೀವು ಮಾಡುವುದನ್ನು ಅಲ್ಲಾಹನು ತಿಳಿಯುತ್ತಾನೆ."** (2:271–272).

**(ಭಾಷಾಂತರ: ಎಮ್. ಉಬೈದುಲ್ಲಾ)**

# LOVE FOR HONESTY AND HATRED FOR DISHONESTY

# ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ

# ಇಸ್ಲಾಂ, ಧಾರ್ಮಿಕ ಸ್ವಾತಂತ್ರ್ಯ, ಸಾಮಾಜಿಕ ಸಾಮರಸ್ಯ




**ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ಸರ್ವೋನ್ನತ ನೇತಾರ, ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ಅಲ್ಲಾಹನು ಅವರಿಗೆ ಸರ್ವ ನೆರವುಗಳನ್ನು ನೀಡಲಿ) ಅವರು 2023 ಅಗಸ್ಟ್ ದಿನಾಂಕ 30ರಂದು ಜರ್ಮನ್ ದೇಶದ ಕರ್ಬೆನ್ ನಗರದಲ್ಲಿ ಸಾದಿಖ್ ಮಸ್‌ಜಿದ್ ಉದ್ಘಾಟನೆಯ ಸಂದರ್ಭದಲ್ಲಿ ಮಾಡಿದ ಭಾಷಣ.**

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಅಹ್ಮದಿಯಾ ಜಮಾಅತ್‌ನ ಪಂಚಮ ಖಲೀಫರು ಹೇಳಿದರು: ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತುಹೂ – ನಿಮ್ಮೆಲ್ಲರ ಮೇಲೆ ಅಲ್ಲಾಹನ ಶಾಂತಿ ಮತ್ತು ಅನುಗ್ರಹ ಸುರಿಸಲ್ಪಡಲಿ.

ದೀರ್ಘಕಾಲದ ನಂತರ ಈ ನಗರದಲ್ಲಿ ಒಂದು ಚಿಕ್ಕ ಮಸ್‌ಜಿದನ್ನು ನಿರ್ಮಿಸಲು ಸಾಧ್ಯವಾದುದಕ್ಕೆ ನಾವು ಸರ್ವಶಕ್ತನಾದ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇವೆ. ಈ ನಗರದ ಮೇಯರ್, ಕೌನ್ಸಿಲರ್‌ಗಳು ಮತ್ತು ಈ ಪ್ರದೇಶದ ನಿವಾಸಿಗಳು ಈ ಮಸ್‌ಜಿದ್ ನಿರ್ಮಾಣವನ್ನು ಮಾಡಲು ಸಹಕರಿಸಿದುದಕ್ಕಾಗಿ ನಾವು ಅವರಿಗೂ ಕೃತಜ್ಞರಾಗಿದ್ದೇವೆ. ನಾವು ಈ ಕೃತಜ್ಞತೆ ಪ್ರಕಟಿಸುವುದು ಕೇವಲ ಬಾಯಿಮಾತಿನಲ್ಲಿ ಅಲ್ಲ. ಅದು ನಮ್ಮ ಧಾರ್ಮಿಕ ಕರ್ತವ್ಯ ಸಹ ಆಗಿದೆ. ಇಸ್ಲಾಮ್ ಧರ್ಮದ ಪವಿತ್ರ ಸ್ಥಾಪಕರು ಹೀಗೆ ಹೇಳಿದ್ದಾರೆ; ನೀವು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವಾದರೆ ನೀವು ಸರ್ವಶಕ್ತನಾದ ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸುವವರಾಗಲಾರಿರಿ. ಆದುದರಿಂದ ನೀವು ನಮಗೆ ಮಸ್‌ಜಿದ್ ನಿರ್ಮಾಣ ಕಾರ್ಯದಲ್ಲಿ ನೆರವು ನೀಡಿದುದರಿಂದ ನಿಮಗೆ ಕೃತಜ್ಞತೆ ಸಲ್ಲಿಸುವುದು ನಮ್ಮ ಧಾರ್ಮಿಕ ಕರ್ತವ್ಯವಾಗಿದೆ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಮುಸ್ಲಿಮ್ ಜಮಾಅತಿಗೆ ಕರ್ಬೆನ್ ನಗರದಲ್ಲಿ ಒಂದು ಸುಂದರವಾದ ಚಿಕ್ಕ ಮಸ್‌ಜಿದ್ ದಯಪಾಲಿಸಲ್ಪಟ್ಟಿದೆ.

ಜರ್ಮನಿಯ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಅಧ್ಯಕ್ಷರಾದ ಅಬ್ದುಲ್ಲ ವಾಗಿಶೌಸರ್ ಈ ನಗರದ ಚರಿತ್ರೆ ವಿವರಿಸುವಾಗ ಹೇಳಿದರು – ಈ ಮಸ್‌ಜಿದ್ ನಗರದ ಮಧ್ಯಭಾಗದಲ್ಲಿ ನಿರ್ಮಿಸಲ್ಪಟ್ಟಿದೆ ಎಂದು. ಇದು ಬಹಳ ಒಳ್ಳೆಯದೇ ಆಗಿದೆ. ಏಕೆಂದರೆ ಈ ನಗರದಲ್ಲಿ ಲೌಕಿಕ ಕಾರ್ಯಕಲಾಪಗಳಿಗೆ ವಿವಿಧ ಅನುಕೂಲತೆಗಳಿರುವಾಗ ಧರ್ಮಾವಲಂಬಿಗಳಿಗೆ ಒಟ್ಟಿಗೆ ಸೇರಿಕೊಂಡು ದೇವನನ್ನು ಆರಾಧಿಸುವುದಕ್ಕಾಗಿ ಒಂದು ಕೇಂದ್ರವಿರುವುದು ಆವಶ್ಯಕವಾಗಿದೆ. ಅಂತಹ ಕೇಂದ್ರ ಮಸ್‌ಜಿದ್, ಚರ್ಚ್ ಅಥವಾ ಬೇರೆ ಆರಾಧನಾಲಯವಾಗಿರಬಹುದು. ಆದರೆ ಅಂತಹ ಕೇಂದ್ರಗಳಿರುವುದು ಆವಶ್ಯಕವಾಗಿದೆ. ಇಂತಹ ಆರಾಧನಾಲಯಗಳು ಒಂದು ಸ್ಥಳದಲ್ಲಿ ಸ್ಥಾಪಿಸಲ್ಪಡುವಾಗ ನಮಗೆ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ, ಧರ್ಮವು ಸಹಕಾರ ಮನೋಭಾವವನ್ನೂ ಸೌಹಾರ್ದವನ್ನೂ ಉಪದೇಶಿಸುತ್ತದೆ. ಯಾವುದೇ ಧರ್ಮ ಅಥವಾ ಯಾವುದೇ ಧರ್ಮದ ಸ್ಥಾಪಕ ಉಗ್ರವಾದವನ್ನು ಉಪದೇಶಿಸಿಲ್ಲ ಮತ್ತು ಧರ್ಮದ ಅನುಯಾಯಿಗಳಿಗೆ ಭಯೋತ್ಪಾದನೆಯ ಉಪದೇಶ ನೀಡಿಲ್ಲ.

ನಮ್ಮ ನಂಬಿಕೆ ಪ್ರಕಾರ ಸರ್ವಶಕ್ತನಾದ ದೇವನು ಎಲ್ಲ ಪ್ರವಾದಿಗಳನ್ನು ಈ ಉಪದೇಶದೊಂದಿಗೆ ಕಳುಹಿಸಿರುವನು: ಏಕ ದೇವನನ್ನು ಆರಾಧಿಸಬೇಕು ಮತ್ತು ಜನರು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿಕೊಡುತ್ತಾ ಶಾಂತಿ, ಪ್ರೀತಿ ಮತ್ತು ಭ್ರಾತೃಭಾವನೆಯನ್ನು ಸಮಾಜದಲ್ಲಿ ಬೆಳೆಸಬೇಕು.

ನಗರದ ಕೇಂದ್ರ ಭಾಗದಲ್ಲಿ ಮಸ್‌ಜಿದ್ ನಿರ್ಮಿಸುವ ಭಾಗ್ಯ ನಮಗೆ ದೊರಕಿರುವುದರಿಂದ ನಾವು ನಮ್ಮ ಮಸ್‌ಜಿದ್‌ಗೆ ಸಮೀಪವಾಗಿ ಸುತ್ತು ಮುತ್ತಲಿನ ಜನರಿಗೆ ಇಸ್ಲಾಮಿನ ನೈಜ ತತ್ವಗಳ ಬಗ್ಗೆ ಮಾಹಿತಿ ನೀಡಲು ಸಾಧ್ಯವಾಗುವುದು.

ಇಸ್ಲಾಮ್ ಧರ್ಮದ ಬಗ್ಗೆ ಕೆಲವು ತಪ್ಪು ಗ್ರಹಿಕೆಗಳು ತಪ್ಪಾಗಿ ವರ್ತಿಸುವ ಕೆಲವು ಮುಸ್ಲಿಮರ ಕಾರಣದಿಂದ ಉದ್ಭವಿಸಿವೆ. ದುರದೃಷ್ಟಕರವಾಗಿ ಬಹುತೇಕ ಮುಸ್ಲಿಮರು ಇಂತಹ ತಪ್ಪಾಗಿ ವರ್ತಿಸುವ ಮುಸ್ಲಿಮರ ತಪ್ಪಾದ ಕಲ್ಪನೆಗಳ ಪ್ರಕಾರ ವರ್ತಿಸುತ್ತಾರೆ. ನಾವು ಅವರನ್ನು ಪ್ರತಿರೋಧಿಸುತ್ತೇವೆ. ಪವಿತ್ರ ಖುರ್‌ಆನ್ ಮತ್ತು ಇಸ್ಲಾಮ್ ಧರ್ಮದ ಪವಿತ್ರ ಪೈಗಂಬರ್‌ರವರ ನಡೆವಳಿಕೆ ಮೂಲಕ ನಾವು ಇಸ್ಲಾಮ್ ಧರ್ಮದ ನೈಜ ತತ್ವಗಳು ಶಾಂತಿ, ಪ್ರೀತಿ, ವಾತ್ಸಲ್ಯ ಮತ್ತು ಸಾಮರಸ್ಯಗಳಾಗಿವೆ ಎಂದು ತೋರಿಸಿಕೊಡುತ್ತೇವೆ.

ಆರಂಭದಲ್ಲಿ ಕೆಲವರು ಈ ಮಸ್‌ಜಿದ್ ನಿರ್ಮಾಣವನ್ನು ವಿರೋಧಿಸಿದರೆಂದು ಜರ್ಮನಿಯ ಅಹ್ಮದಿಯಾ ಜಮಾಅತಿನ ಅಧ್ಯಕ್ಷರು ಹೇಳಿದರು. ಅವರ ವಿರೋಧ ಸ್ವಲ್ಪ ಮಟ್ಟಿಗೆ ಸರಿಯಾಗಿರಬಹುದು. ಏಕೆಂದರೆ ಅವರು ನಾನು ಹಿಂದೆ ಹೇಳಿದ ಹಾಗಿರುವ ಕೆಲವು ಮುಸ್ಲಿಮರ ವರ್ತನೆಯನ್ನು ವೀಕ್ಷಿಸಿರಬಹುದು. ಮುಸ್ಲಿಮರಲ್ಲಿ ತೀವ್ರವಾದವಿದೆ ಎಂದು ಅವರು ನೋಡಿರಬಹುದು. ಬಹುತೇಕ ಮುಸ್ಲಿಮ್ ದೇಶಗಳಲ್ಲಿ ಜನರ ಹಕ್ಕುಗಳು ಸಂರಕ್ಷಿಸಲ್ಪಡುವುದಿಲ್ಲ ಎಂದು ಅವರು ನೋಡಿರಬಹುದು. ಈ ಕಾರಣದಿಂದ ಅವರು ಆತಂಕ ಭರಿತರಾಗಿರಬಹುದು. ಆದರೆ ಅವರು ನಮ್ಮ ಮಸ್‌ಜಿದನ್ನು ನೋಡುವಾಗ, ಅಹ್ಮದಿ ಮುಸ್ಲಿಮರ ನಡೆವಳಿಕೆಗಳನ್ನು ಕಾಣುವಾಗ, ನೈಜ ಇಸ್ಲಾಮಿನ ಉದಾಹರಣೆಯನ್ನು ಕಾಣುವಾಗ ಅವರ ಸಂಶಯಗಳು ಮತ್ತು ಅನುಮಾನಗಳು ನಿವಾರಿಸಲ್ಪಡುವುವು.

ಈಗಾಗಲೇ ಇದು ಸಂಭವಿಸಿದೆ. ನಮ್ಮನ್ನು ವಿರೋಧಿಸುತ್ತಾ ಇದ್ದವರು ಈಗ ನಮ್ಮ ಸ್ನೇಹಿತರಾಗಿದ್ದಾರೆ ಮತ್ತು ವಿರೋಧವನ್ನು ತ್ಯಜಿಸಿದ್ದಾರೆ. ನಮ್ಮನ್ನು ವಿರೋಧಿಸುವವರ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಾ ಹೋಗುವುದು ಮತ್ತು ಅವರು ಮಸ್‌ಜಿದ್ ಮತ್ತು ಇಸ್ಲಾಮ್ ಧರ್ಮದ ಬಗ್ಗೆ ಅರಿತುಕೊಳ್ಳುವಾಗ ಇದು ಸಂಭವಿಸುವುದು. ಹಾಗೆ ನಮ್ಮ ಸ್ನೇಹಿತರ ವಲಯ ವರ್ಧಿಸುವುದೆಂದು ನಾವು ಪ್ರತೀಕ್ಷಿಸುತ್ತೇವೆ.

ಕೇಂದ್ರ ಸರಕಾರದ ಕಮಿಶನರ್ ಆಫ್ ಮೈನೋರಿಟೀಸ್ (ಅಲ್ಪಸಂಖ್ಯಾತರ ಆಯೋಗದ ಮುಖ್ಯಸ್ಥರು) ಇಲ್ಲಿ ಉಪಸ್ಥಿತರಿದ್ದಾರೆ. ಆಕೆ ಹೇಳಿದರು: ಧಾರ್ಮಿಕ ಸ್ವಾತಂತ್ರ್ಯ ಇರಲೇಬೇಕಾಗಿದೆ. ಜರ್ಮನ್ ನಿಯಮಗಳು ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯ ನೀಡುತ್ತಿದೆ. ನಾವು ಇದರ ಬಗ್ಗೆ ಸರಕಾರಕ್ಕೆ ಕೃತಜ್ಞರಾಗಿದ್ದೇವೆ. ಈ ಧಾರ್ಮಿಕ ಸ್ವಾತಂತ್ರ್ಯದ ಕಾರಣದಿಂದಲೇ ಅನೇಕ ಪಾಕಿಸ್ಥಾನಿ ಪ್ರಜೆಗಳು ಇಲ್ಲಿಗೆ ವಲಸೆ ಬಂದರು. ಅವರಿಗೆ ತಮ್ಮ ದೇಶದಲ್ಲಿ ಧಾರ್ಮಿಕ ಸ್ವಾತಂತ್ರ್ಯವಿರಲಿಲ್ಲ. ಇಲ್ಲಿ ಅವರು ಸರಕಾರದ ಸಂರಕ್ಷಣೆಯಲ್ಲಿ ಧಾರ್ಮಿಕ ಸ್ವಾತಂತ್ರ್ಯವನ್ನು ಸುಲಭವಾಗಿ ಗಳಿಸಿದ್ದಾರೆ.

ಆಕೆ ಹೇಳಿದ ಇನ್ನೊಂದು ಅಂಶ ಇದಾಗಿದೆ: ವಿವಿಧ ಧರ್ಮಗಳ ಅನುಯಾಯಿಗಳಾದ ಜನರು ಇಲ್ಲಿ ಪ್ರೀತಿ ಮತ್ತು ಸೌಹಾರ್ದದಿಂದ ಜೀವಿಸುತ್ತಿದ್ದಾರೆ. ನಾನು ಇದರ ಮೊದಲು ಹೇಳಿದ ಹಾಗೆ ಪ್ರತಿಯೊಂದು ಧರ್ಮದ ಸ್ಥಾಪಕರು ಹೀಗೆಯೇ ಉಪದೇಶಿಸುತ್ತಾ ಇದ್ದರು. ನಿಮ್ಮ ಸೃಷ್ಟಿಕರ್ತನನ್ನು ಆರಾಧಿಸಿರಿ, ಪರಸ್ಪರ ಹಕ್ಕುಗಳನ್ನು ಈಡೇರಿಸಿರಿ ಮತ್ತು ಪರಸ್ಪರ ಕರುಣೆಯಿಂದ ವರ್ತಿಸಿರಿ.

ಅನ್ಯರ ಹಕ್ಕುಗಳನ್ನು ಈಡೇರಿಸಿಕೊಡಬೇಕು ಎನ್ನುವುದು ಇಸ್ಲಾಮ್ ಧರ್ಮದ ಮೂಲ ತತ್ವಗಳಲ್ಲಿ ಒಂದಾಗಿದೆ. ಮುಸ್ಲಿಮರು ತಮ್ಮ ಹಕ್ಕುಗಳಿಗೋಸ್ಕರ ಮಾತ್ರ ಹೋರಾಡಬೇಕೆಂದು ಇಸ್ಲಾಮ್ ಹೇಳುವುದಿಲ್ಲ. ಹೋರಾಡಿ ಅನ್ಯರ ಹಕ್ಕುಗಳನ್ನೂ ಈಡೇರಿಸಿಕೊಡಬೇಕೆಂದು ಇಸ್ಲಾಮ್ ಆಜ್ಞಾಪಿಸುತ್ತದೆ. ನೀವು ಅನ್ಯರ ಹಕ್ಕುಗಳನ್ನು ಈಡೇರಿಸಲು ಪರಿಶ್ರಮಿಸುವಾಗ ಲೋಕದಲ್ಲಿ ಶಾಂತಿ ಸ್ಥಾಪಿಸಲ್ಪಡುವುದು ಮತ್ತು ಪ್ರೀತಿ ಸೌಹಾರ್ದಭರಿತ ಸಮಾಜವು ನಿರ್ಮಿಸಲ್ಪಡುವುದು. ಇಂದಿನ ಲೋಕದಲ್ಲಿ ಇದು ಅತ್ಯಂತ ಆವಶ್ಯಕವಾಗಿದೆ.

ಎರಡು ದಿನಗಳ ಹಿಂದೆ ನಾನು ಭೇಟಿಯಾದ ಮತ್ತು ಅವರ ಭಾಷಣವನ್ನು ಆಲಿಸಿದ ಪಾರ್ಲಿಮೆಂಟ್ ಸದಸ್ಯರು ಇಲ್ಲಿ ಉಪಸ್ಥಿತರಿದ್ದಾರೆ. ಈ ದಿನ ಅವರು ಕೆಲವು ಅಂಶಗಳನ್ನು ಹೊಸಬೆಳಕಿನಲ್ಲಿ ಪ್ರಕಟಿಸಿದ್ದಾರೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನೊಂದಿಗೆ ಅವರಿಗಿರುವ ಸಂಬಂಧವನ್ನು ಅವರು ವಿವರಿಸಿದ್ದಾರೆ. ನಾನು ಆ ಬಗ್ಗೆ ಅವರಿಗೆ ಕೃತಜ್ಞನಾಗಿದ್ದೇನೆ. ಅವರು ಹೇಳಿದರು: ಕೆಲವು ಸ್ಥಳಗಳಲ್ಲಿ ಧರ್ಮದ ಹೆಸರಲ್ಲಿ ರಕ್ತಪಾತವನ್ನು ಮಾಡಲಾಗುತ್ತಿದ್ದರೂ ಯಾವುದೇ ಧರ್ಮ ಎಂದೂ ರಕ್ತಪಾತವನ್ನು ಅನುಮತಿಸುವುದಿಲ್ಲ.

ಧರ್ಮ ನಮಗೆ ಅನ್ಯರಿಗೆ ಸೇವೆ ಸಲ್ಲಿಸಲು ಕಲಿಸುತ್ತದೆ. ಲೋಕದಲ್ಲಿ ಯಾವ ಪ್ರದೇಶಗಳಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪಿಸಲ್ಪಟ್ಟಿದೆಯೋ ಮತ್ತು ಎಲ್ಲೆಲ್ಲಾ ನಮ್ಮ ಜಮಾಅತಿಗೆ ಸೇರುತ್ತಿದ್ದಾರೋ, ವಿಶಿಷ್ಟವಾಗಿ ಆಫ್ರಿಕನ್ ದೇಶಗಳಲ್ಲಿ ಮತ್ತು ದಕ್ಷಿಣ ಅಮೇರಿಕದ ದೇಶಗಳಲ್ಲಿ ನಾವು ಅಹ್ಮದಿ ಮುಸ್ಲಿಮರಿಗೆ ಮಾತ್ರವಲ್ಲ, ಇತರ ಎಲ್ಲ ಧರ್ಮಗಳ ಜನರಿಗೆ ಸಹ ಸೇವೆ ಸಲ್ಲಿಸುತ್ತಿದ್ದೇವೆ. ನಾವು ಆಫ್ರಿಕದ ದೇಶಗಳಲ್ಲಿ ವಿದ್ಯಾಲಯಗಳನ್ನೂ ಆಸ್ಪತ್ರೆಗಳನ್ನೂ ಸ್ಥಾಪಿಸಿದ್ದೇವೆ. ನಾವು ಮಾದರಿ ಗ್ರಾಮಗಳನ್ನು ಸ್ಥಾಪಿಸಿದ್ದೇವೆ. ನಾವು ಜಲವಿತರಣೆ ವ್ಯವಸ್ಥೆ ಸಹ ಮಾಡುತ್ತಿದ್ದೇವೆ. ಇತರ ಕೆಲವು ದೇಶಗಳಲ್ಲೂ ನಾವು ಹೀಗೆ ಮಾಡುತ್ತಿದ್ದೇವೆ. ಅಹ್ಮದಿಯೇತರರಾದ ಕ್ರೈಸ್ತ ಮತ್ತು ಇತರ ಧರ್ಮಗಳ ಶೇಕಡಾ ಎಂಬತ್ತರಷ್ಟು ಜನರು ಈ ಸೇವೆಗಳಿಂದ ಲಾಭ ಪಡೆದುಕೊಳ್ಳುತ್ತಾರೆ.

ಈ ರೀತಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಧಾರ್ಮಿಕ ಸ್ವಾತಂತ್ರ್ಯವನ್ನು ಕೇವಲ ನಾಲಗೆಯಿಂದ ಪ್ರತಿಪಾದಿಸುವುದಿಲ್ಲ. ಅದು ತಮ್ಮ ಕಾರ್ಯಗಳ ಮೂಲಕ ಅನೇಕ ದೇಶಗಳಲ್ಲಿ ಧಾರ್ಮಿಕ ಸ್ವಾತಂತ್ರ್ಯವನ್ನು ಪ್ರಕಟಿಸುತ್ತಿದೆ. ಬಡ ದೇಶಗಳ ಬಡ ಜನರಿಗೆ ಅವರ ಧರ್ಮವನ್ನು ಪರಿಗಣಿಸದೆ ಜಲವಿತರಣೆಯನ್ನೂ ವಿದ್ಯಾಭ್ಯಾಸವನ್ನೂ ಆರೋಗ್ಯ ಸೇವೆಯನ್ನೂ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಒದಗಿಸುತ್ತಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಜೀವಿಸುವ ನಾವು ಶುದ್ಧ ಜಲದ ಲಭ್ಯತೆಯ ಮಹತ್ವವನ್ನು ಗಾಢವಾಗಿ ಚಿಂತಿಸುವುದಿಲ್ಲ. ನೀರನ್ನು ಜಾಗರೂಕತೆಯಿಂದ ಬಳಸಬೇಕೆಂದು ಸರಕಾರಗಳು ನೆನಪಿಸುತ್ತವೆ. ಲೋಕದಲ್ಲಿ ಎಷ್ಟೋ ದೇಶಗಳಲ್ಲಿ ಜನರಿಗೆ ಶುದ್ಧವಾದ ನೀರು ಲಭಿಸುವುದಿಲ್ಲ. ಅಲ್ಪ ಪ್ರಮಾಣದ ಶುದ್ಧ ನೀರು ಪಡೆಯಲು ಹಲವು ಕಿಲೋಮೀಟರ್‌ಗಳಷ್ಟು ದೂರ ಹೋಗಬೇಕಾಗುತ್ತದೆ. ಒಂದು ಬಕೆಟ್‌ನಲ್ಲಿ ನೀರು ತುಂಬಿಸಿ ತಲೆಯ ಮೇಲೆ ಹೊತ್ತುಕೊಂಡು ತರಬೇಕಾಗುತ್ತದೆ. ಇಂತಹ ದೇಶಗಳಲ್ಲಿ ನಮ್ಮ ಸ್ವಯಂ ಸೇವಕರು ದೂರ ದೂರವಿರುವ ಚಿಕ್ಕ ಗ್ರಾಮಗಳಿಗೆ ಹೋಗಿ ಜಲವಿತರಣೆಯ ವ್ಯವಸ್ಥೆ ಮಾಡುತ್ತಿದ್ದಾರೆ.

ಶುದ್ಧವಾದ ನಲ್ಲಿನೀರು ತಮ್ಮ ಮನೆಯ ಮುಂದೆ ಲಭಿಸಿದಾಗ ಅಲ್ಲಿನ ಜನರು ಅನುಭವಿಸುವ ಅಮಿತಾನಂದ ನೋಡಬೇಕಾದುದೇ ಆಗಿದೆ. ಪ್ರಾಯಶಃ ಲಾಟರಿ ಮೂಲಕ ಒಬ್ಬನು ಹಿರಿದಾದ ಒಂದು

ಸಂಖ್ಯೆಯ ಹಣ ಲಭಿಸಿದರೆ ಎಷ್ಟು ಸಂತೋಷ ಅನುಭವಿಸುತ್ತಾನೋ ಅದಕ್ಕಿಂತ ಮಿಗಿಲಾದ ಸಂತೋಷ ಈ ಜನರು ಅನುಭವಿಸುತ್ತಾರೆ.

ಅಹ್ಮದಿಯಾ ಮುಸ್ಲಿಮ್ ಸಂಘಟನೆ ಅನೇಕ ದೇಶಗಳಲ್ಲಿ ಇಂತಹ ಸೇವೆಗಳನ್ನು ಜನರಿಗೆ ಒದಗಿಸುತ್ತವೆ. ನಮ್ಮ ಜಮಾಅತ್ ಸ್ಥಾಪಿಸಲ್ಪಟ್ಟು ಮಸ್‌ಜಿದ್‌ಗಳು ನಿರ್ಮಿಸಲ್ಪಟ್ಟಾಗ ಇಂತಹ ಯೋಜನೆಗಳನ್ನು ಕಾರ್ಯಗತ ಗೊಳಿಸಲಾಗುತ್ತಿದೆ. ಅವುಗಳ ಲಾಭ ಪಡೆಯುವವನು ಅಹ್ಮದಿ ಮುಸ್ಲಿಮನಾಗಬೇಕೆಂಬ ಶರತ್ತೇನೂ ಇರುವುದಿಲ್ಲ. ನಾನು ಹಿಂದೆ ಹೇಳಿದ ಹಾಗೆ ಶೇಕಡಾ ಎಂಬತ್ತರಷ್ಟು ಅಹ್ಮದಿಯೇತರರು ನಮ್ಮ ಯೋಜನೆಗಳಿಂದ ಲಾಭ ಪಡೆಯುತ್ತಾರೆ.

ಅಫ್‌ಘಾನಿಸ್ಥಾನದ ಬಗ್ಗೆ ಪ್ರಸ್ತಾಪಿಸಲಾಗಿದೆ. ಅಲ್ಲಿ ಮಹಿಳೆಯರಿಗೆ ಅವರ ಹಕ್ಕುಗಳನ್ನು ನೀಡಲಾಗುತ್ತಿಲ್ಲ ಎಂದು ಹೇಳಲಾಗಿದೆ. ಇಸ್ಲಾಮ್ ಮತ್ತು ಪವಿತ್ರ ಖುರ್‌ಆನ್ ಮಹಿಳೆಯರ ಬಗ್ಗೆ, ಕರುಣೆಯಿಂದ ಅವರೊಂದಿಗೆ ವರ್ತಿಸಬೇಕೆಂದು ಆಜ್ಞಾಪಿಸಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: ಪುರುಷನಿಗೆ ಭಾವೋದ್ವೇಗಗಳು ಇರುವ ಹಾಗೆಯೇ ಮಹಿಳೆಯರಿಗೂ ಭಾವೋದ್ವೇಗಗಳಿವೆ. ಪುರುಷರಿಗೆ ಆಶಾಭಿಲಾಷೆಗಳು ಇರುವ ಹಾಗೆ ಮಹಿಳೆಯರಿಗೂ ಆಶಾಭಿಲಾಷೆಗಳಿವೆ. ಮಹಿಳೆಯರನ್ನು ಗೌರವದಿಂದ ಕಾಣಬೇಕೆಂದೂ ಅವರ ಆಶಾಭಿಲಾಷೆಗಳನ್ನು ಈಡೇರಿಸಿ ಕೊಡಬೇಕೆಂದೂ ಇಸ್ಲಾಮ್ ಉಪದೇಶಿಸಿದೆ. ಇಸ್ಲಾಮಿನ ಧಾರ್ಮಿಕ ತತ್ವಗಳಿಗೆ ಬದ್ಧರಾಗಿ ಪುರುಷರ ಹಾಗೆಯೇ ಮಹಿಳೆಯರೂ ತಮಗಿಷ್ಟವಿರುವ ಉದ್ಯೋಗವನ್ನು ಆಯ್ದುಕೊಳ್ಳಲು ಸ್ವತಂತ್ರರಾಗಿದ್ದಾರೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿಗೆ ಸೇರಿರುವ ಮಹಿಳೆಯರು ಡಾಕ್ಟರ್‌ಗಳಾಗಿದ್ದಾರೆ, ಇಂಜಿನಿಯರ್‌ಗಳಾಗಿದ್ದಾರೆ, ಆರ್ಥಿಕ ವಲಯದಲ್ಲೂ ಕೃಷಿ ವಲಯದಲ್ಲೂ ಉದ್ಯೋಗ ನಿರತರಾಗಿದ್ದಾರೆ. ಇಸ್ಲಾಮಿನಲ್ಲಿ ಮಹಿಳೆಯರಿಗೆ ಆಸ್ತಿಗಳನ್ನು ಹೊಂದುವ ಅಧಿಕಾರ ನೀಡಲಾಗಿದೆ ಮತ್ತು ಇತರ ಅನೇಕ ಹಕ್ಕುಗಳನ್ನು ನೀಡಲಾಗಿದೆ.

ಎಲ್ಲ ಧರ್ಮಗಳನ್ನು ಗೌರವಿಸುವುದು ಆವಶ್ಯಕವಾಗಿದೆ. ಎಲ್ಲ ಧರ್ಮಗಳು ಸಹಬಾಳ್ವೆ ಮಾಡಲು, ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು, ಸಮಾಜದಲ್ಲಿ ಪ್ರೀತಿ ವಿಶ್ವಾಸಗಳನ್ನು ಬೆಳೆಸಲು ಎಲ್ಲ ಧರ್ಮಗಳ ಜನರು ಪರಸ್ಪರ ಗೌರವಭಾವದಿಂದ ವರ್ತಿಸಬೇಕು. ಎಲ್ಲ ಧರ್ಮಗಳನ್ನು ಗೌರವಿಸಬೇಕೆಂದು ಇಸ್ಲಾಮ್ ಉಪದೇಶಿಸುತ್ತಿದೆ.

ಕೆಲವು ದಿವಸಗಳ ಹಿಂದೆ ಫ್ಲೋರ್‌ಸ್ಟಾಡ್‌ಟ್‌ನಲ್ಲಿ (FLORSTADT) ಮಸ್‌ಜಿದ್ ಉದ್ಘಾಟಿಸುವ ಸಂದರ್ಭದಲ್ಲಿ ನಾನು ಹೇಳಿದ್ದೆ, ಇಸ್ಲಾಮ್ ನಮ್ಮ ಮಸ್‌ಜಿದ್‌ಗಳನ್ನು ಸಂರಕ್ಷಿಸಬೇಕೆಂದು ಮಾತ್ರ ಉಪದೇಶಿಸುವುದಿಲ್ಲ. ಇಸ್ಲಾಮ್ ಹೀಗೆ ಉಪದೇಶಿಸುತ್ತಿದೆ: ಒಂದು ಚರ್ಚ್ ಆಕ್ರಮಿಸಲ್ಪಟ್ಟರೆ ಮುಸ್ಲಿಮರು ಅದನ್ನು ರಕ್ಷಿಸಬೇಕು. ಒಂದು ಯಹೂದಿ ದೇವಾಲಯ ಆಕ್ರಮಿಸಲ್ಪಟ್ಟರೆ ಅದನ್ನು ರಕ್ಷಿಸಬೇಕು. ಯಾವುದಾದರೂ ದೇವಾಲಯ ಆಕ್ರಮಿಸಲ್ಪಟ್ಟರೆ ಅದನ್ನು ಸಂರಕ್ಷಿಸಬೇಕು. ಆದುದರಿಂದ ಚರ್ಚ್‌ಗಳನ್ನು ಸುಡುವವರು ಮತ್ತು ಇಸ್ಲಾಮಿನ ಹೆಸರಲ್ಲಿ ಆಕ್ರಮಣ ಮಾಡುವವರು ಇಸ್ಲಾಮ್ ಧರ್ಮದ ಉಪದೇಶಗಳ ಪ್ರಕಾರ ವರ್ತಿಸುವುದಿಲ್ಲ. ನಾನು ಮುಂಚೆ ಹೇಳಿದ ಹಾಗೆ ಪವಿತ್ರ ಖುರ್‌ಆನಿನ ಉಪದೇಶಗಳು ಸಂಪೂರ್ಣವಾಗಿ ಅಂತಹ ವರ್ತನೆಗಳನ್ನು ವಿರೋಧಿಸುತ್ತದೆ. ಎಲ್ಲ ಧರ್ಮಗಳಿಗೆ ಸಂರಕ್ಷಣೆ ನೀಡಬೇಕೆಂದು ಇಸ್ಲಾಮ್ ನಮಗೆ ಉಪದೇಶಿಸುತ್ತದೆ.

ಮೇಯರ್‌ರವರು ಅತ್ಯುತ್ತಮ ವಿಷಯಗಳನ್ನು ಪ್ರಸ್ತಾಪಿಸಿರುವರು. ಈ ಸಮಾರಂಭದಲ್ಲಿ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಭಾಗವಹಿಸಿರುವ ಬಗ್ಗೆ ಪ್ರಸ್ತಾಪಿಸಿದರು. ಅಹ್ಮದಿಯಾ ಮುಸ್ಲಿಮ್ ಸಂಘಟನೆ ಇಲ್ಲಿನ ಸಮಾಜದೊಂದಿಗೆ ಭಾವೈಕ್ಯತೆ ಹೊಂದಿದೆ ಎಂದು ಇದು ಸೂಚಿಸುತ್ತದೆಯಲ್ಲದೆ ಎಲ್ಲರನ್ನೂ ಒಂದೇ ವೇದಿಕೆಯಲ್ಲಿ ಜಮಾಯಿಸುತ್ತಲೂ ಇದೆ. ನಾವು ಸಮಾಜದಲ್ಲಿ ಪರಸ್ಪರ ವಾತ್ಸಲ್ಯ ಮತ್ತು ಭ್ರಾತೃತ್ವವನ್ನು ಸ್ಥಾಪಿಸಲು ಇಚ್ಛಿಸುವುದರಿಂದಲೇ ಹೀಗೆ ಸಂಭವಿಸುತ್ತದೆ. ನಾವು ಸಹಜೀವಿಗಳಾದ ಕಾರಣ ನಾವು ಪರಸ್ಪರ ಗೌರವಭಾವದಿಂದ ವರ್ತಿಸುವುದು ಆವಶ್ಯಕವಾಗಿದೆ.

ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿ ಕೊಡಲು ಇದು ಸಹಾಯಕವಾಗಿದೆ ಮತ್ತು ಇಸ್ಲಾಮ್ ನಮಗೆ ಹಾಗೆ ಮಾಡಲು ಉಪದೇಶಿಸುತ್ತಿದೆ.

ಇಸ್ಲಾಮ್ ಮತ್ತು ಪವಿತ್ರ ಖುರ್‌ಆನ್ ನಮಗೆ ಎರಡು ಆಜ್ಞೆಗಳನ್ನು ನೀಡಿವೆ. ನಾವು ನಮ್ಮ ಸೃಷ್ಟಿಕರ್ತನಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸಬೇಕು ಎನ್ನುವುದು ಪ್ರಥಮ ಆಜ್ಞೆಯಾಗಿದೆ. ನಾವು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಬೇಕೆನ್ನುವುದು ಎರಡನೆಯ ಆಜ್ಞೆಯಾಗಿದೆ.

ಈ ಹಕ್ಕುಗಳನ್ನು ಈಡೇರಿಸುವುದು ಹೇಗೆ ಎನ್ನುವುದರ ಬಗ್ಗೆ ಇಸ್ಲಾಮ್ ನಮಗೆ ಕಲಿಸಿದೆ. ನಾವು ಈ ಹಕ್ಕುಗಳನ್ನು ಈಡೇರಿಸಲು ಕಠಿಣ ಪರಿಶ್ರಮ ಮಾಡುವುದಾದರೆ, ನಾವು ನಮ್ಮ ಹಕ್ಕುಗಳ ಬಗ್ಗೆ ಮಾತ್ರವಲ್ಲ ಅನ್ಯರ ಹಕ್ಕುಗಳ ಬಗ್ಗೆ ಕಾಳಜಿ ವಹಿಸುವುದಾದರೆ, ನಾವು ದೇಶದಲ್ಲಿ ಶಾಂತಿ, ಪ್ರೀತಿ ಮತ್ತು ವಾತ್ಸಲ್ಯಮಯ ಸಮಾಜವನ್ನು ನಿರ್ಮಿಸಬಲ್ಲೆವು. ಅಹ್ಮದಿಯಾ ಮುಸ್ಲಿಮ್ ಜಮಾಅತಿಗೆ ಸೇರಿದ ನಾವು ಈ ಹಕ್ಕುಗಳನ್ನು ಈಡೇರಿಸಲು ಪರಿಶ್ರಮಿಸುವವರೂ ನೈಜ ಶಾಂತಿಯನ್ನು ಸ್ಥಾಪಿಸುವವರೂ ಆಗಿದ್ದೇವೆ.

ನೆರೆಹೊರೆಯವರ ಹಕ್ಕುಗಳನ್ನು ಈಡೇರಿಸುವುದಕ್ಕೆ ಸಂಬಂಧಿಸಿ ಇಸ್ಲಾಮಿನ ಪವಿತ್ರ ಪೈಗಂಬರರು ಎಷ್ಟು ಒತ್ತಿ ಹೇಳಿದರೆಂದರೆ ಅವರ ಶಿಷ್ಯರು ಯೋಚಿಸಿದರು – ಪ್ರಾಯಶಃ ನೆರೆಹೊರೆಯವರು ತಮ್ಮ ಉತ್ತರಾಧಿಗಳಲ್ಲಿ ಸೇರುವರೋ ಎಂದು. ಇಸ್ಲಾಮ್ ಧರ್ಮ ನೆರೆಹೊರೆಯವರ ಹಕ್ಕುಗಳ ಬಗ್ಗೆ ಬಹಳ ಒತ್ತಿ ಹೇಳಿದೆ.

ಈ ನೈತಿಕ ಮೌಲ್ಯಗಳಿಂದ ಪ್ರೀತಿ, ವಾತ್ಸಲ್ಯ, ಶಾಂತಿ ಮತ್ತು ಭ್ರಾತೃತ್ವ ವರ್ಧಿಸುತ್ತವೆ ಮತ್ತು ಹರಡುತ್ತವೆ. ಈ ಮೌಲ್ಯಗಳ ಸ್ಥಾಪನೆಗೋಸ್ಕರ ನಾವು ಲೋಕದಾದ್ಯಂತ ಕಾರ್ಯಪ್ರವೃತರಾಗಿದ್ದೇವೆ. ಇದೇ ಕಾರಣದಿಂದ ನಾವು ಅವರ ಧರ್ಮವನ್ನು ಪರಿಗಣಿಸದೆ ಎಲ್ಲರೊಂದಿಗೆ ಸಂಬಂಧ ಸ್ಥಾಪಿಸಲು ಪ್ರಯತ್ನಿಸುತ್ತಿದ್ದೇವೆ.

ಲೋಕದಲ್ಲಿ ಶಾಂತಿ ಮತ್ತು ನೈಜ ಭ್ರಾತೃತ್ವ ಈ ಉಪದೇಶಗಳ ಅನುಸರಣೆಯಿಂದ ಮಾತ್ರ ಸಾಧ್ಯವಾಗುವುದು. ಇಲ್ಲಿರುವ ಅಹ್ಮದಿ ಮುಸ್ಲಿಮರು ಮತ್ತು ಈ ಮಸ್‌ಜಿದ್ ನೈಜ ಇಸ್ಲಾಮ್ ತತ್ವಗಳನ್ನು ಹರಡುತ್ತಾ ಮುಂದುವರಿಯುವುದು ಎಂದು ನಾನು ಭರವಸೆಪಡುತ್ತೇನೆ.

**21ನೇ ಪುಟಕ್ಕೆ**

# ದೇವಭಕ್ತಿ – ಉಪವಾಸದ ನಿಜವಾದ ತಿರುಳು

**ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರು ಯು.ಕೆ.ಯ ಇಸ್ಲಾಮಾಬಾದ್‌ನ 'ಮಸ್ಜಿದ್ ಮುಬಾರಕ್'ನಿಂದ 22-04-2022 ರಂದು ನೀಡಿದ ಜುಮುಅ ಖುತ್‌ಬ**

ಅಲ್ಲಾಹನ ಅನುಗ್ರಹದಿಂದ ನಾವೀಗ ರಮಝಾನ್ ಮಾಸದಿಂದ ದಾಟಿಹೋಗುತ್ತಿದ್ದೇವೆ. ಪ್ರತಿಯೊಬ್ಬ ಸತ್ಯವಿಶ್ವಾಸಿ ಈ ತಿಂಗಳ ಅನುಗ್ರಹಗಳಿಂದ ಸಾಧ್ಯವಾದಷ್ಟು ಅಧಿಕ ಪಾಲು ಪಡೆಯಲು ಪ್ರಯತ್ನಿಸುತ್ತಾನೆ.

ಅಲ್ಲಾಹನು ಉಪವಾಸ ಕಡ್ಡಾಯವೆಂಬ ಆದೇಶದ ಆರಂಭದಲ್ಲೇ ಉಪವಾಸದ ಉದ್ದೇಶವನ್ನು ಹೇಳಿರುವನು. ಅದೇನೆಂದರೆ, ನಾವು ದೇವಭಕ್ತಿಯನ್ನು ಕೈಗೊಳ್ಳಲಿಕ್ಕಾಗಿ ನಮ್ಮ ಮೇಲೆ ಉಪವಾಸವನ್ನು ಕಡ್ಡಾಯಗೊಳಿಸಲಾಗಿದೆ. ನಾವು ಉಪವಾಸದೊಂದಿಗೆ ನಮ್ಮ ದೇವಭಕ್ತಿಯ ಮಟ್ಟವನ್ನು ಕೂಡ ಉನ್ನತಗೊಳಿಸುವಾಗ ಮತ್ತು ಪ್ರತಿಯೊಂದು ರೀತಿಯ ಕೆಡುಕುಗಳಿಂದ ರಕ್ಷಣೆ ಪಡೆಯಲಿಕ್ಕಾಗಿ ಅಲ್ಲಾಹನ ಅಭಯದಲ್ಲಿ ಇರಲು ಪ್ರಯತ್ನಿಸುವಾಗ ಮಾತ್ರವೇ ನಮಗೆ ಉಪವಾಸದ ಅನುಗ್ರಹದಿಂದ ಪಾಲು ಪಡೆಯಲು ಸಾಧ್ಯ.

ಉಪವಾಸ ಒಂದು ಗುರಾಣಿಯಾಗಿದೆ (ರಕ್ಷಾಕವಚವಾಗಿದೆ) ಎಂದು ಹಝ್ರತ್ ಪೈಗಂಬರ್[ಸ] ಹೇಳಿದ್ದರು. ನಾಮ ಮಾತ್ರದ ಉಪವಾಸವನ್ನು ಇರಿಸುವುದು ನಮಗೆ ಸಾಕೇ? ಸಹರೀ ಮತ್ತು ಇಫ್ತಾರ್ ಮಾಡುವುದೇ ಸಾಕೇ? ಸಹರೀ ಮತ್ತು ಇಫ್ತಾರ್ ಮಾಡಿದ ಮಾತ್ರಕ್ಕೆ ನಾವು ಉಪವಾಸದ ಗುರಾಣಿಯ ರಕ್ಷಣೆಯಲ್ಲಿ ಬರುವೆವೋ? ಇಲ್ಲ. ಬದಲಾಗಿ ಉಪವಾಸಕ್ಕೆ ಸಂಬಂಧಿಸಿದ ಕಾರ್ಯಗಳ ಕಡೆಗೂ ಗಮನಹರಿಸಬೇಕಾಗಿದೆ. ನಾನು ಈಗ ಹೇಳಿದಂತೆ ದೇವಭಕ್ತಿ ಕೈಗೊಳ್ಳುವುದು ಮುಖ್ಯ ಉದ್ದೇಶವಾಗಿದೆ ಎಂದು ಅಲ್ಲಾಹನು ಹೇಳಿರುವನು. ಆದ್ದರಿಂದ ನಾವು ನಮ್ಮ ಉಪವಾಸಗಳನ್ನು ಮತ್ತು ನಮ್ಮ ರಮಝಾನನ್ನು ಅಲ್ಲಾಹನಿಗಾಗಿ, ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ, ಯಾವುದರ ಪ್ರತಿಫಲ ಸ್ವತಃ ಅಲ್ಲಾಹನಾಗಿರುವನೋ ಅದನ್ನು ಪಡೆಯುವಂತಾಗಬೇಕಾದರೆ, ಅಲ್ಲಾಹನು ನಮ್ಮಿಂದ ಬಯಸುವಂತಹ ಮಟ್ಟಕ್ಕೆ ಉಪವಾಸವನ್ನು ತರಬೇಕಾಗುವುದು. ಅದಕ್ಕಾಗಿಯೇ ಉಪವಾಸವನ್ನು ಕಡ್ಡಾಯಗೊಳಿಸಲಾಗಿದೆ.

ನಾವು ನಮ್ಮನ್ನು ಸ್ವತಃ ಮೂಅ್‌ಮಿನ್ ಮತ್ತು ಮುಸ್ಲಿಂ ಎಂದು ಹೇಳುತ್ತೇವೆ. ನಾವು ಹಝ್ರತ್ ಪೈಗಂಬರರ[ಸ] ನಿರ್ದೇಶನಗಳನ್ನು ಪಾಲಿಸುತ್ತಾ, ಹಝ್ರತ್ ಪೈಗಂಬರರೊಂದಿಗೆ[ಸ] ನಮಗೆ ಇರುವ ವಿಶ್ವಾಸವನ್ನು ಪರಿಪೂರ್ಣಗೊಳಿಸುತ್ತಾ, ಹಝ್ರತ್ ಪೈಗಂಬರರ[ಸ] ಭವಿಷ್ಯವಾಣಿ ಪ್ರಕಾರ ಬರಬೇಕಾದ ಮಸೀಹ್ ಮತ್ತು ಮಹ್‌ದಿಯು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್‌ರ[ಅ] ರೂಪದಲ್ಲಿ ಬಂದಿರುವರು ಎಂಬ ಸಂಗತಿಯನ್ನು ಕೂಡ ನಾವು ಅಂಗೀಕರಿಸಿದ್ದೇವೆ. ಈಗ ಇಸ್ಲಾಂ ಧರ್ಮದ ಪುನರುಜ್ಜೀವನದ ಕೆಲಸ ಅಲ್ಲಾಹನ ವಾಗ್ದಾನದ ಪ್ರಕಾರ ವಾಗ್ದತ್ತ ಮಸೀಹ್‌ರ[ಅ] ಕೈಗಳಿಂದಲೇ ನಡೆಯುವುದು ಎಂದು ನಂಬಿಕೊಂಡಿದ್ದೇವೆ. ಆದ್ದರಿಂದ ನಮ್ಮೊಳಗೆ ಇಸ್ಲಾಮಿನ ನೈಜವಾದ ಚೈತನ್ಯವನ್ನು ನೆಲೆನಿಲ್ಲಿಸಲಿಕ್ಕಾಗಿ ಹಝ್ರತ್ ಮಸೀಹ್ ಮೌಊದ್‌ರಿಂದಲೇ[ಅ] ಮಾರ್ಗದರ್ಶನ ಪಡೆಯುವುದು ನಮ್ಮ ಕರ್ತವ್ಯವಾಗಿದೆ.

ದೇವಭಕ್ತಿಯ ಬಗ್ಗೆ ಹಝ್ರತ್ ಮಸೀಹ್ ಮೌಊದ್[ಅ] ಏನು ಹೇಳಿರುವರು ಎಂಬುದನ್ನು ನೋಡುವಾಗ ದೇವಭಕ್ತಿ ಏನು ಎಂಬ ಈ ವಿಷಯದ ಕುರಿತು ಕೂಡ ನಮಗೆ ಅರಿವು ಲಭಿಸುತ್ತದೆ. ನಾವು ಮುಸ್ಲಿಮರಾಗಿದ್ದೇವೆ, ನಾವು ಸತ್ಯವಿಶ್ವಾಸಿಗಳಲ್ಲಿ ಸೇರಿದವರಾಗಿದ್ದೇವೆ ಎಂದು ನಾವು ವಾದಿಸುತ್ತೇವೆ. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ:

"ಹಾಗಾದರೆ ಕೇಳಿರಿ, ಸತ್ಯವಿಶ್ವಾಸದ ಮೊದಲ ಹಂತವು ಮನುಷ್ಯನು ದೇವಭಕ್ತಿಯನ್ನು ಕೈಗೊಳ್ಳಬೇಕು ಎಂದಾಗಿದೆ. ತಖ್ವಾ ಎಂದರೇನು? ಇದರ ಉತ್ತರವೇನೆಂದರೆ, ಪ್ರತಿಯೊಂದು ರೀತಿಯ ಕೆಡುಕುಗಳಿಂದ ಸ್ವತಃ ರಕ್ಷಣೆ ಹೊಂದುವುದು. ಇದು ಒಂದು ಮಾಮೂಲಿ ಸಂಗತಿಯಲ್ಲವೆಂದು ಪರಿಶೋಧನೆ ನಡೆಸಿದರೆ ನಮಗೆ ಗೊತ್ತಾಗುವುದು. ನಾವು ತಖ್ವಾದ ಹಕ್ಕನ್ನು ಈಡೇರಿಸುತ್ತಾ ಅಲ್ಲಾಹನಿಗೆ ಸಲ್ಲಬೇಕಾದ ಕರ್ತವ್ಯಗಳನ್ನು ಈಡೇರಿಸುತ್ತಿದ್ದೇವೆಯೇ?, ನಾವು ದೇವಭಕ್ತಿಯಿಂದ ನಡೆಯುತ್ತಾ ಅಲ್ಲಾಹನ ಸೃಷ್ಟಿಗಳಿಗೆ ಸಲ್ಲಿಸಬೇಕಾದ ಹಕ್ಕುಗಳನ್ನು ಈಡೇರಿಸುತ್ತಿದ್ದೇವೆಯೇ ಎಂಬ ಸಂಗತಿಯು ನಾವು ನಮ್ಮ ಮೌಲ್ಯಮಾಪನ ಮಾಡಿದರೆ ಗೊತ್ತಾಗುವುದು. ಈ ಸಂಗತಿಗಳ ಪರಿಪೂರ್ಣ ಅರಿವು ಲಭಿಸುವ ತನಕ ತಖ್ವಾ ಏನು ಎಂಬುದನ್ನು ತಿಳಿಯಲು ಸಾಧ್ಯವಲ್ಲ. ತಿಳುವಳಿಕೆ ಗಳಿಸುವುದು ಅವಶ್ಯಕ. ಏಕೆಂದರೆ ಅರಿವು ಇಲ್ಲದೆ ಯಾವುದೇ ಸಂಗತಿಯನ್ನು ಗಳಿಸಲು ಸಾಧ್ಯವೇ ಇಲ್ಲ. ಒಬ್ಬ ವ್ಯಕ್ತಿಗೆ ಅದನ್ನು ಪಡೆಯಲು ಸಾಧ್ಯವಲ್ಲ."

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: "ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳೇನು? ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳೇನು? ಯಾವ ಸಂಗತಿಗಳನ್ನು ಮಾಡುವುದರಿಂದ ಅಲ್ಲಾಹನು ತಡೆದಿದ್ದಾನೆ? ಯಾವ ಸಂಗತಿಗಳನ್ನು ಮಾಡಲು ಅಲ್ಲಾಹನು ಆದೇಶಿಸಿದ್ದಾನೆ ಎಂಬ ಅರಿವು ಲಭಿಸಲಿಕ್ಕಾಗಿ ನೀವು ಪದೇ ಪದೇ ಪವಿತ್ರ ಖುರ್‌ಆನನ್ನು ಓದಿರಿ. ಪವಿತ್ರ ಖುರ್‌ಆನನ್ನು ಪಠಿಸುವಾಗ ಕೆಟ್ಟ ಕೆಲಸಗಳ ವಿವರವನ್ನು ಬರೆಯುತ್ತಾ ಹೋಗಬೇಕು. ಅನಂತರ ಅಲ್ಲಾಹನ ಕೃಪೆ ಮತ್ತು ಸಹಾಯದಿಂದ ಆ ಕೆಡುಕುಗಳಿಂದ ರಕ್ಷಣೆ ಪಡೆಯಲು ಪ್ರಯತ್ನಿಸಬೇಕು."

ಈ ರಮಝಾನಿನಲ್ಲಿ ನಾವು ಪವಿತ್ರ ಖುರ್‌ಆನ್ ಸಹ ಓದುತ್ತಿದ್ದೇವೆ. ಸಾಮಾನ್ಯವಾಗಿ ಪವಿತ್ರ ಖುರ್‌ಆನ್ ಪಾರಾಯಣ ಮಾಡುವುದರ ಕಡೆಗೆ ಹೆಚ್ಚಿನ ಗಮನವಿರುತ್ತದೆ. ಆಗ ಅದರಲ್ಲಿ ಮಾಡಲು ಮತ್ತು ಮಾಡದಿರಲು ಹೇಳಿದ ಸಂಗತಿಗಳ ಕಡೆಗೆ ಗಮನಿಸಬೇಕು ಎಂಬ ಯೋಚನೆಯೊಂದಿಗೆ ಓದಬೇಕು. ಕೆಟ್ಟ ಕೆಲಸಗಳಿಂದ ತಡೆದು ನಿಲ್ಲಲು ಮತ್ತು ಒಳ್ಳೆಯ ಕೆಲಸಗಳನ್ನು ಮಾಡಲು

ಪ್ರಯತ್ನಿಸಬೇಕು. ಪವಿತ್ರ ಖುರ್‌ಆನಿನ ಆರಂಭದಿಂದ ಕೊನೆಯ ತನಕ ಮಾಡಬೇಕಾದ ಮತ್ತು ಮಾಡಬಾರದ ಸಂಗತಿಗಳ ಹಾಗೂ ಅಲ್ಲಾಹನ ಆದೇಶಗಳ ವಿವರಣೆ ಇದೆ. ಆದ್ದರಿಂದ ನಾವು ಈ ಸಂಗತಿಗಳನ್ನು ನೋಡಬೇಕಾಗಿದೆ. ಅವುಗಳ ಬಗ್ಗೆ ಆಲೋಚಿಸಬೇಕು ಮತ್ತು ಅವುಗಳ ಪ್ರಕಾರ ನಡೆಯಬೇಕು. ಇದೇ ಒಬ್ಬ ಸತ್ಯವಿಶ್ವಾಸಿಯ ಲಕ್ಷಣವಾಗಿದೆ.

ಮನುಷ್ಯನು ಮುತ್ತಖಿ (ಧರ್ಮನಿಷ್ಠ) ಆಗುವ ತನಕ ಆತನ ಆರಾಧನೆಗಳು ಮತ್ತು ದುಆಗಳು ಸ್ವೀಕಾರದ ರೂಪವನ್ನು ಪಡೆಯುವುದಿಲ್ಲವೆಂಬ ಸಂಗತಿಯನ್ನು ಹಝ್ರತ್ ಮಸೀಹ್ ಮೌಊದ್[ಅ] ಒತ್ತಿ ಹೇಳಿರುವರು. ಏಕೆಂದರೆ, **ಇನ್ನಮಾ ಯತಖಬ್ಬಲುಲ್ಲಾಹು ಮಿನಲ್ ಮುತ್ತಖೀನ್** ಎಂದು ಅಲ್ಲಾಹನು ಹೇಳಿರುವನು. (ಪವಿತ್ರ ಖುರ್‌ಆನ್ 5:28) ಎಂದರೆ, ಅಲ್ಲಾಹನು ಮುತ್ತಖಿಗಳ ಆರಾಧನೆಗಳನ್ನು ಮಾತ್ರ ಸ್ವೀಕಾರ ಮಾಡುತ್ತಾನೆ. ಇದು ಸತ್ಯವಾದ ಸಂಗತಿಯಾಗಿದೆ. ನಮಾಝ್ ಮತ್ತು ಉಪವಾಸ ಕೂಡ ದೇವಭಕ್ತಿಯುಳ್ಳವರದ್ದು ಮಾತ್ರ ಸ್ವೀಕಾರವಾಗುತ್ತದೆ.

ಆರಾಧನೆಗಳ ಸ್ವೀಕಾರ ಮತ್ತು ಅದರ ಅರ್ಥವೇನು? ಅದರ ಉತ್ತರವೇನೆಂದರೆ, ನಮಾಝ್ ಸ್ವೀಕೃತವಾಯಿತು ಎಂದು ನಾವು ಹೇಳುವಾಗ ಅದರ ತಾತ್ಪರ್ಯವೇನೆಂದರೆ, ನಮಾಝಿನ ಪ್ರಭಾವಗಳು ಮತ್ತು ಅನುಗ್ರಹಗಳು ನಮಾಝ್ ನಿರ್ವಹಿಸುವವನ ಮೇಲೆ ಉಂಟಾಯಿತು ಎಂದಾಗಿದೆ. ಎಲ್ಲಿಯ ವರೆಗೆ ಆ ಅನುಗ್ರಹಗಳು ಮತ್ತು ಪ್ರಭಾವಗಳು ಉಂಟಾಗುವುದಿಲ್ಲವೋ ಅಲ್ಲಿಯ ವರೆಗೂ ಅದು ವ್ಯರ್ಥ ಪ್ರಯತ್ನ ಮಾತ್ರವಾಗಿದೆ. ನಮ್ಮ ರಮಝಾನ್, ನಮ್ಮ ಉಪವಾಸಗಳು ನಮ್ಮನ್ನು ಈ ಮಟ್ಟಕ್ಕೆ ಕೊಂಡುಹೋಗಲು ಪ್ರಯತ್ನಿಸುತ್ತಿವೆಯೇ ಎಂದು ನಾವು ನೋಡಬೇಕಾಗಿದೆ. ನ್ಯೂನತೆಗಳು ಮತ್ತು ಕೆಡುಕುಗಳಲ್ಲಿ ಬಿದ್ದುಕೊಂಡೇ ಇರುವುದಾದರೆ, ಆ ನಮಾಝ್‌ಗಳು ಆತನಿಗೆ ಯಾವ ಪ್ರಯೋಜನ ನೀಡಿತು ಎಂದು ನೀವೇ ಹೇಳಿರಿ. ಆತನ ನಮಾಝಿನಿಂದ ಆತನು ಮುಳುಗಿದ್ದ ಕೆಡುಕುಗಳು ಮತ್ತು ಪಾಪಗಳು ಕಡಿಮೆಯಾಗಬೇಕಾಗಿತ್ತು. ನಮಾಝ್ ಆತನಿಗೆ ಒಂದು ಉತ್ತಮ ಮಾರ್ಗವಾಗಿದೆ. ಆದ್ದರಿಂದ ಸತ್ಯವಿಶ್ವಾಸಿಯಾಗಲು ಬಯಸುವ ಒಬ್ಬ ಮನುಷ್ಯನಿಗೆ ಮೊದಲ ಹಂತ ಮತ್ತು ಕಷ್ಟಕರವಾದ ಸಂಗತಿಯು ಕೆಟ್ಟ ಕೆಲಸಗಳಿಂದ ದೂರವಿರುವುದೇ ಆಗಿದೆ. ಇದರ ಹೆಸರು ತಖ್ವಾ ಎಂದಾಗಿದೆ.

ಒಟ್ಟಿನಲ್ಲಿ ನಮ್ಮ ಆರಾಧನೆಗಳು, ನಮ್ಮ ಉಪವಾಸಗಳು, ನಮ್ಮ ಪವಿತ್ರ ಖುರ್‌ಆನ್ ಪಾರಾಯಣವು ನಮ್ಮೊಳಗೆ ಕರ್ಮಪರವಾದ ಬದಲಾವಣೆಗಳನ್ನು ಉಂಟುಮಾಡುವುದಿಲ್ಲವೆಂದಾದರೆ, ಉಪವಾಸಗಳ ಉದ್ದೇಶವಾದ ತಖ್ವಾವನ್ನು ಗಳಿಸಲು ಪ್ರಯತ್ನಿಸಿಲ್ಲವೆಂದಾದರೆ, ನಾವು ನಮ್ಮ ಉಪವಾಸಗಳ ಉದ್ದೇಶವನ್ನು ಈಡೇರಿಸಿಲ್ಲ ಎಂದಾಯಿತು. ಉಪವಾಸ ಗುರಾಣಿಯಾಗಿದೆ ಎಂದು ಹಝ್ರತ್ ಪೈಗಂಬರ್[ಸ] ಹೇಳಿರುವುದರ ಬಗ್ಗೆ ಮಾತುಕತೆಯಂತು ನಾವು ನಡೆಸಿದ್ದೇವೆ. ಆದರೆ ನಾವು ಆ ಗುರಾಣಿಯನ್ನು ಉಪಯೋಗಿಸುವ ರೀತಿಯನ್ನು ಕಲಿಯಲು ಪ್ರಯತ್ನಿಸಿಲ್ಲ. ನಾವು ಸಹರೀ ಮತ್ತು ಇಫ್ತಾರಿಯ ಏರ್ಪಾಡನ್ನಂತು ಮಾಡಿದ್ದೇವೆ. ಆದರೆ ಸಹರೀ ಮತ್ತು ಇಫ್ತಾರ್ ಮಾಡುವುದರ ಉದ್ದೇಶವನ್ನು ನಾವು ಈಡೇರಿಸಿಲ್ಲ. ನಾವು ಪೂರ್ತಿ ದಿನವನ್ನು ತಿನ್ನದೇ ಕುಡಿಯದೇ ಕಳೆದಿದ್ದೇವೆ. ಆದರೆ ಹಸಿವಿನ ಉದ್ದೇಶವನ್ನು ಈಡೇರಿಸಲಿಲ್ಲ. ಆ ಉದ್ದೇಶವು ತಖ್ವಾ ಲಭಿಸುವಾಗ ಈಡೇರುತ್ತದೆ. ನಮ್ಮಲ್ಲಿ ಉಂಟಾಗಬೇಕಾದ ತಖ್ವಾ ಉಂಟಾಗಿದೆಯೇ ಇಲ್ಲವೇ ಎಂಬುದನ್ನು ನಾವು ಅವಲೋಕಿಸಬೇಕಾಗಿದೆ.

ನೈಜ ತಖ್ವಾ ಏನು ಮತ್ತು ಯಾವ ರೀತಿಯ ತಖ್ವಾವನ್ನು ಹಝ್ರತ್ ಮಸೀಹ್ ಮೌಊದ್[ಅ] ನಮ್ಮಲ್ಲಿ ಉಂಟುಮಾಡಲು ಬಯಸುತ್ತಿದ್ದರು ಎಂಬುದರ ಕಡೆಗೆ ಮಾರ್ಗದರ್ಶನ ನೀಡುವ ತಖ್ವಾದ ಕುರಿತು ಹಝ್ರತ್ ಮಸೀಹ್ ಮೌಊದ್‌ರ[ಅ] ಕೆಲವು ಉಲ್ಲೇಖಗಳನ್ನು ನಾನು ಮುಂದಿರಿಸುತ್ತೇನೆ. ಈ ಕುರಿತು ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು:

"ಮನುಷ್ಯನನ್ನು ತೊಳೆಯುವ ಮತ್ತು ಅವನನ್ನು ಶುಚಿಗೊಳಿಸುವ ಹಾಗೂ ಯಾವುದಕ್ಕಾಗಿ ಪ್ರವಾದಿಗಳು ಬರುತ್ತಾರೋ ಆ ತಖ್ವಾ ಲೋಕದಿಂದ ಹೊರಟುಹೋಗಿದೆ. ಖದ್ ಅಫ್‌ಲಹ ಮನ್ ಝಕ್ಕಾಹಾ ಎಂಬುದರ ಸಾಕ್ಷಾತ್ಕಾರ ಎಂಬಂತೆ ಅಪರೂಪಕ್ಕೆ ಕೆಲವರು ಇರಬಹುದು. ಎಂದರೆ, ಯಾವಾತ ಅದನ್ನು (ಆತ್ಮವನ್ನು) ಪರಿಶುದ್ಧಗೊಳಿಸದನೋ ಆತ ತನ್ನ ಉದ್ದೇಶವನ್ನು ಗಳಿಸಿದನು ಎಂಬ ಸ್ಥಾನವನ್ನು ಪಡೆದವರು ವಿರಳ. ಪರಿಶುದ್ಧಿ ಮತ್ತು ಪವಿತ್ರತೆ ಬಹಳ ಉತ್ತಮ ಸಂಗತಿಯಾಗಿದೆ. ಮನುಷ್ಯ ಪರಿಶುದ್ಧನಾದರೆ ದೇವದೂತರು ಆತನ ಹಸ್ತಲಾಘವ ಮಾಡುತ್ತಾರೆ.

"ಜನರೊಳಗೆ ಅದರ ಬೆಲೆಯಿಲ್ಲ ಮತ್ತು ಅನುಮತನೀಯವಾದ ಮಾರ್ಗಗಳಿಂದ ಲಭಿಸುವುದರ ಅಭಿರುಚಿಗಳ ಕುರಿತು ಅವರಿಗೆ ಅರಿವಿಲ್ಲ. ಸಂಪತ್ತು ಲಭಿಸಲಿಕ್ಕಾಗಿ ಕಳ್ಳನು ಕಳ್ಳತನ ಮಾಡುತ್ತಾನೆ. ಆದರೆ ಆತ ತಾಳ್ಮೆವಹಿಸಿದರೆ, ಅಲ್ಲಾಹನು ಆತನನ್ನು ಬೇರೆ ಮಾರ್ಗದಿಂದ ಸಿರಿವಂತನನ್ನಾಗಿ ಮಾಡುವನು. ಇಲ್ಲಿ ಬಾಹ್ಯವಾದ ಕಳ್ಳತನ ಬಗ್ಗೆ ಮಾತ್ರ ಹೇಳಲಾಗಿಲ್ಲ. ಕಳಪೆ ವಸ್ತುಗಳನ್ನು ಮಾರಾಟ ಮಾಡುವ ವ್ಯಾಪಾರಿಗಳು ಕೂಡ ಇದೇ ಕೂಟಕ್ಕೆ ಸೇರುತ್ತಾರೆ. ಮನುಷ್ಯನ ಹೃದಯದಿಂದ ಸತ್ಯವಿಶ್ವಾಸ ಹೊರಟುಹೋಗುವಾಗಲೇ ಈ ರೀತಿಯ ಅಪ್ರಿಯ ಚಟುವಟಿಕೆಗಳು ನಡೆಯುತ್ತವೆ. ಅದೇ ರೀತಿಯಲ್ಲಿ ವ್ಯಭಿಚಾರಿ ವ್ಯಭಿಚಾರ ಮಾಡುತ್ತಾನೆ. ಆದರೆ ಆತ ತಾಳ್ಮೆವಹಿಸಿದರೆ, ಅಲ್ಲಾಹನ ಸಂಪ್ರೀತಿ ಲಭಿಸುವಂತಹ ಬೇರೆ ಮಾರ್ಗಗಳಿಂದ ಅಲ್ಲಾಹನು ಆತನ ಬಯಕೆಯನ್ನು ಈಡೇರಿಸುವನು. ಹದೀಸಿನಲ್ಲಿ ಹೀಗೆ ಬಂದಿದೆ: 'ಯಾವನೇ ವ್ಯಕ್ತಿ ಸತ್ಯವಿಶ್ವಾಸಿಯಾಗಿರುವ ಸ್ಥಿತಿಯಲ್ಲಿ ಕಳ್ಳತನ ಮಾಡುವುದಿಲ್ಲ. ಯಾವನೇ ವ್ಯಕ್ತಿ ಸತ್ಯವಿಶ್ವಾಸಿಯಾಗಿರುವ ಸ್ಥಿತಿಯಲ್ಲಿ ವ್ಯಭಿಚಾರ ಮಾಡುವುದಿಲ್ಲ.' ಎಂದರೆ, ಸತ್ಯವಿಶ್ವಾಸ ಹೃದಯದಿಂದ ಹೊರಟುಹೋದ ಸ್ಥಿತಿಯಲ್ಲೇ ಇಂತಹ ಕೃತ್ಯಗಳನ್ನು ಮನುಷ್ಯನು ಎಸಗುತ್ತಾನೆ."

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: "ಒಂದು ಆಡಿನ ಎದುರಿಗೆ ಒಂದು ಸಿಂಹ ನಿಂತರೆ ಅದಕ್ಕೆ ಹುಲ್ಲು ತಿನ್ನಲು ಕೂಡ ಸಾಧ್ಯವಾಗುವುದಿಲ್ಲ. ಹೀಗಿರುವಾಗ ಆಡಿಗೆ ಇರುವಷ್ಟು ಈಮಾನ್ ಕೂಡ ಜನರಿಗೆ ಇಲ್ಲವೇ? ಪಾಪಗಳನ್ನು ಮತ್ತು ಕೆಡುಕುಗಳನ್ನು ಮನುಷ್ಯನು ಮಾಡುವಾಗ ಅಲ್ಲಾಹನು ನಮ್ಮನ್ನು

ಸದಾ ನೋಡುತ್ತಿದ್ದಾನೆ ಎಂಬ ಭಾವನೆ ಇರಬೇಕು. ಯಥಾರ್ಥ ಬೇರು ಮತ್ತು ಉದ್ದೇಶ ತಖ್ವಾ ಗಳಿಕೆಯಾಗಿದೆ. ಯಾರಿಗೆ ಅದು ಲಭಿಸುತ್ತದೋ ಅಂಥವರಿಗೆ ಎಲ್ಲವನ್ನು ಗಳಿಸಲು ಸಾಧ್ಯ. ಅದಿಲ್ಲದೇ ಮನುಷ್ಯನಿಗೆ ದೊಡ್ಡ ಮತ್ತು ಸಣ್ಣ ಪಾಪಗಳಿಂದ ರಕ್ಷಣೆ ಪಡೆಯಲು ಸಾಧ್ಯವಲ್ಲ. ಸರ್ಕಾರಗಳ ಅಪ್ಪಣೆಗಳಿಂದ ಮನುಷ್ಯನು ಪಾಪಗಳಿಂದ ರಕ್ಷಣೆ ಪಡೆಯಲಾರ. ಅಧಿಕಾರಿಗಳನ್ನು ಹೆದರಲು ಅವರು ನಮ್ಮ ಜೊತೆಜೊತೆಗೆ ಇರುವುದಿಲ್ಲ. ಮನುಷ್ಯನು ಸ್ವತಃ ತನ್ನನ್ನು ಒಬ್ಬಂಟಿಯೆಂದು ಭಾವಿಸಿ ಪಾಪಗಳನ್ನು ಮಾಡುತ್ತಾನೆ. ಇಲ್ಲದಿದ್ದರೆ ಆತ ಅದನ್ನು ಎಂದಿಗೂ ಮಾಡಲಾರನು. ಆತ ತನ್ನನ್ನು ಒಬ್ಬಂಟಿಗನೆಂದು ಭಾವಿಸುವಾಗ ಆತ ನಾಸ್ತಿಕನಾಗಿರುತ್ತಾನೆ. ಸತ್ಯವಿಶ್ವಾಸ ಆತನೊಳಗೆ ಕಿಂಚಿತ್ತೂ ಇರುವುದಿಲ್ಲ. ಅಲ್ಲಾಹನ ವಿಶ್ವಾಸ ಆತನ ಹೃದಯದಿಂದ ಹೊರಟುಹೋಗಿರುತ್ತದೆ. ಅಲ್ಲಾಹನು ನೋಡುತ್ತಿದ್ದಾನೆ ಎಂಬ ಅರಿವು ಆತನಿಗೆ ಇದ್ದರೆ ಮನುಷ್ಯನು ಎಂದಿಗೂ ಪಾಪಗಳನ್ನು ಮಾಡಲಾರನು. ತಖ್ವಾದಿಂದ ಎಲ್ಲವೂ ಲಭಿಸುವುದು. ಪವಿತ್ರ ಖುರ್‌ಆನ್ ತನ್ನ ಆರಂಭವನ್ನು ಅದರಿಂದಲೇ ಮಾಡಿದೆ. **ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್‌ತಈನ್** (ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ.) ಎಂಬುದರ ಉದ್ದೇಶವು ತಖ್ವಾ ಆಗಿದೆ. ಎಂದರೆ, ಮನುಷ್ಯನು ಸತ್ಕರ್ಮಗಳನ್ನು ಮಾಡಿಕೊಂಡು ಅವುಗಳನ್ನು ತನ್ನ ಸಾಮರ್ಥ್ಯದಿಂದ ಮಾಡಿದ್ದು ಎಂದು ಹೇಳಲು ದೇವಭಯದ ಕಾರಣದಿಂದ ಧೈರ್ಯಪಡುವುದಿಲ್ಲ. ಬದಲಾಗಿ ಅಲ್ಲಾಹನಿಂದಲೇ ಮುಂದಿನ ಸತ್ಕರ್ಮಗಳಿಗಾಗಿ ಸಹಾಯವನ್ನು ಬೇಡುತ್ತಾನೆ. ಸತ್ಕರ್ಮಗಳನ್ನು ಮಾಡಿದ್ದರೂ ಅದು ತನ್ನ ಯಾವುದೋ ಶ್ರೇಷ್ಠತೆ ಎಂದು ಭಾವಿಸಲಾರನು. ತನ್ನ ಹೃದಯ ಪರಿಶುದ್ಧವೆಂದೋ ತಾನು ಒಳಿತಿನ ಬಹಳ ಉನ್ನತ ಮಟ್ಟವನ್ನು ತಲುಪಿದ್ದೇನೆ ಎಂದೋ ಭಾವಿಸಲಾರನು. ಬದಲಾಗಿ ಅದು ಅಲ್ಲಾಹನ ಅನುಗ್ರಹವೆಂದೂ ಅವನೇ ನನಗೆ ಸತ್ಕರ್ಮಗಳನ್ನು ಮಾಡಲು, ನಮಾಝ್‌ಗಳನ್ನು ಅನುಷ್ಠಿಸಲು, ದುಆಗಳನ್ನು ಮಾಡಲು ಸೌಭಾಗ್ಯ ನೀಡಿರುವನು ಎಂದು ಮನವರಿಕೆ ಮಾಡಿಕೊಳ್ಳುವನು. ಪವಿತ್ರ ಖುರ್‌ಆನಿನ ಎರಡನೇ ಅಧ್ಯಾಯ ಕೂಡ **ಹುದಲ್ಲಿಲ್ ಮುತ್ತಖೀನ್** ಎಂಬ ವಚನದಿಂದ ಆರಂಭವಾಗುತ್ತದೆ. ಮನುಷ್ಯನು ಮುತ್ತಖಿಯಾಗುವಾಗ ಮಾತ್ರ ಆತನ ನಮಾಝ್, ಉಪವಾಸ, ಝಕಾತ್ ಮುಂತಾದ ಎಲ್ಲವೂ ಸ್ವೀಕಾರವಾಗುತ್ತವೆ. ಆಗ ಪಾಪದ ಕಡೆಗೆ ಎಳೆಯುವ ಎಲ್ಲ ಸಂಗತಿಗಳನ್ನು ಅಲ್ಲಾಹನು ಆತನಿಂದ ದೂರಮಾಡುತ್ತಾನೆ. ತಖ್ವಾ ಇರುವವನಿಗೆ, ಪತ್ನಿಯ ಆವಶ್ಯಕತೆಯಿದ್ದರೆ ಅಲ್ಲಾಹನು ಆತನಿಗೆ ಪತ್ನಿಯನ್ನು ದಯಪಾಲಿಸುತ್ತಾನೆ. ಔಷಧಿಯ ಆವಶ್ಯಕತೆಯಿದ್ದರೆ ಅದನ್ನು ಒದಗಿಸುತ್ತಾನೆ. ಯಾವುದರ ಆವಶ್ಯಕತೆಯಿದೆಯೋ ಅದನ್ನು ನೀಡುತ್ತಾನೆ. ಆತ ಯೋಚಿಸಿ ಕೂಡ ಇಲ್ಲದ ಮಾರ್ಗಗಳಿಂದ ಆತನ ದಿನನಿತ್ಯದ ಆವಶ್ಯಕತೆಗಳನ್ನು ಅಲ್ಲಾಹನು ಪೂರೈಸಿ ಕೊಡುತ್ತಾನೆ.”

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: “ಮತ್ತೊಂದು ವಚನ ಪವಿತ್ರ ಖುರ್‌ಆನಿನಲ್ಲಿ ಹೀಗಿದೆ: **ಇನ್ನಲ್ಲಧೀನ ಖಾಲೂ ರಬ್ಬುನಲ್ಲಾಹು ಸುಮ್ಮಸ್‌ತಖಾಮೂ ತತನಝ್ಝಲು ಅಲೈಹಿಮುಲ್ ಮಲಾಇಕತು ಅಲ್ಲಾ ತಖಾಫೂ ವಲಾ ತಹ್‌ಝನೂ** – ಅರ್ಥ: ಯಾರು ‘ಅಲ್ಲಾಹನು ನಮ್ಮ ಪ್ರಭು’ ಎಂದು ಹೇಳುತ್ತಾರೋ ಮತ್ತು ಸ್ಥಿರಚಿತ್ತರಾಗಿರುತ್ತಾರೋ ಅವರ ಬಳಿಗೆ ದೇವದೂತರು ಇಳಿದು ಬಂದು ಹೇಳುವರು: ನೀವು ಭಯಪಡಬೇಡಿರಿ. ವ್ಯಥೆಗೊಳ್ಳುವುದೂ ಬೇಡ. ಎಂದರೆ, ಅವರ ಮೇಲೆ ಭೂಕಂಪಗಳ ಸ್ಥಿತಿಯುಂಟಾಯಿತು, ಬಿರುಗಾಳಿ ಎದ್ದಿತ್ತು. ಆದರೆ ಅಲ್ಲಾಹನೊಂದಿಗೆ ಅವರು ಮಾಡಿದ ವಾಗ್ದಾನದಿಂದ ಅವರು ಹಿಂದೆ ಸರಿಯಲಿಲ್ಲ. ನಿಷ್ಠೆಯಿಂದ ಅಲ್ಲಾಹನೊಂದಿಗೆ ಸಂಬಂಧವನ್ನು ಇರಿಸಿದರು. ಸತ್ಯವಿಶ್ವಾಸವನ್ನು ಒಂದು ಬಾರಿ ಸ್ವೀಕಾರ ಮಾಡಿದ ನಂತರ ಸತ್ಯವಿಶ್ವಾಸದಲ್ಲಿ ಸುದೃಢಗೊಳ್ಳುತ್ತಾ ಹೋದರು. ಸಣ್ಣ ಸಣ್ಣ ಸಂಗತಿಗಳು ಬರುವಾಗಲೇ ಕೆಲವರ ಸತ್ಯವಿಶ್ವಾಸ ಅಲುಗಾಡಲು ಶುರುವಾಗುತ್ತದೆ. ಆದರೆ ಇವರು ಅಚಂಚಲರಾಗಿರುತ್ತಾರೆ.

“ಅನಂತರ ಅಲ್ಲಾಹನು ಮುಂದೆ ಹೇಳುತ್ತಾನೆ: ಈ ಸತ್ಯವಿಶ್ವಾಸಿಗಳು ಹಾಗೆ ಮಾಡಿದಾಗ, ಸತ್ಯಸಂಧತೆ ಮತ್ತು ನಿಷ್ಠತೆಯನ್ನು ತೋರಿಸಿದಾಗ ಅದಕ್ಕೆ ಲಭಿಸಿದ ಪ್ರತಿಫಲವೇನೆಂದರೆ, **ತತನಝ್ಝಲು ಅಲೈಹಿಮುಲ್ ಮಲಾಇಕ**. ಎಂದರೆ, ಅವರ ಬಳಿಗೆ ದೇವದೂತರು ಇಳಿದು ಬಂದು ‘ನೀವು ಭಯಪಡಬೇಡಿರಿ. ವ್ಯಥೆಗೊಳ್ಳುವುದೂ ಬೇಡ’ ಎಂದು ಹೇಳುವರು. ನಿಮಗೆ ವಾಗ್ದಾನ ಮಾಡಲಾದ ಸ್ವರ್ಗದ ಬಗ್ಗೆ ನೀವು ಸಂತೋಷಪಡಿರಿ. ಇಲ್ಲಿ ಹೇಳಿರುವ ಸ್ವರ್ಗದಿಂದ ಈ ಲೋಕದ ಸ್ವರ್ಗವನ್ನು ಉದ್ದೇಶಿಸಲಾಗಿದೆ. ಪವಿತ್ರ ಖುರ್‌ಆನಿನಲ್ಲಿ ಇದರ ಬಗ್ಗೆ ಹೀಗೆ ಹೇಳಲಾಗಿದೆ. **ಅವಲಿಮನ್ ಖಾಮ ರಬ್ಬಿಹೀ ಜನ್ನತಾನ್**. ಎಂದರೆ, ಅಲ್ಲಾಹನ ಸ್ಥಾನವನ್ನು ಭಯಪಡುವವರಿಗೆ ಎರಡು ಸ್ವರ್ಗಗಳಿವೆ. **ನಹ್‌ನು ಔಲಿಯಾಉಕುಂ ಫಿಲ್ ಹಯಾತುದ್ದುನ್‌ಯಾ ವಫಿಲ್‌ಆಖಿರ**. ಎಂದರೆ, ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ನಾವು ನಿಮ್ಮ ಸ್ನೇಹಿತ ಮತ್ತು ಸಂರಕ್ಷಕರಾಗುವೆವು.”

ಒಟ್ಟಿನಲ್ಲಿ, ಯಾವಾತನ ಸ್ನೇಹಿತ ಮತ್ತು ಸಂರಕ್ಷಕ ಅಲ್ಲಾಹನಾಗುತ್ತಾನೋ ಆತ ಬಹಳ ಸೌಭಾಗ್ಯಶಾಲಿ. ಆತ ತನ್ನ ಪ್ರತಿಯೊಂದು ಕೆಲಸವನ್ನು ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಮಾಡುವವನಾಗಿರುತ್ತಾನೆ. ಅನಂತರ ಸತ್ಯವಿಶ್ವಾಸಿ ಮತ್ತು ಸತ್ಯನಿಷೇಧಿಯ ವಿಜಯಗಳಲ್ಲಿ ಇರುವ ಅಂತರವೇನೆಂಬುದರ ಬಗ್ಗೆ ವಿವರಣೆ ನೀಡುತ್ತಾ ಹಾಗೂ ಸತ್ಯವಿಶ್ವಾಸಿ ಮತ್ತು ಸತ್ಯನಿಷೇಧಿ ತನ್ನ ವಿಜಯವನ್ನು ಹೇಗೆ ನೋಡುತ್ತಾನೆ ಎಂಬುದನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

“ಈ ತತ್ವವನ್ನು ಸದಾ ಮುಂದಿರಿಸಬೇಕು. ಅದೇನೆಂದರೆ, ಸತ್ಯವಿಶ್ವಾಸಿಗೆ ಯಾವುದಾದರೂ ಯಶಸ್ಸು ಲಭಿಸುವಾಗ ಆತ ಲಜ್ಜಿತನಾಗುತ್ತಾನೆ. ಆತನೇಕೆ ನಾಚಿಕೆ ಹೊಂದುತ್ತಾನೆ? ಏಕೆಂದರೆ, ನಾನು ಅದಕ್ಕೆ ಅರ್ಹನಾಗಿರಲಿಲ್ಲ; ಅಲ್ಲಾಹನು ತನ್ನ ಕೃಪೆಯಿಂದಲೇ ಎಲ್ಲವನ್ನು ನೀಡಿರುವನು ಎಂಬ ಭಾವನೆ ಆತನಲ್ಲಿ ಉಂಟಾಗುತ್ತದೆ. ತನ್ನ ಯಾವುದೇ ಶ್ರೇಷ್ಠತೆ, ತನ್ನ ಯಾವುದೇ ಅರಿವಿನ ಕಾರಣದಿಂದ, ತನ್ನ ಬುದ್ಧಿ, ತನ್ನ ಸಂಪತ್ತು ಅಥವಾ ತನ್ನ ದೈಹಿಕ ಸಾಮರ್ಥ್ಯದ ಕಾರಣದಿಂದ ಅಲ್ಲ; ಬದಲಾಗಿ, ಎಲ್ಲವೂ ಅಲ್ಲಾಹನ ಕೃಪೆಯಿಂದಲೇ ಉಂಟಾಗಿದೆ ಎಂದು ಆತ ಮನವರಿಕೆ ಮಾಡುತ್ತಾನೆ. ಈ ಭಾವನೆ ಆತನಲ್ಲಿ ಮೂಡಿಬರುವಾಗ ಆತ ಅಲ್ಲಾಹನ ಸ್ತುತಿಕೀರ್ತನೆ ಮಾಡುತ್ತಾನೆ. ಈ ರೀತಿಯಾಗಿ ಆತ ತನ್ನ ಹೆಜ್ಜೆಯನ್ನು ಮುಂದಿಡುತ್ತಾನೆ. ಪ್ರತಿಯೊಂದು ವಿಪತ್ತಿನ ಘಟ್ಟದಲ್ಲೂ ಸ್ಥಿರಚಿತ್ತನಾಗಿ ಸತ್ಯವಿಶ್ವಾಸವನ್ನು

ಗಳಿಸುತ್ತಾನೆ. ನೆನಪಿಡಿರಿ, ಸತ್ಯನಿಷೇಧಿಯ ವಿಜಯವು ಆತನನ್ನು ದುರ್ಮಾರ್ಗದೆಡೆಗೆ ಕೊಂಡುಹೋಗುತ್ತದೆ. ಸತ್ಯವಿಶ್ವಾಸಿಯ ವಿಜಯದಿಂದ ಆತನಿಗಾಗಿ ಅನುಗ್ರಹಗಳ ಬಾಗಿಲುಗಳು ತೆರೆಯುತ್ತವೆ. ಸತ್ಯನಿಷೇಧಿಯು ಪ್ರತಿಯೊಂದು ಸಂಗತಿ ಲಭಿಸುವಾಗ ತನ್ನ ಬಗ್ಗೆ ಹೆಮ್ಮೆಪಡುತ್ತಾನೆ. ಆತನ ಹಿರಿಮೆಗೆ ಆತನೇ ಕಾರಣವೆಂದು ಭಾವಿಸುತ್ತಾನೆ. ಆದ್ದರಿಂದ ಆತ ದುರ್ಮಾರ್ಗದಲ್ಲಿ ಬೀಳುತ್ತಾನೆ. ಆದರೆ ನಿಜವಾದ ಸತ್ಯವಿಶ್ವಾಸಿಯು ಪ್ರತಿಯೊಂದು ಸಂಗತಿಯನ್ನು ಅಲ್ಲಾಹನ ಕೃಪೆಯೆಂದು ಸೂಚಿಸುವಾಗ ಆತನ ಮೇಲೆ ವರದಾನಗಳ ಬಾಗಿಲು ತೆರೆಯಲ್ಪಡುತ್ತದೆ. ಸತ್ಯನಿಷೇಧಿಯ ವಿಜಯವು ಆತನನ್ನು ನಾಶದ ಕಡೆಗೆ ಕೊಂಡುಹೋಗಲು ಕಾರಣವೇನೆಂದರೆ, ಆತ ದೇವನ ಕಡೆಗೆ ಮರಳುವುದಿಲ್ಲ. ಬದಲಾಗಿ, ತನ್ನ ಪರಿಶ್ರಮ, ತನ್ನ ಬುದ್ಧಿ ಮತ್ತು ಸಾಮರ್ಥ್ಯವನ್ನೇ ದೇವನನ್ನಾಗಿ ಮಾಡುತ್ತಾನೆ. ಆದರೆ ಸತ್ಯವಿಶ್ವಾಸಿಯು ಅಲ್ಲಾಹನ ಕಡೆಗೆ ಬಾಗಿಕೊಂಡು ಅಲ್ಲಾಹನೊಂದಿಗೆ ಹೊಸದಾದ ಒಂದು ಪರಿಚಯವನ್ನು ಮಾಡಿಕೊಳ್ಳುತ್ತಾನೆ. ಈ ರೀತಿಯಾಗಿ ಪ್ರತಿಯೊಂದು ವಿಜಯದ ನಂತರ ಅಲ್ಲಾಹನ ಜೊತೆಗೆ ಆತನ ಒಂದು ಹೊಸ ವ್ಯವಹಾರ ಆರಂಭವಾಗುತ್ತದೆ. ಆತನಲ್ಲಿ ಬದಲಾವಣೆ ಉಂಟಾಗಲು ಶುರುವಾಗುತ್ತದೆ. **ಇನ್ನಲ್ಲಾಹ ಮಅಲ್ಲಧೀನತ್ತಖೌ** ಎಂದರೆ, ಮುತ್ತಖಿಯಾದವನ ಜೊತೆಗೆ ಅಲ್ಲಾಹನು ಇರುತ್ತಾನೆ. ನೆನಪಿಡಿರಿ, ಪವಿತ್ರ ಖುರ್‌ಆನಿನಲ್ಲಿ ತಖ್ವಾ ಎಂಬ ಪದ ಅನೇಕ ಬಾರಿ ಬಂದಿದೆ. ನೂರಕ್ಕಿಂತಲೂ ಹೆಚ್ಚು ಸಲ ಬಂದಿದೆ. ಈ ವಚನದಲ್ಲಿ ಅದಕ್ಕಿಂತ ಮುಂಚಿನ ಪದವಾದ "ಮಅ" ಎಂಬ ಪದದೊಂದಿಗೆ ಇದು ಬಂದಿದೆ. ಎಂದರೆ ಯಾರು ದೇವನಿಗೆ ಪ್ರಾಮುಖ್ಯತೆ ಮತ್ತು ಆದ್ಯತೆಯನ್ನು ಕೊಡುತ್ತಾನೋ ಅವರಿಗೆ ಅಲ್ಲಾಹನು ಪ್ರಾಮುಖ್ಯತೆ ಮತ್ತು ಆದ್ಯತೆಯನ್ನು ಕೊಡುತ್ತಾನೆ. ಲೋಕದ ಎಲ್ಲ ರೀತಿಯ ಅಪಮಾನ ಮತ್ತು ನಿಂದ್ಯಾವಸ್ಥೆಯಿಂದ ಅಲ್ಲಾಹನು ಅವರನ್ನು ಸಂರಕ್ಷಿಸುತ್ತಾನೆ. ನನ್ನ ವಿಶ್ವಾಸವೇನೆಂದರೆ, ಮನುಷ್ಯನು ಎಲ್ಲ ರೀತಿಯ ನಿಂದನೆ ಮತ್ತು ಕಾಠಿಣ್ಯದಿಂದ ರಕ್ಷಣೆ ಪಡೆಯಲು ಬಯಸುವನಾದರೆ, ಅದಕ್ಕಿರುವ ಒಂದೇ ಮಾರ್ಗ ಮುತ್ತಖಿಯಾಗುವುದಾಗಿದೆ. ಹಾಗಾದರೆ, ಅವನಿಗೆ ಯಾವುದೇ ಸಂಗತಿಯ ಕೊರತೆಯಿರುವುದಿಲ್ಲ. ಒಟ್ಟಿನಲ್ಲಿ ಸತ್ಯವಿಶ್ವಾಸಿಯ ವಿಜಯವು ಆತನನ್ನು ಮುಂದಕ್ಕೆ ಕೊಂಡು ಹೋಗುವುದು ಮತ್ತು ಆತ ಒಂದೇ ಜಾಗದಲ್ಲಿ ತಂಗಿ ಇರುವುದಿಲ್ಲ."

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಮುತ್ತಖಿಯ ಮೇಲೆ ತಖ್ವಾದ ಪ್ರಭಾವ ಇಹಲೋಕದಲ್ಲೇ ಉಂಟಾಗಲು ಶುರುವಾಗುತ್ತದೆ. ಇದು ಸಾಲದಂತಲ್ಲ, ಬದಲಾಗಿ, ತಕ್ಷಣವೇ ಸಿಗುವ ನಗದು ಹಣದಂತಾಗಿದೆ. ಯಾವ ರೀತಿಯಲ್ಲಿ ವಿಷದ ಪ್ರಭಾವ ಮತ್ತು ಔಷಧಿಯ ಪ್ರಭಾವ ತಕ್ಷಣವೇ ದೇಹದಲ್ಲಿ ಉಂಟಾಗುತ್ತದೋ ಅದೇ ರೀತಿಯಲ್ಲಿ ತಖ್ವಾದ ಪ್ರಭಾವ ಕೂಡ ಆಗುತ್ತದೆ. ಒಟ್ಟಿನಲ್ಲಿ, ಸತ್ಕರ್ಮಗಳನ್ನು ಮಾಡಿಯೂ ಆರಾಧನೆಗಳನ್ನು ಮಾಡಿಯೂ ಒಳಿತುಗಳನ್ನು ಮಾಡಿಯೂ ಮನುಷ್ಯನ ಅವಸ್ಥೆಯಲ್ಲಿ ಪ್ರಭಾವ ಉಂಟಾಗುತ್ತಿಲ್ಲವೆಂದಾದರೆ, ಅದು ಚಿಂತನೀಯವಾದ ಸಂಗತಿಯಾಗಿದೆ. ಆರಾಧನೆ ಮತ್ತು ಸತ್ಕರ್ಮಗಳು ಸ್ವೀಕಾರಗೊಂಡಿವೆ ಎಂದು ಹೇಗೆ ಗೊತ್ತಾಗುವುದು ಎಂಬಿತ್ಯಾದಿ ಅನೇಕ ಸವಾಲುಗಳನ್ನು ಜನರು ಬರೆದು ಕಳುಹಿಸುತ್ತಾರೆ. ಅದಕ್ಕಿರುವ ಉತ್ತರವೇನೆಂದರೆ, ಒಳಿತುಗಳನ್ನು ಮಾಡುವ ಕಡೆಗೆ ಹೆಚ್ಚಿನ ಗಮನ ಉಂಟಾಗುತ್ತಿದ್ದರೆ, ಅಲ್ಲಾಹನ ಕಡೆಗೆ ಗಮನ ಹೆಚ್ಚಾಗಿ ಉಂಟಾಗುತ್ತಿದ್ದರೆ, ಮನುಷ್ಯನು ಆ ಕೆಲಸವನ್ನು ಅಲ್ಲಾಹನಿಗಾಗಿ ಮಾಡುತ್ತಿದ್ದಾನೆ ಎಂದು ಅರ್ಥ ಮತ್ತು ಅಲ್ಲಾಹನು ಅದರಲ್ಲಿ ಅನುಗ್ರಹವನ್ನು ಸುರಿಸುತ್ತಾನೆ."

ತಖ್ವಾದ ಮಾರ್ಗಗಳನ್ನು ಬೊಟ್ಟುಮಾಡಿ ತೋರಿಸುತ್ತಾ, ಅವುಗಳ ಕಡೆಗೆ ಗಮನಸೆಳೆಯುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ:

"ಮನುಷ್ಯನ ಎಲ್ಲ ತರದ ಆಧ್ಯಾತ್ಮಿಕ ಸೌಂದರ್ಯವು ಆತ ದೇವಭಕ್ತಿಯ ಎಲ್ಲ ಸೂಕ್ಷ್ಮ ಮಾರ್ಗಗಳಲ್ಲಿ ಹೆಜ್ಜೆ ಹಾಕುವಾಗ ಆಗಿದೆ. ತಖ್ವಾದ ಸೂಕ್ಷ್ಮವಾದ ಮಾರ್ಗಗಳು, ಸೌಂದರ್ಯದ ಸೂಕ್ಷ್ಮವಾದ ನಕಾಶೆ ಮತ್ತು ಸುಂದರವಾದ ರೂಪ ಏನಾಗಿವೆ? ಆಧ್ಯಾತ್ಮಿಕವಾಗಿ ಅದರಲ್ಲಿ ಒಂದು ಸೌಂದರ್ಯವಿದೆ. ಅಲ್ಲಾಹನು ನಮಗೆ ನೀಡಿದ ಸಂಗತಿಗಳ ಸಂರಕ್ಷಣೆ ಮತ್ತು ವಿಶ್ವಾಸಪರವಾದ ಪ್ರತಿಜ್ಞೆಗಳನ್ನು ಸಾಧ್ಯವಾದಷ್ಟು ಕಾಪಾಡುವುದು ಮತ್ತು ಈಡೇರಿಸುವುದು. ಅದೇನೆಂದರೆ, ತಲೆಯಿಂದ ಕಾಲಿನ ವರೆಗೆ ಎಷ್ಟೆಲ್ಲ ಸಾಮರ್ಥ್ಯಗಳು ಮತ್ತು ಅಂಗಾಂಗಗಳು ಇವೆಯೋ ಅವುಗಳನ್ನು ಸರಿಯಾಗಿ ಮತ್ತು ಅನುಮತನೀಯವಾಗಿ ಉಪಯೋಗಿಸುವುದು, ಬಾಹ್ಯವಾಗಿ ನೋಡುವುದಾದರೆ, ಕಣ್ಣುಗಳು, ಕಿವಿಗಳು, ಕಾಲುಗಳು, ಕೈಗಳು ಮತ್ತಿತರ ಅಂಗಾಂಗಗಳು ಹಾಗೂ ಆಂತರಿಕವಾದ ಹೃದಯ ಮತ್ತು ಇತರ ಶಕ್ತಿ ಸಾಮರ್ಥ್ಯಗಳು ಮತ್ತು ನೈತಿಕಗುಣಗಳು; ಇವನ್ನೆಲ್ಲ ತನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ಸರಿಯಾದ ಆವಶ್ಯಕತೆಯಿರುವ ಸಂದರ್ಭದಲ್ಲಿ ಉಪಯೋಗಿಸುವುದು ಮತ್ತು ಅನುಮತನೀಯವಲ್ಲದ ಕೆಲಸಗಳು ಮತ್ತು ಜಾಗಗಳಿಂದ ತಡೆದುನಿಲ್ಲುವುದು ಹಾಗೂ ಕೆಡುಕಿನ ರಹಸ್ಯವಾದ ದಾಳಿಗಳ ಬಗ್ಗೆ ಜಾಗರೂಕನಾಗಿರುವುದು. ಅಲ್ಲಾಹನು ನೀಡಿದ ವಸ್ತುಗಳ ಮತ್ತು ಸಾಮರ್ಥ್ಯಗಳ ಸಂರಕ್ಷಣೆ ಇದೇ ಆಗಿದೆ. ಇವೇ ನಾವು ಅಲ್ಲಾಹನೊಂದಿಗೆ ನಾವು ಮಾಡಿರುವ ವಿಶ್ವಾಸಪರವಾದ ಪ್ರತಿಜ್ಞೆಗಳಾಗಿವೆ. ಎಂದರೆ, ಕಣ್ಣುಗಳನ್ನು ಕೂಡ ಸರಿಯಾದ ಕೆಲಸಕ್ಕಾಗಿ ಉಪಯೋಗಿಸುವುದು, ದುರ್ನೋಟದಿಂದ ದೂರವಿರುವುದು, ಅವುಗಳನ್ನು ತಪ್ಪು ಕೆಲಸಗಳಿಂದ ಸಂರಕ್ಷಿಸುವುದು. ಅದೇ ರೀತಿಯಲ್ಲಿ, ಕಿವಿಗಳನ್ನು ಕೆಟ್ಟ ಮಾತುಗಳು ಆಲಿಸುವುದರಿಂದ ರಕ್ಷಿಸುವುದು, ಕೈಕಾಲುಗಳಿಂದ ಒಳ್ಳೆಯ ಕೃತ್ಯಗಳನ್ನು ಮಾಡುವುದು. ಹೃದಯದಲ್ಲಿರುವ ಕೆಟ್ಟ ಚಿಂತೆಗಳನ್ನು, ಭಾವನೆಗಳನ್ನು ಹೊರಗೆ ಹಾಕುವುದು ಇತ್ಯಾದಿ. ಇದಕ್ಕಾಗಿ ಹೆಚ್ಚು ಹೆಚ್ಚಾಗಿ ಇಸ್ತಿಗ್‌ಫಾರ್, ಅಲ್ಲಾಹನೊಡನೆ ಪಶ್ಚಾತ್ತಾಪಪಡುತ್ತಾ ಕ್ಷಮೆಯಾಚನೆ ಮಾಡಬೇಕು. ಅದೇ ರೀತಿಯಲ್ಲಿ ಇತರ ಸಾಮರ್ಥ್ಯಗಳನ್ನು ಸರಿಯಾಗಿ ಉಪಯೋಗಿಸಬೇಕು. ನಮ್ಮ ನೈತಿಕಗುಣ ಮತ್ತು ಸ್ವಭಾವಗುಣಗಳನ್ನು ಉನ್ನತ ಮಟ್ಟಕ್ಕೆ ತಲುಪಿಸಬೇಕು. ಮನುಷ್ಯನು ಅಲ್ಲಾಹನೊಡನೆ ಮಾಡುವ ವಿಶ್ವಾಸಪರವಾದ ಪ್ರತಿಜ್ಞೆಗಳು ಇವೇ ಆಗಿವೆ. ಅವುಗಳನ್ನೆಲ್ಲ ಈಡೇರಿಸಬೇಕು. ಅದಲ್ಲದೆ ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳ ಬಗ್ಗೆಯೂ ಗಮನವಿರಿಸಬೇಕು. ದಾಸರೊಡನೆ ಮಾಡಬೇಕಾದ ಕರ್ತವ್ಯಗಳನ್ನು ದೃಷ್ಟಿಯಲ್ಲಿರಿಸಬೇಕು. ಮೇಲೆ ಹೇಳಿದ ಸಂಗತಿಗಳು ನಮ್ಮ ಸ್ವಂತಕ್ಕಾಗಿವೆ. ಅದರ ನಂತರ ಸೃಷ್ಟಿಗಳ ಹಕ್ಕುಗಳನ್ನು ಕೂಡ ಈಡೇರಿಸಬೇಕು. ಇದೇ ಆ ಮಾರ್ಗಗಳಾಗಿವೆ. ಇವುಗಳೊಂದಿಗೆ

ಮನುಷ್ಯನ ಎಲ್ಲ ಆಧ್ಯಾತ್ಮಿಕ ಸೌಂದರ್ಯ ಸೇರಿಕೊಂಡಿದೆ. ಎಂದರೆ, ಮನುಷ್ಯನಿಗೆ ಸಲ್ಲಬೇಕಾದ ಹಕ್ಕುಗಳು ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳು ಈಡೇರಿಸಲ್ಪಟ್ಟರೆ ಮನುಷ್ಯನಲ್ಲಿ ಆಧ್ಯಾತ್ಮಿಕವಾದ ಸೌಂದರ್ಯ ಉಂಟಾಗುತ್ತದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ದೇವಭಕ್ತಿಯನ್ನು, (ತಖ್ವಾವನ್ನು) ವಸ್ತ್ರ ಅಥವಾ ಬಟ್ಟೆ ಎಂದು ಹೇಳಿದ್ದಾನೆ. **ಲಿಬಾಸುತ್ತಖ್ವ** (ದೇವಭಕ್ತಿಯ ಉಡಿಗೆ) ಎಂಬುದು ಪವಿತ್ರ ಖುರ್‌ಆನ್ ಉಪಯೋಗಿಸಿದ ಪದವಾಗಿದೆ. ಆಧ್ಯಾತ್ಮಿಕವಾದ ಸೌಂದರ್ಯವು ದೇವಭಕ್ತಿಯಿಂದಲೇ ಉಂಟಾಗುತ್ತದೆ ಎಂಬುದನ್ನು ಇದು ಸೂಚಿಸುತ್ತದೆ. ತಖ್ವಾ ಏನೆಂದರೆ, ಮನುಷ್ಯನು ತನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ಅಲ್ಲಾಹನು ನೀಡಿದ ವಸ್ತುಗಳನ್ನು ಮತ್ತು ಸಾಮರ್ಥ್ಯಗಳನ್ನು ಸರಿಯಾಗಿ ಸಂರಕ್ಷಿಸುವುದು, ಅವನೊಂದಿಗೆ ಮಾಡಿದ ವಿಶ್ವಾಸಪರವಾದ ಪ್ರತಿಜ್ಞೆಗಳನ್ನು ಪಾಲಿಸುವುದು ಆಗಿದೆ. ಅದೇ ರೀತಿಯಲ್ಲಿ ಸೃಷ್ಟಿಗಳೊಂದಿಗೆ ಈಡೇರಿಸಬೇಕಾದ ಎಲ್ಲ ಅಮಾನತ್ತುಗಳನ್ನು ಮತ್ತು ಪ್ರತಿಜ್ಞೆಗಳನ್ನು ಸಾಧ್ಯವಾಗುವಷ್ಟರ ಮಟ್ಟಿಗೆ ಕಾಪಾಡುವುದು. ಎಂದರೆ ಅದರ ಸೂಕ್ಷ್ಮವಾದ ಮತ್ತು ಸಣ್ಣದಾದ ಭಾಗಗಳನ್ನು ಕೂಡ ಸಾಧ್ಯವಾಗುವಷ್ಟರ ಮಟ್ಟಿಗೆ ಈಡೇರಿಸುವುದು. ಎಂದರೆ, ಆರಾಧನೆಗಳ ಕುರಿತು ಮತ್ತು ಸ್ವತಃ ಸುಧಾರಣೆ ಮಾಡುವುದರ ಕುರಿತು ಅಲ್ಲಾಹನ ಆಜ್ಞೆಗಳ ಹಾಗೂ ಜನರೊಡನೆ ಮಾಡಬೇಕಾದ ಕರ್ತವ್ಯಗಳ ಅತಿ ಸಣ್ಣ ಮತ್ತು ಸೂಕ್ಷ್ಮವಾದ ವಿಷಯಗಳ ಕಡೆಗೂ ಗಮನಹರಿಸಿ ಅವುಗಳನ್ನು ಈಡೇರಿಸಲು ಪ್ರಯತ್ನಿಸುವುದು. ಆರಾಧನೆಗಳ ಕುರಿತು ಮತ್ತು ಸ್ವತಃ ಸುಧಾರಣೆ ಮಾಡುವುದರ ಕುರಿತು ಹಾಗೂ ಜನರ ಕರ್ತವ್ಯಗಳನ್ನು ಈಡೇರಿಸುವುದರ ಬಗ್ಗೆ ಅಲ್ಲಾಹನ ಆಜ್ಞೆಗಳ ಅತಿಸೂಕ್ಷ್ಮವಾದ ಮತ್ತು ಸಣ್ಣದಾದ ಸಂಗತಿಗಳ ಬಗ್ಗೆ ಗಮನವಿಟ್ಟು ಅವುಗಳನ್ನು ಈಡೇರಿಸಲು ಪ್ರಯತ್ನಿಸುವುದು.

"ಎಲ್ಲಿಯ ತನಕ ಮನುಷ್ಯನು ಅಲ್ಲಾಹನಿಗೆ ಸಲ್ಲಬೇಕಾದ ಮತ್ತು ದಾಸನಿಗೆ ಸಲ್ಲಬೇಕಾದ ಕರ್ತವ್ಯಗಳ ಅತಿಸೂಕ್ಷ್ಮವಾದ ವಿಷಯಗಳ ಕುರಿತು ಗಮನಹರಿಸಿ ಅವುಗಳನ್ನು ಮಾಡಲು ಪ್ರಯತ್ನಿಸುವುದಿಲ್ಲವೋ ಮನುಷ್ಯನು ತಖ್ವಾದ ಮಟ್ಟವನ್ನು ಗಳಿಸಲು ಸಾಧ್ಯವಲ್ಲ. ಇದು ನಾವು ನೆನಪಿಡಬೇಕಾದ ಅತಿಸೂಕ್ಷ್ಮವಾದ ಅಂಶವಾಗಿದೆ. ಸೃಷ್ಟಿಗಳ ಸೇವೆ ಮತ್ತು ಕರ್ತವ್ಯಗಳನ್ನು ಈಡೇರಿಸುವುದಿಲ್ಲವೆಂದಾದರೆ, ಕೇವಲ ಆರಾಧನೆಯಿಂದ ಯಾವುದೇ ಪ್ರಯೋಜನವಿಲ್ಲ. ಅದೇ ರೀತಿಯಲ್ಲಿ ಕೇವಲ ಸೃಷ್ಟಿಗಳ ಸೇವೆಗಳನ್ನು ಮತ್ತು ಕರ್ತವ್ಯಗಳನ್ನು ಈಡೇರಿಸಿ ಅಲ್ಲಾಹನನ್ನು ಮರೆತುಬಿಡುವುದಾದರೆ, ಅದರಿಂದಲೂ ಪ್ರಯೋಜನವಿಲ್ಲ. ನಾವು ದಾಸರ ಹಕ್ಕುಗಳನ್ನು ಈಡೇರಿಸುತ್ತಿದ್ದೇವೆ ಎಂದು ಕೆಲವರು ಹೇಳುತ್ತಾರೆ. ಇದು ಕೂಡ ನಮ್ಮನ್ನು ತಖ್ವಾದಲ್ಲಿ ನಡೆಯುವವರನ್ನಾಗಿ ಮಾಡಲಿಕ್ಕಿಲ್ಲ. ಒಬ್ಬ ನಿಜವಾದ ಸತ್ಯವಿಶ್ವಾಸಿಯು ಎರಡೂ, ಎಂದರೆ, ದೇವನಿಗೆ ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುವುದು ಆವಶ್ಯಕ."

ನವೀನಾಚಾರಗಳು ಹರಡುತ್ತಿರುವುದರ ಬಗ್ಗೆ ಮತ್ತು ದೇವಭಕ್ತಿಯಿಂದ ದೂರವಿರುವುದರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಸಾವಿರಾರು ವಿಧಗಳ ನವೀನಾಚಾರಗಳು ಮತ್ತು ಕೆಟ್ಟ ಸಂಪ್ರದಾಯಗಳು ತನ್ನದಾದ ರೀತಿಯಲ್ಲಿ ಪ್ರತಿಯೊಂದು ಪಂಗಡ ಮತ್ತು ಗುಂಪುಗಳಲ್ಲಿ ಉಂಟಾಗಿವೆ. ಮನುಷ್ಯನ ನೈಜ ಉದ್ದೇಶ ಮತ್ತು ಗುರಿಯಾಗಿರುವ ತಖ್ವಾ ಮತ್ತು ಪರಿಶುದ್ಧಿಯು, ಯಾವ ತಖ್ವಾಕ್ಕಾಗಿ ಪ್ರವಾದಿತ್ವದ ಹೃದಯಕ್ಕಲ್ಲದೇ ಬೇರೆ ಯಾರಿಗೂ ಸಹಿಸಲು ಸಾಧ್ಯವಿಲ್ಲದಷ್ಟು ಅಪಾಯಕರವಾದ ವಿಪತ್ತುಗಳನ್ನು ಮತ್ತು ಕಷ್ಟತೆಗಳನ್ನು ಹಝ್ರತ್ ಪೈಗಂಬರ್(ಸ) ಸಹಿಸಿದ್ದರೋ, ಆ ತಖ್ವಾ ಇಂದು ಲೋಕದಿಂದ ಕಾಣೆಯಾಗಿ ಬಿಟ್ಟಿದೆ. ಅಪರಾಧಿಗಳಲ್ಲಿ ಹೆಚ್ಚಿನ ಸಂಖ್ಯೆ ಯಾರದ್ದು ಎಂದು ಸೆರೆಮನೆಗಳಿಗೆ ಹೋಗಿ ನೋಡಿರಿ. ಅಪರಾಧಿಗಳಲ್ಲಿ ಮುಸ್ಲಿಮರೇ ಹೆಚ್ಚಾಗಿರುವರು. ವ್ಯಭಿಚಾರ, ಶರಾಬುಸೇವನೆ, ಹಕ್ಕುಗಳನ್ನು ದೋಚುವುದು ಮತ್ತು ಇತರ ಅಪರಾಧಗಳು ಎಷ್ಟು ಹೆಚ್ಚಾಗಿವೆ ಎಂದರೆ, ದೇವನೇ ಇಲ್ಲವೆಂದು ಭಾವಿಸಲಾಗಿದೆ.

"ಅಲ್ಲಾಹನ ವರದಾನಗಳಿಂದ ಪ್ರಯೋಜನ ಪಡೆಯದೇ ಇರುವುದು ತಖ್ವಾವಲ್ಲ. ಪ್ರಯೋಜನ ಪಡೆಯದಿದ್ದರೆ, ಅದು ತಖ್ವಾದಿಂದ ದೂರಹೋಗುವುದಾಗಿದೆ. ಮನುಷ್ಯನು ಸದಾ ದುಆಗಳನ್ನು ಮಾಡುತ್ತಿರಬೇಕು ಮತ್ತು ಅಲ್ಲಾಹನು ದಯಪಾಲಿಸಿದ ವರದಾನಗಳ ಬಗ್ಗೆ ಪ್ರಸ್ತಾಪಿಸುತ್ತಾ ಇರಬೇಕು, ಅದನ್ನು ತೋರಿಸಬೇಕು. ಅದರಿಂದ ಅಲ್ಲಾಹನ ಪ್ರೀತಿ ಹೆಚ್ಚಾಗುವುದು. ಅವನ ಅನುಗ್ರಹಗಳನ್ನು ತೋರಿಸುವಾಗ ಅನುಸರಣೆ ಮತ್ತು ವಿಧೇಯತೆಗಾಗಿ ಒಂದು ಆವೇಶ ಉಂಟಾಗುವುದು. ಕೇವಲ ನಾಲಗೆಯಿಂದ ಪ್ರಸ್ತಾಪಿಸುವುದಲ್ಲ. ಅದು ಶರೀರದಲ್ಲಿ ಕಾಣಬೇಕಾಗಿದೆ. ಅಲ್ಲಾಹನು ಒಬ್ಬನಿಗೆ ಉತ್ತಮ ವಸ್ತ್ರಗಳನ್ನು ಧರಿಸಲಿಕ್ಕಾಗಿ ಸಾಂಪತ್ತಿಕವಾದ ಶಕ್ತಿ ನೀಡಿರುವಾಗ ಕೊಳಕು ವಸ್ತ್ರಗಳನ್ನು ಧರಿಸುವುದು ಪಾಪವಾಗಿದೆ. ಏಕೆಂದರೆ, ಆತ ಅಲ್ಲಾಹನ ವರದಾನಗಳು ಮತ್ತು ಕೃಪೆಯನ್ನು ಅಡಗಿಸಿಡಲು ಬಯಸುತ್ತಾನೆ. ಆತ ಹೀಗೆ ಕಪಟತೆ ತೋರಿಸುತ್ತಾನೆ. ಜನರಿಗೆ ಈ ರೀತಿಯಾಗಿ ಮೋಸಮಾಡುತ್ತಾನೆ. ಅವರಲ್ಲಿ ತಪ್ಪುಗ್ರಹಿಕೆ ಉಂಟುಮಾಡುತ್ತಾನೆ. ಇದು ಸತ್ಯವಿಶ್ವಾಸಿಯ ವೈಭವಕ್ಕೆ ಸೇರಿದ ಸಂಗತಿಯಲ್ಲ. ಸತ್ಯವಿಶ್ವಾಸಿ ಹಾಗೆ ಆಗಿರುವುದಿಲ್ಲ. ಹಝ್ರತ್ ಪೈಗಂಬರರ(ಸ) ರೀತಿ ಬೇರೆ ಬೇರೆಯಾಗಿತ್ತು. ಅವರಿಗೆ ಮಾಡಲು ಸಾಧ್ಯವಾದ ಸಂಗತಿಗಳನ್ನು ಅವರು ಮಾಡುತ್ತಿದ್ದರು. ಒಂದೇ ಕಡೆ ವಾಲುತ್ತಿರಲಿಲ್ಲ. ಉತ್ತಮ ಉಡಿಗೆ ಲಭಿಸಿದರೆ, ಉತ್ತಮ ಉಡಿಗೆಯನ್ನು ಧರಿಸುತ್ತಿದ್ದರು. ಲಭಿಸದಿದ್ದರೆ, ಸಾಧಾರಣ ವಸ್ತ್ರಗಳನ್ನು ಕೂಡ ಧರಿಸುತ್ತಿದ್ದರು. ಸಿಗುವುದನ್ನು ಧರಿಸುತ್ತಿದ್ದರು. ಅದರಿಂದ ಮುಖ ತಿರುಗಿಸುತ್ತಿರಲಿಲ್ಲ. ಅವರಿಗೆ ಕೊಡುಗೆಯಾಗಿ ಸಿಗುವ ಬಟ್ಟೆಗಳನ್ನು ಸ್ವೀಕಾರ ಮಾಡುತ್ತಿದ್ದರು."

ಅದೇ ರೀತಿಯಲ್ಲಿ ಪತ್ನಿ ಮತ್ತು ಮಕ್ಕಳೊಂದಿಗೆ ಸಂಬಂಧ ಮತ್ತು ಮನೆಯಲ್ಲಿ ತೋರಿಸಬೇಕಾದ ವರ್ತನೆಯ ಬಗ್ಗೆಯೂ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಪತ್ನಿಯಂದಿರು ಮತ್ತು ಮಕ್ಕಳೊಂದಿಗೆ ಇರುವ ಸಂಬಂಧ ಮತ್ತು ವರ್ತನೆಗಳ ಬಗ್ಗೆ ಜನರು ತಪ್ಪು ಮಾಡಿರುವರು. ಸರಿಯಾದ ಮಾರ್ಗದಿಂದ ತಪ್ಪಿರುವರು. ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸಿರಿ ಎಂದು ಪವಿತ್ರ ಖುರ್‌ಆನಿನಲ್ಲಿ ಬರೆದಿದೆ. ಆದರೆ ಈಗ ಅದರ ವಿರುದ್ಧವಾಗಿ ನಡೆಯಲಾಗುತ್ತದೆ. ಉತ್ತಮ ವರ್ತನೆ ಬಿಡಿ, ಅದರ ಬದಲಾಗಿ ಕೆಲವು ಮನೆಗಳಲ್ಲಿ ದೌರ್ಜನ್ಯಗಳನ್ನು ಮಾಡಲಾಗುತ್ತದೆ. ಒಟ್ಟಿನಲ್ಲಿ, ಸಾಂಪತ್ತಿಕ ಶಕ್ತಿಯಿದ್ದರೆ, ಉತ್ತಮ ವಸ್ತ್ರಗಳನ್ನು ಧರಿಸುವುದು, ಉತ್ತಮ ಆಹಾರಗಳನ್ನು ಸೇವಿಸುವುದರಿಂದ ತಖ್ವಾ ಕಡಿಮೆಗೊಳ್ಳುವುದಿಲ್ಲ.

ಬದಲಾಗಿ, ಅದು ವರ್ಧಿಸುತ್ತದೆ. ಅದೇ ರೀತಿಯಲ್ಲಿ ಪತ್ನಿಯೊಂದಿಗೆ ಉತ್ತಮವಾಗಿ ವರ್ತಿಸುವುದು ಕೂಡ ಆವಶ್ಯಕ. ತಮ್ಮ ಮಕ್ಕಳ ಬಗ್ಗೆ ಕಾಳಜಿ ವಹಿಸುವುದು, ಅವರ ಆವಶ್ಯಕತೆಗಳನ್ನು ಈಡೇರಿಸುವುದು, ಅವರ ಸರಿಯಾದ ತರಬೇತಿ ಮಾಡುವುದು ಕೂಡ ಅವಶ್ಯ. ಇವುಗಳೂ ತಖ್ವಾ ಆಗಿದೆ ಮತ್ತು ಪವಿತ್ರ ಖುರ್‌ಆನಿನ ಆಜ್ಞೆಯಾಗಿದೆ. ಒಟ್ಟಿನಲ್ಲಿ ಅಲ್ಲಾಹನಿಗೆ ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಕರ್ತವ್ಯಗಳನ್ನು ಈಡೇರಿಸುವುದು ಆವಶ್ಯ."

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ನೈಜವಾದ ತಖ್ವಾದೊಂದಿಗೆ ಅಜ್ಞತೆ, ಮೂರ್ಖತನ ಸೇರುವುದಿಲ್ಲ. ನೈಜವಾದ ತಖ್ವಾವು ತನ್ನ ಜೊತೆಗೆ ಒಂದು ಪ್ರಕಾಶವನ್ನು ಇರಿಸುತ್ತದೆ. ಇದರ ಬಗ್ಗೆ ಅಲ್ಲಾಹನು ಹೀಗೆ ಹೇಳುತ್ತಾನೆ: **ಯಾ ಅಯ್ಯುಹಲ್ಲದೀನ ಆಮನುತ್ತಖುಲ್ಲಾಹ ವ ಆಮಿನೂ ಬಿರಸೂಲಿಹೀ ಯುಅ್‌ತಿಕುಮ್ ಕಿಫ್‌ಲೈನಿ ಮಿರ್ರಹ್‌ಮತಿಹೀ ವಯಜ್‌ಅಲ್ಲಕುಮ್ ನೂರನ್ ತಮ್‌ಶೂನ ಬಿಹೀ** – ಎಂದರೆ, ಎಲೈ ಸತ್ಯವಿಶ್ವಾಸಿಗಳೇ, ಅಲ್ಲಾಹನಿಗೆ ಭಯಪಡಿರಿ ಹಾಗೂ ಅವನ ಸಂದೇಶವಾಹಕನಲ್ಲಿ ವಿಶ್ವಾಸವಿರಿಸಿರಿ. ಹಾಗೆ ಮಾಡಿದರೆ ಅಲ್ಲಾಹನು ತನ್ನ ಕರುಣೆಯಲ್ಲಿ ನಿಮಗೆ ಎರಡು ಪಾಲುಗಳನ್ನು ನೀಡುವನು. ಅವನು ನಿಮಗೆ ಒಂದು ಪ್ರಕಾಶವನ್ನೂ ನೀಡುವನು. ಅದರ ಮೂಲಕ ನೀವು ನಡೆಯುವಿರಿ. ಎಂದರೆ, ಆ ಪ್ರಕಾಶವು ನಿಮ್ಮ ಎಲ್ಲ ಕೃತ್ಯಗಳು, ಮಾತುಗಳು, ಸಾಮರ್ಥ್ಯಗಳು ಮತ್ತು ಭಾವನೆಗಳಲ್ಲಿ ಬರುವುದು. ನಿಮ್ಮ ಬುದ್ಧಿಯಲ್ಲೂ ಪ್ರಕಾಶವಿರುವುದು, ನೀವು ಆಡುವ ಪ್ರತಿಯೊಂದು ಮಾತಿನಲ್ಲೂ ಪ್ರಕಾಶವಿರುವುದು. ಅಲ್ಲಾಹನ ಇಷ್ಟ ಪ್ರಕಾರ ನಡೆಯುವವನಿಂದ ಯಾವುದೇ ತಪ್ಪಾದ ಕೃತ್ಯಗಳು ಆಗಲಾರದು. ಇನ್ನೇನಾದರೂ ಅಲ್ಲಾಹನು ಅದರ ಸುಧಾರಣೆ ಕಡೆಗೆ ಅವನ ಗಮನಸೆಳೆಯುವನು. ಪಶ್ಚಾತ್ತಾಪ ಮಾಡುವುದರ ಕಡೆಗೆ ಅಲ್ಲಾಹನು ಗಮನಸೆಳೆಯುವನು. ನಿಮ್ಮ ಆಡುಮಾತಿನಲ್ಲೂ ಪ್ರಕಾಶವಿರುವುದು, ನಿಮ್ಮ ಕಣ್ಣುಗಳಲ್ಲೂ ಪ್ರಕಾಶವಿರುವುದು, ನಿಮ್ಮ ಕಿವಿಗಳಲ್ಲಿ, ನಿಮ್ಮ ನಾಲಗೆಗಳಲ್ಲಿ, ನಿಮ್ಮ ಪ್ರತಿಯೊಂದು ಚಲನವಲನಗಳಲ್ಲಿ ಪ್ರಕಾಶವಿರುವುದು. ನೀವು ನಡೆಯುವ ಮಾರ್ಗಗಳು ಪ್ರಕಾಶಭರಿತವಾಗುವುದು. ನೀವು ಸಂಪೂರ್ಣವಾಗಿ ಪ್ರಕಾಶಿತರಾಗುವಿರಿ. ನಿಮ್ಮ ಯೋಚನೆಗಳು ಕೂಡ ಒಳ್ಳೆಯದಾಗಿರುವುದು. ಕೆಡುಕಿನ ಯೋಚನೆಗಳು ಅಳಿದುಹೋಗುವುವು. ಇಂತಹ ಸಮಾಜ ಸೃಷ್ಟಿಯಾಗುವಾಗ ಖಂಡಿತವಾಗಿಯೂ ಅದು ತಖ್ವಾದ ಮೇಲೆ ನಡೆಯುವ ಸಮಾಜವಾಗುವುದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಎಲ್ಲವು ಪರಿಪೂರ್ಣವಾದ ದೈವಿಕ ಪರಿಜ್ಞಾನದಿಂದ ಲಭಿಸುತ್ತದೆ. ದೇವನ ಬಗ್ಗೆ ಸರಿಯಾದ ಜ್ಞಾನವೇ ದೇವಭಯ, ದೇವಪ್ರೇಮ ಮತ್ತು ದೇವನ ಬಗ್ಗೆ ಇರುವ ಮೂಲ್ಯದ ಬೇರಾಗಿದೆ. ಯಾವಾತನಿಗೆ ಪರಿಪೂರ್ಣವಾದ ದೇವ ಪರಿಜ್ಞಾನ ನೀಡಲಾಗಿದೆಯೋ ಆತನಿಗೆ ದೇವಪ್ರೀತಿ ಮತ್ತು ದೇವಭಯ ಪರಿಪೂರ್ಣವಾಗಿ ನೀಡಲಾಗಿದೆ ಎಂದಾಯಿತು. ದೇವಭಯ ಇಲ್ಲದ ಕಾರಣದಿಂದ ಉಂಟಾಗುವ ಪ್ರತಿಯೊಂದು ಪಾಪಗಳಿಂದ ಆತನಿಗೆ ಮುಕ್ತಿ ನೀಡಲಾಗುತ್ತದೆ. ಒಟ್ಟಿನಲ್ಲಿ ನಮಗೆ ಈ ಮೋಕ್ಷಕ್ಕಾಗಿ ಯಾವುದೇ ರಕ್ತದ, ಯಾರೂ ಶಿಲುಬೆ ಮೇಲೆ ಸಾಯುವ ಮತ್ತು ಯಾವುದೇ ಪ್ರಾಯಶ್ಚಿತ್ತದ ಆವಶ್ಯಕತೆಯಿಲ್ಲ. ಅದಕ್ಕೆ ನಮಗೆ ಬೇಕಾಗಿರುವುದು ಒಂದೇ ಸಂಗತಿಯಾಗಿದೆ. ಅದು ತನ್ನ ಸ್ವಂತ ಆತ್ಮದ ತ್ಯಾಗ. ಅದರ ಮತ್ತೊಂದು ಹೆಸರು ಇಸ್ಲಾಂ ಎಂದಾಗಿದೆ. ಇಸ್ಲಾಂ ಎಂಬುದರ ಅರ್ಥ ಕೊಯ್ಯಲ್ಪಡಲು ಕುತ್ತಿಗೆಯನ್ನು ಮುಂದಕ್ಕೆ ಇರಿಸುವುದಾಗಿದೆ. ಎಂದರೆ, ಪರಿಪೂರ್ಣ ಒಪ್ಪಿಗೆಯಿಂದ ತನ್ನ ಆತ್ಮವನ್ನು ಅಲ್ಲಾಹನ ಸನ್ನಿಧಿಯಲ್ಲಿ ಇರಿಸುವುದು. ಈ ಸುಂದರವಾದ ಹೆಸರು ಶರೀಅತಿನ ತಿರುಳು ಮತ್ತು ಎಲ್ಲ ಆಜ್ಞಾಪನೆಗಳ ಜೀವವಾಗಿದೆ. ಯಾವುದೇ ಸಂಗತಿಯ ಬಗ್ಗೆ ಪರಿಪೂರ್ಣವಾದ ಅರಿವು ಇರುವ ತನಕ ಪ್ರೀತಿ ಉಂಟಾಗುವುದಿಲ್ಲ.

"ಎಲ್ಲಿಯ ವರೆಗೆ ಮನುಷ್ಯನಲ್ಲಿ ನಿಜವಾಗಿಯೂ ಅನೇಕ ಮರಣಗಳು ಉಂಟಾಗುವುದಿಲ್ಲವೋ ಆತ ಮುತ್ತಖಿಯಾಗಲಾರನು... ಎಲ್ಲವನ್ನು ಬಿಟ್ಟುಕೊಂಡು ಮೊದಲು ತಖ್ವಾದ ಹಂತಗಳನ್ನು ದಾಟಲು ಪ್ರಯತ್ನಿಸಬೇಕು. ತಖ್ವಾದ ಮಾರ್ಗವನ್ನು ಕಲಿಸುವುದೇ ಎಲ್ಲ ಪ್ರವಾದಿಗಳ ಉದ್ದೇಶವಾಗಿತ್ತು. **ಇನ್ ಔಲಿಯಾಉಹೂ ಇಲ್ಲಲ್ ಮುತ್ತಖೂನ್** – (ಪವಿತ್ರ ಖುರ್‌ಆನ್). ಎಂದರೆ, ಭಯಭಕ್ತಿಯನ್ನು ತೋರಿಸುವವರೇ ಅದರ ಸಂರಕ್ಷಕರು. ಆದರೆ ಪವಿತ್ರ ಖುರ್‌ಆನ್ ತಖ್ವಾದ ಅತಿಸೂಕ್ಷ್ಮವಾದ ಮಾರ್ಗಗಳನ್ನು ಕಲಿಸಿಕೊಟ್ಟಿದೆ. ಒಟ್ಟಿನಲ್ಲಿ ತಖ್ವಾದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಪ್ರತಿಯೊಂದು ಕಷ್ಟತೆಗಳನ್ನು ಸಹಿಸಲು ತಯಾರಾಗಬೇಕು. ಮನುಷ್ಯನು ಈ ಮಾರ್ಗದಲ್ಲಿ ಹೆಜ್ಜೆಹಾಕುವಾಗ ಶೈತಾನನು ಆತನ ಮೇಲೆ ದೊಡ್ಡ ದೊಡ್ಡ ದಾಳಿಗಳನ್ನು ಮಾಡುತ್ತಾನೆ. ಆದರೆ ಒಂದು ಮಿತಿಯ ನಂತರ ಶೈತಾನನು ನಿಂತುಬಿಡುತ್ತಾನೆ. ಆ ಘಟ್ಟಕ್ಕೆ ತಲುಪುವಾಗ ಮನುಷ್ಯನ ಕೆಟ್ಟ ಜೀವಿತ ಸತ್ತುಹೋಗಿ ಆತ ಅಲ್ಲಾಹನ ನೆರಳಲ್ಲಿ ಆಗುತ್ತಾನೆ. ಮನುಷ್ಯನು ತನ್ನ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಅಲ್ಲಾಹನ ಕಡೆಗೆ ಖರ್ಚು ಮಾಡಬೇಕು ಎಂಬುದೇ ನಮ್ಮ ಬೋಧನೆಗಳ ಸಂಕ್ಷೇಪವಾದ ತಿರುಳು."

ಅನೇಕ ಮಗ್ಗಲುಗಳಿಂದ ಹಝ್ರತ್ ಮಸೀಹ್ ಮೌಊದ್(ಅ) ನಮ್ಮನ್ನು ಉಪದೇಶಿಸಿರುವರು. ನಮಗೆ ತಖ್ವಾದ ಅರ್ಥ ಮತ್ತು ಅದರ ಆಳವಾದ ತಾತ್ಪರ್ಯದ ಅರಿವು ಕೂಡ ಲಭಿಸಲಿಕ್ಕಾಗಿ ನಾನು ಅವುಗಳಿಂದ ಕೆಲವು ಉಲ್ಲೇಖಗಳನ್ನು ಮುಂದಿರಿಸಿದ್ದೇನೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದಂತೆ ನಾವು ಅವರ ಜಮಾಅತಿನಲ್ಲಿ ಸೇರಿಕೊಂಡು ತಖ್ವಾದ ನಿಜವಾದ ತಿರುಳನ್ನು ಮನವರಿಕೆ ಮಾಡುತ್ತಾ ಅದರಂತೆ ನಡೆಯುವವರಾಗಲಿ. ರಮಝಾನಿನ ಉಳಿದ ದಿನಗಳಲ್ಲಿ ನಾವು ತಖ್ವಾದ ನೈಜತೆಯನ್ನು ಅರಿಯುತ್ತಾ ಅಲ್ಲಾಹನಿಗೆ ಸಲ್ಲಬೇಕಾದ ಮತ್ತು ಅವನ ಸೃಷ್ಟಿಗಳಿಗೆ ಸಲ್ಲಬೇಕಾದ ಕರ್ತವ್ಯಗಳನ್ನು ಸಾಧ್ಯವಾದಷ್ಟು ಮಾಡಲು ಪ್ರಯತ್ನ ಮಾಡಬೇಕು. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ.

**(ಭಾಷಾಂತರ: ಮೌಲವಿ ಇನಾಮುಲ್ಲಾಹ್)** ♦

**LOVE FOR ALL**
**HATRED FOR NONE**

# ಮುಸ್ಲಿಮೇತರರೊಡನೆ ಸಮಾನತೆಯ ಹಾಗೂ ಉತ್ತಮ ನಡೆವಳಿಕೆಯ ಕುರಿತು ಪವಿತ್ರ ಖುರ್‌ಆನ್‌ನ ಬೋಧನೆಗಳು

**♦ ಸಲೀಖ್ ಅಹ್ಮದ್ ನಾಯಕ್, ಖಾದಿಯಾನ್**

ಅಲ್ಲಾಹನು ಅತ್ಯಂತ ಸ್ಪಷ್ಟ ಪದಗಳಲ್ಲಿ ಮನಸ್ಸಾಕ್ಷಿ ಸ್ವಾತಂತ್ರ್ಯ ಹಾಗೂ ಧಾರ್ಮಿಕ ಸ್ವಾತಂತ್ರ್ಯವನ್ನು ಘೋಷಿಸಿದ್ದಾನೆ. ಈ ಘೋಷಣೆಯ ಮೂಲಕ ಜಗತ್ತು ಇರುವವರೆಗೆ ಒಂದು ಅದ್ವಿತೀಯ ಉದಾಹರಣೆ ನೀಡಿದ್ದಾನೆ. ಅದರಲ್ಲಿ ಯಾವ ಸಂಶಯವೂ ಇಲ್ಲ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ: **ಲಕುಮ್ ದೀನುಕುಮ್ ವಲಿಯದೀನ್** (109:7). ನಿಮಗೆ ನಿಮ್ಮ ಧರ್ಮ; ನನಗೆ ನನ್ನ ಧರ್ಮ ಮತ್ತು **ಲಾ ಇಕ್ರಾಹಫಿದ್ದೀನ್** (2:257). ಧರ್ಮದಲ್ಲಿ ಬಲವಂತವಿಲ್ಲ. ಇದು ಮನಸ್ಸಾಕ್ಷಿಗೆ ಸೇರಿದ್ದಾಗಿದೆ.

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್[ಅ] ಹೇಳುತ್ತಾರೆ: ಧಾರ್ಮಿಕ ಕಾರ್ಯಗಳಲ್ಲಿ ಸ್ವಾತಂತ್ರ್ಯವಿರಬೇಕಾಗಿದೆ. ಅಲ್ಲಾಹನು ಹೇಳಿದನು: ಲಾ ಇಕ್ರಾಹಫಿದ್ದೀನ್ ಎಂದರೆ ಧರ್ಮದಲ್ಲಿ ಯಾವುದೇ ರೀತಿಯ ಬಲವಂತ ಸಲ್ಲದು. ಈ ರೀತಿಯ ವಾಕ್ಯ ಇಂಜೀಲ್(ಬೈಬಲ್)ನಲ್ಲಿ ಎಲ್ಲೂ ಇಲ್ಲ. ಯುದ್ಧಕ್ಕೆ ನಿಜವಾದ ಕಾರಣ ಏನಿತ್ತು? ಅದನ್ನು ಮನವರಿಕೆ ಮಾಡಿಕೊಳ್ಳುವುದರಲ್ಲಿ ಜನರಿಗೆ ತಪ್ಪು ಸಂಭವಿಸಿದೆ. ಯುದ್ಧದ ಆದೇಶವಿರುತ್ತಿದ್ದರೆ ಪ್ರವಾದಿ[ಸ] ಹದಿಮೂರು ವರ್ಷಗಳ ಕಾಲ ಏಕೆ ವ್ಯರ್ಥ ಕಳೆಯುತ್ತಿದ್ದರು? ಏಕೆ ಅವರು ಖಡ್ಗ ಎತ್ತಲಿಲ್ಲ? ಕೇವಲ ಯುದ್ಧಕ್ಕೆ ಬಂದವರೊಡನೆ ಮಾತ್ರ ಯುದ್ಧ ಮಾಡುವ ಆಜ್ಞೆ ಇದೆ. ಎಂದೂ ಇಸ್ಲಾಮ್ ಧರ್ಮ ಮೊದಲಾಗಿ ಯುದ್ಧ ಸಾರಲಿಲ್ಲ. ಇದು ಇಸ್ಲಾಂ ಧರ್ಮದ ತತ್ವವಾಗಿದೆ. ಯುದ್ಧಕ್ಕೆ ಏನು ಕಾರಣವಿತ್ತು. ಅದನ್ನು ಸ್ವಯಂ ಅಲ್ಲಾಹನು ತಿಳಿಸಿದ್ದಾನೆ – ಝುಲಿಮು – ಈ ಜನರನ್ನು ತುಳಿತಕ್ಕೊಳಗಾಗಿಸಲಾಗಿದೆ. ಹಿಂಸೆಗೆ ಗುರಿಪಡಿಸಲಾಗಿದೆ. ಆದ್ದರಿಂದ ನಿಮಗೆ ಯುದ್ಧ ಮಾಡಲು ಅನುಮತಿಸಲಾಗುತ್ತದೆ. ನೇರವಾಗಿ ಯುದ್ಧ ಮಾಡಲು ಅನುಮತಿ ನೀಡಲಿಲ್ಲ. ಬಲವಂತವಾಗಿ ಧರ್ಮ ಪರಿವರ್ತನೆ ಮಾಡಲು ಯುದ್ಧ ಮಾಡಲು ಅನುಮತಿ ನೀಡಲಾಗಿಲ್ಲ. ಬದಲು, ನಿರಪರಾಧಿಗಳ ಮೇಲೆ ಯುದ್ಧ ಸಾರಲಾಗಿದೆ; ಅವರ ರಕ್ಷಣೆಗೋಸ್ಕರ ಯುದ್ಧ ಮಾಡಲು ಅನುಮತಿ ನೀಡಲಾಗಿದೆ. ಜೀವರಕ್ಷಣೆಗೋಸ್ಕರ ಯುದ್ಧ ಮಾಡಲು ಎಲ್ಲ ಕಾನೂನುಗಳು ಅನುಮತಿಸುತ್ತವೆ. (ಅಲ್‌ಬದರ್, ಸಂಪುಟ 2, ದಿನಾಂಕ 23–30 ಜನವರಿ 1903, ಪುಟ 3).

ನಾವು ಇತಿಹಾಸದ ಅಧ್ಯಯನ ಮಾಡಿದರೆ ತಿಳಿದುಬರುವುದೇನೆಂದರೆ, ಇದು ಪವಿತ್ರ ಖುರ್‌ಆನ್‌ನ ಕೇವಲ ಘೋಷಣೆಯಾಗಿರಲಿಲ್ಲ. ಇಸ್ಲಾಂ ಧರ್ಮ ಕೇವಲ ಬೋಧನೆಗೆ ಸೀಮಿತಪಡಿಸಲಿಲ್ಲ. ಬದಲು ಕಾರ್ಯರೂಪವಾಗಿ ಅದನ್ನು ಸರಕಾರಗಳ ಸಂವಿಧಾನದಲ್ಲಿ ಸೇರಿಸಲಾಗಿದೆ. ಇಸ್ಲಾಮಿಕ ಸರಕಾರಗಳ ಅಧೀನದಲ್ಲಿ ಮುಸ್ಲಿಮೇತರ ಅಲ್ಪಸಂಖ್ಯಾತರು ಅಥವಾ ತುಳಿತಕ್ಕೊಳಗಾದ ಮುಸ್ಲಿಮೇತರರಲ್ಲಿ ಅವರ ಗೌರವ ಮತ್ತು ಘನತೆ, ಜೀವ ಮತ್ತು ಆಸ್ತಿಯ ರಕ್ಷಣೆ ಸರಕಾರದ ಪ್ರಾಥಮಿಕ ಜವಾಬ್ದಾರಿ ಎಂದು ಘೋಷಿಸಲಾಯಿತು.

ಇಸ್ಲಾಮಿಕ ರಾಜ್ಯದ ಎಲ್ಲ ನಿವಾಸಿಗರು, ಅವರು ಯಾವ ಧರ್ಮದವರೇ ಆಗಲಿ ಅವರ ಧಾರ್ಮಿಕ ವ್ಯವಹಾರಗಳಲ್ಲಿ ಸಂಪೂರ್ಣವಾಗಿ ಮುಕ್ತರಾಗಿದ್ದಾರೆ. ಅವರ ಧಾರ್ಮಿಕ ವ್ಯವಹಾರಗಳಲ್ಲಿ ಯಾವುದೇ ಬಲವಂತವಿಲ್ಲ.

ಧಾರ್ಮಿಕ ವ್ಯವಹಾರಗಳಲ್ಲಿ ಎಲ್ಲ ನಿವಾಸಿಗಳಿಗೆ ಜಾತಿ ಧರ್ಮಗಳ ತಾರತಮ್ಯವಿಲ್ಲದೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಒಂದೆಡೆ ಹೇಳುತ್ತಾನೆ: "ಹೇಳು; ಇದು ನಿಮ್ಮ ಪ್ರಭುವಿನ ಕಡೆಯಿಂದಿರುವ ಸತ್ಯವಾಗಿದೆ. ಆದ್ದರಿಂದ ಯಾರು ಇಚ್ಛಿಸುತ್ತಾನೋ ಅವನು ನಂಬಲಿ. ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ." (18:30).

ಹಝ್ರತ್ ಖಲೀಫತುಲ್ ಮಸೀಹ್ ತೃತೀಯರು[ರಹ್] ಹೇಳುತ್ತಾರೆ: ಧಾರ್ಮಿಕ ಸ್ವಾತಂತ್ರ್ಯ ಕುರಿತು ಖುರ್‌ಆನ್ ವಚನ ಹೀಗಿದೆ: ಹೇಳು – ಎಲೈ ಜನರೇ, ನಿಮ್ಮ ಪ್ರಭುವಿನ ಕಡೆಯಿಂದ ನಿಮಗೆ ಸತ್ಯ ಬಂದಿರುತ್ತದೆ. ಯಾರಾದರೂ ಸತ್ಪಥವನ್ನು ಅನುಸರಿಸುವನಾದರೆ, ಅವನು ತನ್ನ ಒಳಿತಿಗಾಗಿಯೇ ಸತ್ಪಥವನ್ನು ಅನುಸರಿಸುತ್ತಾನೆ. ಯಾರಾದರೂ ದಾರಿತಪ್ಪಿ ಹೋಗುವವನಾದರೆ, ತನಗೆ ಹಾನಿಕರನಾಗಿಯೇ ಅವನು ದಾರಿ ತಪ್ಪುತ್ತಾನೆ. ನಾನು ನಿಮ್ಮ ಮೇಲ್ನೋಟಗಾರನಲ್ಲ." (10–109).

ಇದು ಅಂತ್ಯ ಕಾಲದವರೆಗೆ ಪೈಗಂಬರರ ಅನುಯಾಯಿಗಳಿಗೂ ಎಲ್ಲ ಮನುಷ್ಯರಿಗೂ ಇರುವ ಆಜ್ಞೆಯಾಗಿದೆ.

ಇನ್ನೊಂದೆಡೆ: **ಖದ್ ಜಾಅಕುಮುಲ್ ಹಖ್ಖು ಮಿನ್‌ರಬ್ಬಿಕುಮ್** – ಎಂದರೆ ನಿಮ್ಮ ಪ್ರಭುವಿನ ಕಡೆಯಿಂದ ಸತ್ಯ ಬಂದಿರುತ್ತದೆ. **ಫಮನಿಹ್‌ತದಾ** ಈಗ ಇಚ್ಛೆಯುಳ್ಳವರು ಮಾರ್ಗದರ್ಶನ ಪಡೆಯಬಹುದು. **ಫ ಇನ್ನಮಾ ಯಹ್‌ತದಿ ಲಿನಫ್‌ಸಿಹಿ** ಅವನು ತನ್ನ ಒಳಿತಿಗಾಗಿಯೇ ಸತ್ಯವನ್ನು ಅನುಸರಿಸುತ್ತಾನೆ. ಎಂದರೆ ಮನುಷ್ಯನಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಇಚ್ಛಿಸಿದರೆ ಮಾರ್ಗದರ್ಶನ ಪಡೆಯಲಿ. ಇಲ್ಲದಿದ್ದರೆ ದೇವನ ಕಡೆಯಿಂದಾಗಲಿ ಅವನ ಪ್ರವಾದಿಯ ಕಡೆಯಿಂದಾಗಲಿ ಯಾವ ಬಲವಂತವೂ ಇಲ್ಲ. ಆದರೆ **ವಮನ್‌ಝುಲ್ಲ ಫಇನ್ನಮಾ ಯಝಿಲ್ಲು ಅಲೈಹಾ** – ಯಾರಾದರೂ ದಾರಿತಪ್ಪಿ ಹೋಗುವವನಾದರೆ ತನಗೆ ಹಾನಿಕರವಾಗಿಯೇ ಅವನು ದಾರಿ ತಪ್ಪುತ್ತಾನೆ. ಆದ್ದರಿಂದ ಮನುಷ್ಯನ ಕರ್ತವ್ಯವಾಗಿದೆ – ಅವನು ಸರಿಯಾಗಿ ಯೋಚಿಸಿ ನಿರ್ಣಯ ಕೈಗೊಳ್ಳಬೇಕು. ಒಟ್ಟಿನಲ್ಲಿ ಅಲ್ಲಾಹನು ಮುಹಮ್ಮದ್ ಪೈಗಂಬರರ[ಸ] ಮೂಲಕ ಘೋಷಿಸಿದನು: ಎಲೈ ಜನರೇ, ನಿಮಗೆ ಸಂಪೂರ್ಣ ರೀತಿಯಲ್ಲಿ ಧಾರ್ಮಿಕ ಸ್ವಾತಂತ್ರ್ಯ ನೀಡಲಾಗಿದೆ. ಈಗ ನಿರ್ಣಯಿಸಿಕೊಳ್ಳುವ ಜವಾಬ್ದಾರಿ ನಿಮ್ಮದಾಗಿದೆ. ಮಾರ್ಗದರ್ಶನ ಪಡೆಯಬೇಕೋ ಅಥವಾ ದಾರಿತಪ್ಪಬೇಕೋ. ನಾನು ನಿಮ್ಮ

ಹೊಣೆಗಾರನಲ್ಲ. ನಾನು ನಿಮ್ಮ ಮೇಲ್ನೋಟಗಾರನಲ್ಲ. ನನ್ನ ಮೇಲೆ ನಿಮ್ಮ ಯಾವ ಜವಾಬ್ದಾರಿಯೂ ಇರುವುದಿಲ್ಲ. (ತಫ್‌ಸೀರ್ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ – ಪುಟ 440).

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಪೈಗಂಬರರನ್ನು(ಸ) ಸಂಬೋಧಿಸಿ ಎಲ್ಲ ಮುಸ್ಲಿಮರನ್ನು ಎಚ್ಚರಿಸಿರುತ್ತಾನೆ. "ನಿನ್ನ ಪ್ರಭು ಇಚ್ಛಿಸಿದ್ದರೆ ಭೂಲೋಕದಲ್ಲಿರುವ ಎಲ್ಲರೂ ವಿಶ್ವಾಸ ಹೊಂದಿರುತ್ತಿದ್ದರು. (ಆದರೆ ಅವನು ನಿರ್ಬಂಧಪಡಿಸುವುದಿಲ್ಲ.) ಹಾಗಿರುವಾಗ ಜನರು ವಿಶ್ವಾಸಿಗಳಾಗುವಂತೆ ನೀನು ಬಲವಂತಪಡಿಸುವಿಯೋ?" (10:100).

ಆದ್ದರಿಂದ ಪವಿತ್ರ ಖುರ್‌ಆನ್ ಬಲವಂತವಾಗಿ ಧರ್ಮ ಪರಿವರ್ತನೆ ಮಾಡುವುದನ್ನು ಸಂಪೂರ್ಣ ತಳ್ಳಿಹಾಕಿದೆ ಮತ್ತು ಧಾರ್ಮಿಕ ಸ್ವಾತಂತ್ರ್ಯ, ಸಮಾನತೆ ಮತ್ತು ಮನಸ್ಸಾಕ್ಷಿಯನ್ನು ಎತ್ತಿ ಹಿಡಿದಿದೆ. ಪ್ರವಾದಿ(ಸ) ತನ್ನ ಮಾದರಿಯಿಂದಾಗಿ ಪ್ರತಿಯೊಬ್ಬ ವ್ಯಕ್ತಿ ತನ್ನ ಧರ್ಮ ವ್ಯವಹಾರದಲ್ಲಿ ಸಂಪೂರ್ಣ ಸ್ವತಂತ್ರ ಎಂದು ಸಾಬೀತುಪಡಿಸಿದ್ದಾರೆ. ಅವರು ಬಲಾತ್ಕಾರ ಮತ್ತು ಹಿಂಸೆಯ ಬದಲು ಇಸ್ಲಾಮಿ ವಿಧಿ ಅನುಸಾರ ಕ್ಷಮೆ ಮತ್ತು ನ್ಯಾಯ ಸ್ಥಾಪನೆಯಲ್ಲಿ ಶತ್ರುಗಳನ್ನು ಕೂಡ ಕಡೆಗಣಿಸಬಾರದು ಎಂಬ ಶಿಕ್ಷಣವನ್ನು ನೀಡಿದ್ದಾರೆ.

ಪವಿತ್ರ ಖುರ್‌ಆನ್ ಧಾರ್ಮಿಕ ಸ್ವಾತಂತ್ರ್ಯ ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯವನ್ನು ಸ್ಪಷ್ಟವಾಗಿ ದೃಢಪಡಿಸಿದೆ. ಇನ್ನೊಂದೆಡೆ ಧಾರ್ಮಿಕ ಹಿಂಸೆ ಮತ್ತು ಬಲವಂತಿಕೆಯನ್ನು ತಳ್ಳಿ ಹಾಕಿದೆ. ಅದರ ಕೃತಿಕರೂಪ ನಮ್ಮ ನೇತಾರ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಸಾಬೀತುಗೊಳಿಸಿದ್ದಾರೆ. ಇಸ್ಲಾಮಿಕ ಶರೀಅತ್ ಪ್ರಕಾರ ಎಲ್ಲ ಸಂದರ್ಭದಲ್ಲೂ ಹಿಂಸೆ ಮತ್ತು ಬಲವಂತಿಕೆಯ ಉತ್ತರ ಕ್ಷಮೆ ಮತ್ತು ಕರುಣೆಯ ಮೂಲಕ ನೀಡುತ್ತಾ ಉದಾತ್ತ ಉದಾಹರಣೆಗಳನ್ನು ಸ್ಥಾಪಿಸಿದ್ದಾರೆ.

ಪವಿತ್ರ ಖುರ್‌ಆನ್ ಪದೇ ಪದೇ ಹಿಂಸೆ, ಬಲವಂತವನ್ನು ಖಂಡಿಸುತ್ತದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ: "ಒಂದು ಜನತೆ ನಿಮ್ಮನ್ನು ಪವಿತ್ರ ಮಸೀದಿಯಿಂದ ತಡೆಗಟ್ಟಿ (ನಿಮ್ಮೊಡನೆ) ತೋರಿಸಿದ ವಿರೋಧವು ಅವರೊಡನೆ ಅನ್ಯಾಯದಿಂದ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. ಸತ್ಕರ್ಮಗಳಲ್ಲಿ ಮತ್ತು ಅಲ್ಲಾಹನ ಆಜ್ಞೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಲ್ಲಿ ನೀವು ಪರಸ್ಪರ ಸಹಕರಿಸಿರಿ. (ಆದರೆ) ಪಾಪಕರ್ಮ ಮತ್ತು ಅನ್ಯಾಯವೆಸಗುವುದರಲ್ಲಿ ನೀವು ಅನ್ಯೋನ್ಯ ಸಹಕರಿಸಬಾರದು. ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ಖಂಡಿತವಾಗಿಯೂ ಅಲ್ಲಾಹನು ಕಠಿಣವಾಗಿ ಶಿಕ್ಷಿಸುವವನಾಗಿದ್ದಾನೆ." (5:3).

ಹಝ್ರತ್ ಖಲೀಫತುಲ್ ಮಸೀಹ್ ಪಂಚಮರು ಹೇಳುತ್ತಾರೆ: ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಆಜ್ಞೆ ನೀಡುತ್ತಾನೆ – ಲೋಕದಲ್ಲಿ ಶಾಂತಿಸ್ಥಾಪನೆಗೆ ನ್ಯಾಯಪರತೆ ಆವಶ್ಯಕವಾಗಿದೆ. ನಿಮ್ಮ ನ್ಯಾಯದ ಮಾನದಂಡ ಎಷ್ಟು ಉದಾತ್ತವಾಗಿರಬೇಕು ಎಂಬುದರ ಕುರಿತು ಖುರ್‌ಆನ್ ಹೇಳುತ್ತದೆ: "ಎಲೈ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತೀ ಸಮೀಪಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ." (ಪೋಪ್ ಕೆ ಇಸ್ಲಾಂ ಪರ್ ಇಅ್‌ತರಝಾತ್ ಕಾ ಜವಾಬ್ – ಪುಟ 47, ಎಡಿಶನ್ 2008).

ಪವಿತ್ರ ಖುರ್‌ಆನ್‌ನಲ್ಲಿ ಶಾಂತಿ ಸಮಾನತೆಯ ಬೋಧನೆಗಳಿಗೆ ಎಷ್ಟೊಂದು ಒತ್ತು ನೀಡಲಾಗಿದೆ ಎಂದರೆ, ಅಲ್ಲಾಹನು ಪೈಗಂಬರರ(ಸ) ಮೂಲಕ ಬಹುದೇವಾರಾಧಕರಿಗೂ ಕೂಡ ಶಾಂತಿಯಿಂದಿರಲು ಹಕ್ಕು ನೀಡಿದ್ದಾನೆ. ಅಲ್ಲಾಹು ಹೇಳಿದನು: "ಬಹುದೇವಾರಾಧಕರಲ್ಲಿ ಯಾರಾದರೂ ನಿನ್ನೊಡನೆ ಅಭಯಯಾಚಿಸಿದರೆ ಅವನಿಗೆ ಆಶ್ರಯ ನೀಡು. ಹಾಗೆ ಅವನು ಅಲ್ಲಾಹನ ವಚನ ಆಲಿಸುವಂತಾಗಲಿ. ಅನಂತರ ಅವನನ್ನು ಅವನ ಸುರಕ್ಷಿತ ಸ್ಥಳಕ್ಕೆ ತಲುಪಿಸು. ಇದು (ಈ ರಿಯಾಯಿತಿ) ಅವರು ತಿಳುವಳಿಕೆಯಿಲ್ಲದ ಜನರಾದುದರಿಂದಾಗಿದೆ." (9:6)

ಇದು ಸಹ ಧಾರ್ಮಿಕ ಸಮಾನತೆ ಕಾರಣದಿಂದ ಪವಿತ್ರ ಖುರ್‌ಆನ್ ಅನ್ಯಧರ್ಮೀಯರ ಒಳಿತುಗಳನ್ನು ಸ್ವೀಕರಿಸುತ್ತಾ ಹೇಳುತ್ತದೆ: "ಧನದ ರಾಶಿಯೊಂದನ್ನೇ ನೀನು ನಂಬಿಕೆಯಿಂದ ಒಪ್ಪಿಸಿದರೆ ನಿನಗೆ ಅದನ್ನು (ಹಾಗೆಯೇ) ಹಿಂತಿರುಗಿಸುವ ಕೆಲವರು ಗ್ರಂಥದವರ ಪೈಕಿಯಲ್ಲಿದ್ದಾರೆ. (ಅಂತೆಯೇ) ಒಂದು ದೀನಾರನ್ನು ನೀನು ನಂಬಿಕೆಯಿಂದ ಒಪ್ಪಿಸಿದರೆ ನೀನು ಅದನ್ನು ಪದೇ ಪದೇ ಕೇಳದಿದ್ದರೆ ಅದನ್ನು ಹಿಂತಿರುಗಿಸದ ಕೆಲವರೂ ಅವರ ಪೈಕಿಯಲ್ಲಿದ್ದಾರೆ. ಇದು 'ಈ ಅನಕ್ಷರಸ್ಥರ ವಿಷಯದಲ್ಲಿ ನಮ್ಮ ಮೇಲೆ ಆಕ್ಷೇಪ ಉಂಟಾಗಲು ಯಾವುದೇ ದಾರಿಯಿಲ್ಲ' ಎಂದು ಅವರು ಹೇಳುವ ಕಾರಣದಿಂದಾಗಿದೆ. ಅವರು ಅರಿತುಕೊಂಡೇ ಅಲ್ಲಾಹನ ಮೇಲೆ ಸುಳ್ಳು ಹೇಳುತ್ತಾರೆ." (3:76).

ಒಮ್ಮೆ ಹಝ್ರತ್ ಅಸ್ಮಾ ಬಿನ್ತ್ ಅಬೂಬಕರ್ ಅವರ ಮುಶ್ರಿಕ್ (ಬಹುದೇವಾರಾಧಕಿ) ತಾಯಿ ಬೇಸರಗೊಂಡು ಅವರನ್ನು ಭೇಟಿಯಾಗಲು ಮದೀನಕ್ಕೆ ಬಂದರು. ಅಸ್ಮಾ ಪ್ರವಾದಿಯೊಡನೆ ಕೇಳಿದರು: ನನಗೆ ನನ್ನ ತಾಯಿಯ ಸೇವೆ ಮಾಡಲು ಹಾಗೂ ಅವರೊಡನೆ ಉತ್ತಮವಾಗಿ ವ್ಯವಹರಿಸಲು ಅನುಮತಿ ಇದೆಯೇ? ಪ್ರವಾದಿ(ಸ) ಹೇಳಿದರು: ಹೌದು, ಅವರು ನಿಮ್ಮ ತಾಯಿಯಾಗಿದ್ದಾರೆ. ಈ ಬಗ್ಗೆ ಖುರ್‌ಆನ್‌ನಲ್ಲಿ ಈ ವಚನವಿದೆ: ನಿಮಗೆ ಯಾರು ಧಾರ್ಮಿಕ ವಿಷಯದಲ್ಲಿ ನಿಮ್ಮೊಡನೆ ಯುದ್ಧ ಸಾರಿಲ್ಲ, ಅವರೊಡನೆ ಉತ್ತಮವಾಗಿ ವ್ಯವಹರಿಸಲು ಅಲ್ಲಾಹನು ತಡೆಯುವುದಿಲ್ಲ. (ಬುಖಾರಿ).

ಪೈಗಂಬರ್(ಸ) ಉನ್ನತಮಟ್ಟದ ಧಾರ್ಮಿಕ ಸಮಾನತೆಯನ್ನು ಪ್ರದರ್ಶಿಸುತ್ತಾ ಮುಸ್ಲಿಂ, ಅಮುಸ್ಲಿಂ ಎಂಬ ತಾರತಮ್ಯವನ್ನು ಅಳಿಸಿ ಹಾಕಿದರು. ಅಷ್ಟೇ ಅಲ್ಲದೆ, ಮುಸ್ಲಿಮರಿಗಿಂತ ಅಮುಸ್ಲಿಮರೊಡನೆ ಹೆಚ್ಚು ಮೃದುವಾಗಿ ವರ್ತಿಸುತ್ತಿದ್ದರು. ಆದ್ದರಿಂದ ಮುಸಲ್ಮಾನರಿಗಿರುವ ಝಕಾತ್ ಮತ್ತು ಅಶ್ರ್ ಬದಲಾಗಿ ಮುಸ್ಲಿಮೇತರರಿಗೆ ಕೇವಲ ಜಿಝಿಯ ಎಂಬ ಸಾಮಾನ್ಯ ರೀತಿಯ ತೆರಿಗೆಯಷ್ಟೆ ವಿಧಿಸಿದರು. ಅದೇ ರೀತಿಯಲ್ಲಿ ಗುಲಾಮರಿಗೆ ಸ್ವಾತಂತ್ರ್ಯ ನೀಡುವ ಶಿಕ್ಷಣ ನೀಡಿ

ಅದರ ಕೃತ್ಯರೂಪವಾಗಿ ಹುನೈನ್ ಯುದ್ಧದ ಸಂದರ್ಭದಲ್ಲಿ ಸಾವಿರಾರು ಅಮುಸ್ಲಿಂ ಗುಲಾಮರನ್ನು ಬಿಡುಗಡೆಗೊಳಿಸಿದರು.

ಪವಿತ್ರ ಖುರ್‌ಆನ್ ಗ್ರಂಥದವರ ಪೈಕಿ ಒಂದು ವರ್ಗದ ಸದ್ಗುಣಗಳನ್ನು ವಿವರಿಸುತ್ತಾ ಹೀಗೆ ಧಾರ್ಮಿಕ ಸಮಾನತೆಯ ಬುನಾದಿಗಯನ್ನು ಸ್ಥಾಪಿಸಿದೆ. **"ಅವರು (ಎಲ್ಲರೂ) ಒಂದೇ ರೀತಿಯವರಲ್ಲ. (ತಮ್ಮ ಒಡಂಬಡಿಕೆಯಲ್ಲಿ) ಸ್ಥಿರತೆಯನ್ನು ತೋರಿಸುವ ಒಂದು ಗುಂಪು ಜನರು ಗ್ರಂಥದವರಲ್ಲಿದ್ದಾರೆ. ಅವರು ರಾತ್ರಿ ಸಮಯದಲ್ಲಿ ಅಲ್ಲಾಹನ ವಚನಗಳನ್ನು ಓದುತ್ತಾರೆ ಮತ್ತು (ಅವನ ಮುಂದೆ) ಸಾಷ್ಟಾಂಗವೆರಗುತ್ತಾರೆ."** (3:114).

ಪ್ರವಾದಿಯವರ(ಸ) ಧಾರ್ಮಿಕ ಸಮಾನತೆಯ ಇನ್ನೊಂದು ದೊಡ್ಡ ಉದಾಹರಣೆ ನಮಗೆ "ಮದೀನ ಒಡಂಬಡಿಕೆ"ಯಿಂದ ತಿಳಿದುಬರುತ್ತದೆ. ಮದೀನಕ್ಕೆ ಆಗಮಿಸಿದ ಮೇಲೆ ಪೈಗಂಬರರು(ಸ) ಮದೀನದ ಯಹೂದಿಯರೊಡನೆ ಒಂದು ಒಡಂಬಡಿಕೆ ಮಾಡಿಕೊಂಡರು. ಅದರ ಪ್ರಕಾರ ಮುಸಲ್ಮಾನರು ಮತ್ತು ಯಹೂದಿಯರು ಒಂದೇ ಸಮುದಾಯವಾದರು. ಹೀಗೆ ಯಹೂದಿಯರಿಗೆ ಮದೀನದಲ್ಲಿ ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಲಾಯಿತು. ಅವರ ಧಾರ್ಮಿಕ ಕಾನೂನುಗಳಂತೆಯೇ ಪೈಗಂಬರರು(ಸ) ನ್ಯಾಯ ತೀರ್ಮಾನ ಮಾಡುತ್ತಿದ್ದರು. ಪೈಗಬರರು(ಸ) ಯಹೂದಿಯರ ವಿದ್ಯಾಲಯಗಳಿಗೆ ಹೋಗಿ ಸಂಬೋಧಿಸಿದರು. ಅದೇ ರೀತಿಯಲ್ಲಿ ಯಹೂದಿಯರು ಪವಿತ್ರ ಮಸೀದಿಗೆ ಬಂದು ಪೈಗಂಬರರಿಂದ ತಮ್ಮ ಪ್ರಶ್ನೆಗಳಿಗೆ ಉತ್ತರ ಪಡೆಯುತ್ತಿದ್ದರು. ಅದೇ ರೀತಿ ಅವರು ಯಹೂದಿಯರ ಔತಣ ಸಹ ಸ್ವೀಕರಿಸುತ್ತಿದ್ದರು. ಒಮ್ಮೆ ಓರ್ವ ಸಾಮಾನ್ಯ ಯಹೂದಿಯ ಔತಣ ಸ್ವೀಕರಿಸಿ ಅವರ ರೊಟ್ಟಿ ಮತ್ತು ಪದಾರ್ಥ ಸವಿದರು. (ತಬ್‌ಖಾತುಲ್ ಕುಬ್ರಾ ಲಾಬಿನ್ ಸಅದ್ ಸಂಪುಟ 1 ಪುಟ 370–407).

ಪವಿತ್ರ ಖುರ್‌ಆನ್ ಅನ್ಯ ಧರ್ಮೀಯರ ಸ್ಥಾಪಕರನ್ನು ಮತ್ತು ಗುರುಗಳನ್ನು ಗೌರವಿಸಲು, ಆದರಿಸಲು ಹಾಗೂ ಕೀಳಾದ ಶಬ್ದಗಳನ್ನು ಬಳಸದಂತೆ ಉಪದೇಶ ನೀಡುತ್ತದೆ. ಖುರ್‌ಆನ್ ಹೇಳುತ್ತದೆ: **"**ಅಲ್ಲಾಹನ ಹೊರತು ಅವರು ಕರೆದು ಪ್ರಾರ್ಥಿಸುವವರನ್ನು ನೀವು ಹೀಯಾಳಿಸಬೇಡಿರಿ. ಆಗ ವಿರೋಧದಿಂದ ಅವರು ಸಹ ತಿಳುವಳಿಕೆಯಿಲ್ಲದೆ ಅಲ್ಲಾಹನನ್ನು ನಿಂದಿಸುವರು. ಹೀಗೆ ನಾವು ಪ್ರತಿಯೊಂದು ಸಮುದಾಯದವರಿಗೂ ಅವರ ಕೃತ್ಯವನ್ನು ಚಲೋದಾಗಿ ತೋರಿಸಿಕೊಟ್ಟಿದ್ದೇವೆ. ಆ ಮೇಲೆ ಅವರ ಪ್ರಭುವಿನ ಬಳಿಗೆಯೇ ಅವರ ಮರಳಿಕೆಯಾಗಿದೆ. ಆಗ ಅವರ ಕೃತ್ಯಗಳ ಬಗ್ಗೆ ಅವರಿಗೆ ಅವನು ವಿವರಿಸಿಕೊಡುವನು.**"** (6:109).

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಅವರು ಧಾರ್ಮಿಕ ಸಹಿಷ್ಣುತೆಯನ್ನು ಸಮರ್ಥಿಸುತ್ತಿದ್ದರು. ಹಝ್ರತ್ ಅಬೂ ಹುರೈರ ವರದಿ ಮಾಡುತ್ತಾರೆ: ಇಬ್ಬರು ಪುರುಷರು ಪರಸ್ಪರ ನಿಂದಿಸಲು ಪ್ರಾರಂಭಿಸಿದರು. ಅವರಲ್ಲಿ ಒಬ್ಬ ಮುಸಲ್ಮಾನನಾಗಿದ್ದನು, ಮತ್ತೊಬ್ಬ ಯಹೂದಿ. ಮುಸಲ್ಮಾನ ಹೇಳಿದನು: ಮುಹಮ್ಮದ್ ಪೈಗಂಬರರನ್ನು ಅಲ್ಲಾಹನು ಎಲ್ಲ ಲೋಕಗಳಲ್ಲಿ ಸರ್ವಶ್ರೇಷ್ಠರಾಗಿ ಆಯ್ಕೆ ಮಾಡಿದ್ದಾನೆ ಎಂದು ಅಲ್ಲಾಹನ ಆಣೆ ಹಾಕಿ ಹೇಳುತ್ತೇನೆ. ಆಗ ಯಹೂದಿಯನು ಹೇಳಿದನು: ಅಲ್ಲಾಹನಾಣೆ, ಅವನು ಮೂಸಾರನ್ನು ಎಲ್ಲ ಲೋಕಗಳಲ್ಲಿ ಶ್ರೇಷ್ಠರನ್ನಾಗಿ ಆಯ್ಕೆ ಮಾಡಿದ್ದಾನೆ. ಆಗ ಮುಸಲ್ಮಾನನು ಕೈ ಎತ್ತಿ ಯಹೂದಿಯ ಕಪಾಳಮೋಕ್ಷ ಮಾಡಿದನು. ಯಹೂದಿ ಪ್ರವಾದಿಯವರ ಬಳಿಗೆ ಬಂದು ದೂರನ್ನು ಸಲ್ಲಿಸಿದನು. ಆಗ ಪವಿತ್ರ ಪ್ರವಾದಿ(ಸ) ಮುಸ್ಲಿಮನಿಂದ ವಿವರಣೆಗಳನ್ನು ಕೇಳಿದರು ಮತ್ತು ಅನಂತರ ಹೇಳಿದರು: ನನಗೆ ಮೂಸಾರಿಗಿಂತ ಆದ್ಯತೆ ನೀಡುವುದು ಬೇಡ.
(ಬುಖಾರಿ).

ನಮ್ಮ ಪ್ರೀತಿಯ ಇಮಾಮರು ಸಯ್ಯದುನಾ ಹಝ್ರತ್ ಖಲೀಫತುಲ್ ಮಸೀಹ್ ಮೇಲ್ಕಾಣಿಸಿದ ವರದಿ ಆಧರಿಸಿ ವಿವರ ನೀಡುತ್ತಾ ಹೇಳುತ್ತಾರೆ: "ಪೈಗಂಬರರು(ಸ) ತೋರಿದ ಮನಸ್ಸಾಕ್ಷಿ ಹಾಗೂ ಧಾರ್ಮಿಕ ಸ್ವಾತಂತ್ರ್ಯದ ಗುಣಮಟ್ಟ ಇದಾಗಿತ್ತು. ತನ್ನ ಸರಕಾರವಿದೆ. ಮದೀನಕ್ಕೆ ವಲಸೆ ಬಂದ ನಂತರ ಅವರು ಮದೀನದ ಬುಡಕಟ್ಟು ಜನರೊಡನೆ ಮತ್ತು ಯಹೂದಿಯರಲ್ಲಿ ಶಾಂತಿ ಸ್ಥಾಪಿಸಲು ಒಂದು ಒಡಂಬಡಿಕೆ ಮಾಡಿದ್ದರು. ಅದರ ಪ್ರಕಾರ ಮುಸಲ್ಮಾನರು ಬಹುಸಂಖ್ಯಾತರಲ್ಲಿದ್ದರು ಅಥವಾ ಮುಸಲ್ಮಾನರೊಂದಿಗೆ ಜನರು ಸೇರಿಕೊಂಡರು. ಅವರು ಮುಸಲ್ಮಾನರಾಗಿರಲಿಲ್ಲ. ಆದ್ದರಿಂದ ಸರಕಾರ ಪೈಗಂಬರರ(ಸ) ಕೈವಶವಾಗಿತ್ತು. ಆದರೆ ಸರಕಾರದ ಉದ್ದೇಶ ಬೇರೆ ಪ್ರಜೆಗಳಿಗೆ, ಬೇರೆ ಜನರ ಭಾವನೆಗಳಿಗೆ ಸ್ಪಂದಿಸಬಾರದೆಂದಿರಲಿಲ್ಲ. ಪೈಗಂಬರರು(ಸ) ಎಲ್ಲ ಪ್ರವಾದಿಗಳಲ್ಲಿ ಸರ್ವಶ್ರೇಷ್ಠರು ಎಂಬ ಪವಿತ್ರ ಖುರ್‌ಆನಿನ ಸಾಕ್ಷ್ಯ ಇದ್ದಾಗಲೂ ಅವರು ಬೇರೆ ಪ್ರವಾದಿಗಳ ಸಲುವಾಗಿ ಶಾಂತಿಯನ್ನು ಕದಡಲು ಇಚ್ಛಿಸಲಿಲ್ಲ. ಅವರು ಆ ಯಹೂದಿಯ ಮಾತನ್ನು ಕೇಳಿ ಮುಸಲ್ಮಾನನಿಗೆಯೇ ಎಚ್ಚರಿಕೆ ನೀಡಿದರು – ತಮ್ಮ ಜಗಳಗಳಲ್ಲಿ ನೀವು ಪ್ರವಾದಿಗಳನ್ನು ಎಳೆಯಬೇಡಿರಿ ಎಂದು. ನಿಮ್ಮ ದೃಷ್ಟಿಯಲ್ಲಿ ನಾನು ಎಲ್ಲ ಪ್ರವಾದಿಗಳಲ್ಲಿ ಶ್ರೇಷ್ಠನು ನಿಜ; ಅಲ್ಲಾಹನು ಅದಕ್ಕೆ ಸಾಕ್ಷಿ ನೀಡಿದ್ದಾನೆ. ಆದರೆ ನಮ್ಮ ಸರಕಾರದಲ್ಲಿ ಅವರ ಪ್ರವಾದಿಗೆ ಏನೋ ಹೇಳಿ ಮನನೋಯಿಸಬಾರದು. ನಾನು ಅದಕ್ಕೆ ಅನುಮತಿ ಕೊಡುವುದಿಲ್ಲ. ನನ್ನನ್ನು ಗೌರವಿಸಬೇಕಾದರೆ ಇತರ ಪೈಗಂಬರರನ್ನು ಸಹ ಗೌರವಿಸಬೇಕಾದೀತು.

"ಇದಾಗಿತ್ತು ಪ್ರವಾದಿ ಮುಹಮ್ಮದ್ ಪೈಗಂಬರರ(ಸ) ನ್ಯಾಯ ಮತ್ತು ಸ್ವಾತಂತ್ರ್ಯದ ಗುಣಮಟ್ಟ. ತಮ್ಮವರ ಮತ್ತು ಇತರ ಎಲ್ಲರ ಗೌರವವನ್ನು ಸ್ಥಾಪಿಸಲು ಅವರು ಬದ್ಧರಾಗಿದ್ದರು. ಬದಲು, ಕೆಲ ಸಂದರ್ಭಗಳಲ್ಲಿ ಇತರರ ಭಾವನೆಗಳನ್ನು ಹೆಚ್ಚು ಗೌರವಿಸುತ್ತಿದ್ದರು."
(ಖುತ್‌ಬ ಜುಮುಅ 10 ಮಾರ್ಚ್ 2006).

ಅಲ್ಲಾಹನು ಹೇಳಿದನು: **"**ಧರ್ಮದ ಕಾರಣದಿಂದ ನಿಮ್ಮೊಡನೆ ಯುದ್ಧ ಮಾಡದವರೊಡನೆ ಮತ್ತು ನಿಮ್ಮ ಮನೆಗಳಿಂದ ನಿಮ್ಮನ್ನು ಹೊರಕ್ಕಟ್ಟದವರೊಡನೆ ನೀವು ಒಳಿತಿನಿಂದಲೂ ನ್ಯಾಯಯುತವಾಗಿಯೂ ವರ್ತಿಸುವುದನ್ನು ಅಲ್ಲಾಹನು ನಿಮಗೆ ವಿರೋಧಿಸುವುದಿಲ್ಲ. ಖಂಡಿತವಾಗಿಯೂ ನ್ಯಾಯಪಾಲಿಸುವವರನ್ನು ಅಲ್ಲಾಹನು ಪ್ರೀತಿಸುತ್ತಾನೆ.**"** (60:9).

ಇಸ್ಲಾಮ್ ಧರ್ಮವು ಶತ್ರು ಪಕ್ಷದಿಂದ ಹಿಂಸಿಸಲ್ಪಟ್ಟರೂ ಶಾಂತಿಸ್ಥಾಪನೆಗೋಸ್ಕರ ಅದಕ್ಕೆ ಸಮಾನವಾದ ಪ್ರತಿಕ್ರಿಯೆ ತೋರಿಸಲು

ಅನುಮತಿ ನೀಡಿದೆ. ಆದರೆ ಕ್ಷಮೆಯನ್ನು ನೀಡಿದರೆ ಅಲ್ಲಾಹನಿಗೆ ಅದು ಹೆಚ್ಚು ಇಷ್ಟದ ಕಾರ್ಯವಾಗಿದೆ. ಅಲ್ಲಾಹನು ಹೇಳುತ್ತಾನೆ: **"ಕೆಡುಕಿಗಿರುವ ಪ್ರತಿಫಲ ಅದಕ್ಕೆ ಸಮಾನವಾದ ಕೆಡುಕಾಗಿದೆ. ಆದರೆ ಯಾರಾದರೂ ಕ್ಷಮೆ ನೀಡಿದರೆ (ಮತ್ತು ಅದರ ಪರಿಣಾಮವಾಗಿ) ಒಳಿತುಂಟಾದರೆ ಅದರ ಪ್ರತಿಫಲ ಅವನಿಗೆ ಅಲ್ಲಾಹನಿಂದ ಲಭಿಸುವುದು. ದಿಟವಾಗಿಯೂ ಅವನು ದುಷ್ಕರ್ಮಿಗಳನ್ನು ಪ್ರೀತಿಸುವುದಿಲ್ಲ."** (42:41).

ಅಲ್ಲಾಹನ ಪವಿತ್ರವಾದ ನುಡಿ ಹೀಗಿದೆ: **"ಎಲೈ ಮನುಷ್ಯರೇ, ನಾವು ನಿಮ್ಮನ್ನು ಗಂಡು ಮತ್ತು ಹೆಣ್ಣಿನಿಂದ ಸೃಷ್ಟಿಸಿದೆವು. ನೀವು ಪರಸ್ಪರ ಗುರುತಿಸಲ್ಪಡಲಿಕ್ಕಾಗಿ ನಿಮ್ಮನ್ನು ಕುಲಗಳನ್ನಾಗಿಯೂ ಗೋತ್ರಗಳನ್ನಾಗಿಯೂ ಮಾಡಿರುವೆವು. ನಿಮ್ಮ ಪೈಕಿ ಹೆಚ್ಚು ಸ್ವಾತಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು. ದಿಟವಾಗಿಯೂ ಅಲ್ಲಾಹನು ಸರ್ವಜ್ಞನೂ ಎಲ್ಲ ಅರಿತವನೂ ಆಗಿದ್ದಾನೆ."** (49:14).

ಹಝ್ರತ್ ಪೈಗಂಬರ್(ಸ)ಹೀಗೆ ಘೋಷಿಸಿದರು: **"ಎಲೈ ಜನರೇ, ನಿಮ್ಮ ಪ್ರಭು ಒಬ್ಬನೇ ಮತ್ತು ನಿಮ್ಮ ಪಿತ ಒಬ್ಬನಾಗಿದ್ದಾನೆ. ಓರ್ವ ಅರಬಿಗೆ ಅರಬಿಯೇತರನ ಮೇಲೆ ಮತ್ತು ಓರ್ವ ಅರಬಿಯೇತರನಿಗೆ ಅರಬಿಯ ಮೇಲೆ ಯಾವ ರೀತಿಯ ಶ್ರೇಷ್ಠತೆಯೂ ಇಲ್ಲ. ಕಪ್ಪು ವ್ಯಕ್ತಿಯೊಬ್ಬನ ಮೇಲೆ ಬಿಳಿ ವ್ಯಕ್ತಿಗೆ ಮತ್ತು ಒಬ್ಬ ಬಿಳಿ ವ್ಯಕ್ತಿಯ ಮೇಲೆ ಕಪ್ಪು ವ್ಯಕ್ತಿಗೆ ಯಾವ ಶ್ರೇಷ್ಠತೆಯೂ ಇಲ್ಲ. ಸಾತ್ವಿಕತೆಗೆ ಮಾತ್ರ ಶ್ರೇಷ್ಠತೆ ಇದೆ."**

ಈ ಬಗ್ಗೆ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಹೇಳುತ್ತಾರೆ: "ಹಝ್ರತ್ ಪೈಗಂಬರ್(ಸ) ತನ್ನ ಕೊನೆಯ ಧರ್ಮೋಪದೇಶದಲ್ಲಿ ಎಲ್ಲ ಮುಸಲ್ಮಾನರಿಗೆ ಆಜ್ಞಾಪಿಸಿದರು – ನೀವು ಸದಾ ನೆನಪಿಡಿರಿ, ಯಾವುದೇ ಅರಬಿಯನಿಗೆ ಅರಬಿಯೇತರನ ಮೇಲೆ ಯಾವ ಶ್ರೇಷ್ಠತೆಯೂ ಇಲ್ಲ. ಯಾವ ಅರಬಿಯೇತರನಿಗೆ ಅರಬಿಯನ ಮೇಲೆ ಯಾವ ಶ್ರೇಷ್ಠತೆಯೂ ಇಲ್ಲ. ಅವರು ಬೋಧಿಸಿದರು: ಶ್ವೇತವರ್ಣೀಯನಿಗೆ ಕರಿಯನಿಗಿಂತ ಶ್ರೇಷ್ಠತೆ ಇಲ್ಲ. ಕಪ್ಪು ವ್ಯಕ್ತಿಗೆ ಬಿಳಿಯನಿಗಿಂತ ಶ್ರೇಷ್ಠತೆ ಇಲ್ಲ. ಆದ್ದರಿಂದ ಎಲ್ಲ ರಾಷ್ಟ್ರಗಳು ಮತ್ತು ಜನಾಂಗಗಳ ಜನರು ಸಮಾನರು ಎಂಬುದು ಇಸ್ಲಾಮಿನ ಸ್ಪಷ್ಟ ಬೋಧನೆಯಾಗಿದೆ. ತಾರತಮ್ಯ ಮತ್ತು ಪೂರ್ವಗ್ರಹವಿಲ್ಲದೆ ಎಲ್ಲ ಜನರು ಸಮಾನ ಹಕ್ಕುಗಳನ್ನು ಪಡೆಯಬೇಕು ಎಂದು ಅವರು ಸ್ಪಷ್ಟಪಡಿಸಿದರು. ಇದು ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ದತೆಗೆ ಆಧಾರವಾಗಿರುವ ಮೂಲಭೂತ ಮತ್ತು ಸುವರ್ಣ ತತ್ವವಾಗಿದೆ." (ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿಮಾರ್ಗ ಪುಟ 94).

ಪ್ರವಾದಿ(ಸ) ಯಹೂದಿ ತಂಡದ ಕೂಟಗಳಿಗೆ ಹಾಜರಾಗುತ್ತಿದ್ದರೆ, ಅವರು ಯಹೂದಿಯರನ್ನು ಚೆನ್ನಾಗಿ ನಡೆಸಿಕೊಳ್ಳುತ್ತಿದ್ದರು. ಒಬ್ಬ ಯಹೂದಿ ಪ್ರವಾದಿಯವರ ಸಭೆಯಲ್ಲಿ ಸೀನಿದರೆ, ಅಲ್ಲಾಹನು ನಿಮಗೆ ಮಾರ್ಗದರ್ಶನ ನೀಡಲಿ ಮತ್ತು ನಿಮ್ಮ ಸ್ಥಿತಿಯನ್ನು ಸುಧಾರಿಸಲಿ ಎಂದು ಪ್ರಾರ್ಥಿಸುತ್ತಿದ್ದರು. (ಅಲ್ ಖಸಾಯಸ್).

ಹಝ್ರತ್ ಪೈಗಂಬರ್(ಸ) ಯಹೂದಿಯರಲ್ಲಿ ಯಾರಾದರೂ ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದು ತಿಳಿದು ಬಂದರೆ ಅವರನ್ನು ಉಪಚರಿಸಲು ಅವರ ಮನೆಗೆ ಹೋಗುತ್ತಿದ್ದರು. ಅವರು ಮದೀನದಲ್ಲಿ ಒಬ್ಬ ಯಹೂದಿಯ ಮನೆಯಲ್ಲಿ, ಮನೆಯ ಸೇವಕನು ಅನಾರೋಗ್ಯದಲ್ಲಿದ್ದಾಗ ಉಪಚರಿಸಲು ಸ್ವಯಂ ಅವರ ಮನೆಗೆ ತೆರಳಿದರು. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ 3 ಪುಟ 175).

ಪವಿತ್ರ ಪ್ರವಾದಿ(ಸ) ಅವರು ಅನ್ಯಧರ್ಮದ ಜನರ ಮೃತರನ್ನು ಸಹ ಗೌರವಿಸುತ್ತಿದ್ದರು. ಹಾಗೆ ಅವರು ಮಾನವೀಯ ಮೌಲ್ಯಗಳನ್ನು ಮತ್ತು ಗೌರವವನ್ನು ಸ್ಥಾಪಿಸಿದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಅಬೀ ಲೈಲ ಹೇಳುತ್ತಾರೆ: ಸಹಲ್ ಬಿನ್ ಹನೀಫ್ ಮತ್ತು ಖೈಸ್ ಬಿನ್ ಸಅದ್ ಖಾದ್ಸಿಯಾದಲ್ಲಿ ಕುಳಿತಿದ್ದರು. ಅವರ ಬಳಿಯಿಂದ ಅಂತ್ಯಕ್ರಿಯೆಯ ಮೆರವಣಿಗೆ ಹಾದು ಹೋದಾಗ ಅವರಿಬ್ಬರೂ ಎದ್ದು ನಿಂತರು. ಅದು ಧಿಮಿ ಮೃತದೇಹ ಎಂದು ಹೇಳಿದಾಗ, ಅವರಿಬ್ಬರೂ ಹೇಳಿದರು: ಒಂದು ಸಂದರ್ಭದಲ್ಲಿ ಪ್ರವಾದಿಯವರ ಬಳಿಯಿಂದ ಒಂದು ಅಂತ್ಯಕ್ರಿಯೆಯ ಮೆರವಣಿಗೆ ಹಾದು ಹೋದಾಗ ಪ್ರವಾದಿ(ಸ) ಗೌರವ ಸೂಚಿಸಲು ಎದ್ದು ನಿಂತರು. ಅದು ಯಹೂದಿಯ ಅಂತ್ಯಕ್ರಿಯೆಯ ಮೆರವಣಿಗೆಯಾಗಿದೆ ಎಂದು ತಿಳಿಸಲಾಯಿತು. ಆಗ ಪ್ರವಾದಿ(ಸ) ಹೇಳಿದರು: **ಅಲೈಸತ್ ನಫ್‌ಸನ್** – ಅವನು ಮನುಷ್ಯನಲ್ಲವೇ? (ಬುಖಾರಿ).

ನಮ್ಮ ಪ್ರೀತಿಯ ಇಮಾಮರು ಸಯ್ಯದುನಾ ಹಝ್ರತ್ ಖಲೀಫತುಲ್ ಮಸೀಹ್ ಪಂಚಮರು ತನ್ನ ಖುತುಬ ಜುಮುಅ 10 ಮಾರ್ಚ್ 2006ರಲ್ಲಿ ಮೇಲಿನ ಘಟನೆ ವಿವರಿಸಿದ ನಂತರ ಹೇಳಿದರು: "ಇದು ಇತರ ಧರ್ಮಗಳಿಗೆ ಮತ್ತು ಮಾನವೀಯತೆಗೆ ಗೌರವವಾಗಿದೆ. ಈ ಅಭಿವ್ಯಕ್ತಿಗಳು ಮತ್ತು ಮಾದರಿಗಳು ಧಾರ್ಮಿಕ ಸಹಿಷ್ಣುತೆಯ ವಾತಾವರಣವನ್ನು ಸೃಷ್ಟಿಸುತ್ತವೆ. ಇವುಗಳು ಪರಸ್ಪರ ಮೃದುವಾದ ಭಾವನೆಗಳನ್ನು ಉಂಟುಮಾಡುವ ಅಭಿವ್ಯಕ್ತಿಗಳು. ಇದರಿಂದ ಪ್ರೀತಿ, ಪ್ರೇಮ ಮತ್ತು ಶಾಂತಿಯ ವಾತಾವರಣ ಸೃಷ್ಟಿಯಾಗುತ್ತದೆ. ಇಂದಿನ ಲೌಕಿಕವಾದಿಗಳ ಕ್ರಿಯೆಗಳಿಂದ ದ್ವೇಷದ ವಾತಾವರಣ ಸೃಷ್ಟಿಯಾಗದೆ ಬೇರೇನೂ ಇಲ್ಲ."

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಗ್ರಂಥಾನುಸಾರಿಗಳು (ಯಹೂದಿ) ಮತ್ತು ಬಹುದೇವಾರಾಧಕರು ತುಂಬಾ ಕೆಟ್ಟದಾಗಿ ಬಿಟ್ಟಿದ್ದರು. ದುಷ್ಕರ್ಮಿಗಳು ಸಹ ಸತ್ಕರ್ಮ ಮಾಡಿದ್ದೇವೆ ಎಂದು ಭಾವಿಸುತ್ತಿದ್ದರು. ಅಪರಾಧ ಮಾಡುವುದಕ್ಕೆ ಹಿಂಜರಿಯುತ್ತಿರಲಿಲ್ಲ. ಶಾಂತಿಭಂಗ ಮಾಡುವುದು ಅವರ ಹವ್ಯಾಸವಾಗಿತ್ತು. ಅಂತಹ ಸಮಯದಲ್ಲಿ ಸರ್ವಶಕ್ತನಾದ ಅಲ್ಲಾಹನು ಪ್ರವಾದಿಯವರ ಕೈಯಲ್ಲಿ ಅಧಿಕಾರವನ್ನು ನೀಡಿ ಬಡವರನ್ನು ರಕ್ಷಿಸಬಯಸಿದ್ದನು. ಅರಬ್ ದೇಶವು ಅರಾಜಕತೆಯಿಂದ ತುಂಬಿ ಹೋಗಿತ್ತು. ಅವರು ಯಾವ ಆಡಳಿತಕ್ಕೂ ಒಳಗಾಗಿರಲಿಲ್ಲ. ಆದ್ದರಿಂದ ಪ್ರತಿಯೊಂದು ಪಂಗಡದವರು ಮುಕ್ತವಾಗಿ ಮನಬಂದಂತೆ ನಿರ್ಭಯದಿಂದ ಜೀವನ ಕಳೆಯುತ್ತಿದ್ದರು. ಅವರಿಗೆ ಶಿಕ್ಷೆ ನೀಡುವ ಯಾವ ಕಾನೂನೂ ಇರಲಿಲ್ಲ. ಆದ್ದರಿಂದ ದಿನೇ ದಿನೇ ಅಪರಾಧಗಳು ಹೆಚ್ಚಾಗುತ್ತಿದ್ದವು. ಆಗ ಅಲ್ಲಾಹನು ಆ ದೇಶದ ಮೇಲೆ ಕೃಪೆದೋರಿ ಪ್ರವಾದಿ ಮುಹಮ್ಮದ್ ಪೈಗಂಬರರನ್ನು(ಸ) ಕೇವಲ ಆ ದೇಶಕ್ಕೆ ಸಂದೇಶವಾಹಕನಾಗಿ ಕಳುಹಿಸಲಿಲ್ಲ. ಬದಲು, ಆ ದೇಶದ ರಾಜನಾಗಿಯೂ ಮಾಡಿದನು ಮತ್ತು ಪವಿತ್ರ ಖುರ್‌ಆನನ್ನು ಸಿವಿಲ್,

ಕ್ರಿಮಿನಲ್ ಮತ್ತು ಆರ್ಥಿಕ ಮಾರ್ಗದರ್ಶನಗಳನ್ನು ನೀಡುವ ಕಾನೂನಿನಂತೆ ಪೂರ್ಣಗೊಳಿಸಿದನು. ಆದ್ದರಿಂದ ಪ್ರವಾದಿ ಮುಹಮ್ಮದ್[ಸ] ರಾಜರಾಗಿ ಎಲ್ಲ ಪಂಗಡಗಳ ಆಡಳಿತಗಾರರಾದರು. ಪ್ರತಿಯೊಂದು ಧರ್ಮದವರು ತಮ್ಮ ಪ್ರಕರಣಗಳನ್ನು ಅವರ ತೀರ್ಮಾನಕ್ಕೆ ಬಿಡುತ್ತಿದ್ದರು. ಒಮ್ಮೆ ಒಬ್ಬ ಮುಸ್ಲಿಂ ಮತ್ತು ಒಬ್ಬ ಯಹೂದಿಯ ನಡುವೆ ಒಂದು ಪ್ರಕರಣ ನಡೆಯಿತು. ತನಿಖೆಯ ನಂತರ ಯಹೂದಿಯ ಪಕ್ಷದಲ್ಲಿ ನಿರ್ಣಯ ಕೊಟ್ಟರು ಮತ್ತು ಮುಸ್ಲಿಮ್ ತಪ್ಪಿತಸ್ಥ ಎಂದು ವಿಧಿಸಿದರು. ಆದ್ದರಿಂದ ಪವಿತ್ರ ಖುರ್‌ಆನ್ ಓದದ ಕೆಲವು ಅಜ್ಞಾನಿ ವಿರೋಧಿಗಳು ಎಲ್ಲ ವಿಷಯಗಳನ್ನು ಪ್ರವಾದಿಯವರ ಪ್ರವಾದಿತ್ವಕ್ಕೆ ಸಂಬಂಧ ಜೋಡಿಸುತ್ತಾರೆ. ಅದಾಗ್ಯೂ ಇಂತಹ ಶಿಕ್ಷೆಗಳು ಖಿಲಾಫತ್ ಎಂದರೆ ರಾಜಪ್ರಭುತ್ವ ನೆಲೆಯಲ್ಲಿ ಕೊಡಲಾಗುತ್ತಿತ್ತು.

ಬನೀ ಇಸ್ರೇಲರಲ್ಲಿ ಹಝ್ರತ್ ಮೂಸಾ[ಅ] ನಂತರ ಪ್ರವಾದಿಗಳು ಮತ್ತು ರಾಜರು ಬೇರೆ ಬೇರೆ ಆಗುತ್ತಿದ್ದರು. ರಾಜರು ರಾಜಕೀಯ ವ್ಯವಹಾರಗಳ ಮೂಲಕ ಶಾಂತಿಯನ್ನು ಕಾಪಾಡುತ್ತಿದ್ದರು. ಆದರೆ ಮುಹಮ್ಮದ್ ಪೈಗಂಬರರ ಸಮಯದಲ್ಲಿ ಈ ಎರಡು ವ್ಯವಹಾರಗಳನ್ನು ಅವರೇ ನೋಡಿಕೊಳ್ಳುವಂತೆ ಅಲ್ಲಾಹನು ಅಧಿಕಾರ ನೀಡಿದ್ದನು. ಅಪರಾಧಿಗಳನ್ನು ಬೇರೆಯಾಗಿ ನೋಡಿಕೊಳ್ಳುತ್ತಿದ್ದರು. ಉಳಿದ ಜನರೊಂದಿಗೆ ಬೇರೆ ರೀತಿಯಾಗಿ ವರ್ತಿಸುತ್ತಿದ್ದರು. ಅದು ಈ ಕೆಳಗಿನ ವಚನದಿಂದ ಸ್ಪಷ್ಟವಾಗುತ್ತದೆ. **"ಗ್ರಂಥ ನೀಡಲ್ಪಟ್ಟವರೊಡನೆ ಮತ್ತು ಅನಕ್ಷರಸ್ಥರೊಡನೆ, 'ನೀವು ಸಹ ಅಲ್ಲಾಹನಿಗೆ ಸ್ವಯಂ ಅರ್ಪಿಸಿಕೊಂಡಿರುವಿರೋ?' ಎಂದು ಕೇಳು. ಅವರು ಹಾಗೆ ಅರ್ಪಿಸಿದರೆ ಅವರು ಸತ್ಪಥವನ್ನು ಹೊಂದಿದರು (ಎಂದು ತಿಳಿದುಕೋ.) ಆದರೆ ಅವರು ಮುಖ ತಿರುಗಿಸಿದರೆ, ಸಂದೇಶವನ್ನು ತಲುಪಿಸುವುದು ಮಾತ್ರ ನಿನ್ನ ಕರ್ತವ್ಯವಾಗಿದೆ."** (3:21). ಈ ವಚನದಲ್ಲಿ ಅವರೊಡನೆ ಯುದ್ಧ ಮಾಡುವುದು ಸಹ ನಿಮ್ಮ ಕೆಲಸವಾಗಿದೆ ಎಂದು ಹೇಳಲಾಗಿಲ್ಲ. ಯುದ್ಧವು ಮುಸ್ಲಿಮರನ್ನು ಕೊಲ್ಲುವ ಅಥವಾ ಸಾರ್ವಜನಿಕ ಶಾಂತಿಗೆ ಭಂಗ ತರುವ ಮತ್ತು ಕಳ್ಳತನ ಮತ್ತು ದರೋಡೆಯಲ್ಲಿ ತೊಡಗಿರುವ ಅಪರಾಧಿಗಳಿಗೆ. ಈ ಯುದ್ಧವು ಸಂದೇಶವಾಹಕನ ನೆಲೆಯಲ್ಲಿ ಆಗದೆ ರಾಜನ ನೆಲೆಯಲ್ಲಿ ಆಗುತ್ತಿತ್ತು. ಅಲ್ಲಾಹನು ಹೇಳುತ್ತಾನೆ: **"ನಿಮ್ಮ ವಿರುದ್ಧ ಯುದ್ಧ ಮಾಡುವವರೊಡನೆ ಅಲ್ಲಾಹನ ಮಾರ್ಗದಲ್ಲಿ ನೀವು ಸಹ ಯುದ್ಧ ಮಾಡಿರಿ. ಆದರೆ ಅತಿಕ್ರಮಣ ಮಾಡಬೇಡಿರಿ. ಅತಿಕ್ರಮಣ ಮಾಡುವವರನ್ನು ಅಲ್ಲಾಹನು ಪ್ರೀತಿಸುವುದಿಲ್ಲ."** (2 :191). (ಚಶ್ಮಯೆ ಮಅ್‌ರಿಫತ್, ರೂಹಾನೀ ಖಝಾಇನ್ ಸಂಪುಟ 23, ಪುಟ 242–243).

ಸಾರಾಂಶದಲ್ಲಿ, ಪವಿತ್ರ ಖುರ್‌ಆನ್ ಧಾರ್ಮಿಕ ಸಹಿಷ್ಣುತೆಯ ಬೋಧನೆಗಳು ಮತ್ತು ತತ್ವಗಳನ್ನು ವಿವರಿಸಿದೆ. ಇದು ಜಗತ್ತಿನಲ್ಲಿ ಶಾಂತಿ ಸ್ಥಾಪನೆಗೆ ಸಾಕಷ್ಟು ಪರ್ಯಾಪ್ತವಾಗಿದೆ. ಇದಲ್ಲದೆ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಅವರು ಪ್ರಾಯೋಗಿಕವಾಗಿ ಜಾರಿಗೆ ತಂದ ಖುರ್‌ಆನ್ ಬೋಧನೆಗಳು ಮತ್ತು ಅವರು ಸ್ಥಾಪಿಸಿದ ಸಹಿಷ್ಣುತೆ ಮತ್ತು ಉತ್ತಮ ನಡವಳಿಕೆಯ ವಿಶಿಷ್ಟ ಮತ್ತು ಉನ್ನತ ಉದಾಹರಣೆಗಳು ಸಹ ವಿಶ್ವದ ಇತಿಹಾಸದ ಅಮೂಲ್ಯವಾದ ನಿಧಿಯಾಗಿದೆ. ಅದು ಜಗತ್ತಿನ ಅಸ್ತಿತ್ವ ಇರುವವರೆಗೆ ಮಾನವರಿಗೆ ಶಾಂತಿಯ ತೊಟ್ಟಿಲಾಗಿರುವುದು.

ಅಲ್ಲಾಹನು ನಮಗೆ ಪವಿತ್ರ ಖುರ್‌ಆನಿನ ಈ ಬೋಧನೆಗಳನ್ನು ಉತ್ತಮ ರೀತಿಯಲ್ಲಿ ಕೃತಿಗೆ ತರುವ ಮೂಲಕ ಈ ಭೂಲೋಕವನ್ನು ಸ್ವರ್ಗಮಯವನ್ನಾಗಿ ಮಾಡುವ ಸೌಭಾಗ್ಯ ಕರುಣಿಸಲಿ – ಆಮೀನ್.

**(ಭಾಷಾಂತರ: ಮುಹಮ್ಮದ್ ಇಸ್ಮಾಈಲ್, ಬೆಂಗಳೂರು).**

♦

**10ನೇ ಪುಟದಿಂದ**

ಇಸ್ಲಾಮ್ ಧರ್ಮಕ್ಕೆ ಸಂಬಂಧಿಸಿ ಸುಳ್ಳು ಪ್ರಚಾರ ಮಾಡಿದವರು ತಮ್ಮ ಸ್ವಾರ್ಥ ಲಾಭಕ್ಕೋಸ್ಕರ ಮಾಡಿದ್ದಾರೆಂದು ನಿಮಗೆ ತಿಳಿಯುವುದು. ಅಂತಹ ಜನರಿಗೆ ನೈಜ ಇಸ್ಲಾಮ್‌ನೊಂದಿಗೆ ಯಾವ ಸಂಬಂಧವೂ ಇಲ್ಲ.

ಇಸ್ಲಾಮ್ ಧರ್ಮ ಪ್ರೀತಿ, ವಾತ್ಸಲ್ಯ ಮತ್ತು ಭ್ರಾತೃತ್ವವನ್ನು ಉಪದೇಶಿಸುತ್ತದೆ. ಲೋಕದ ಜನರು ಪ್ರೀತಿ, ವಾತ್ಸಲ್ಯ ಮತ್ತು ಭ್ರಾತೃತ್ವ ಭಾವನೆಯೊಂದಿಗೆ ಜೀವಿಸಲು ಸರ್ವಶಕ್ತನಾದ ದೇವನು ಅನುವು ಮಾಡಿಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಎಲ್ಲದಕ್ಕಿಂತ ಮಿಗಿಲಾಗಿ ಲೋಕದ ಜನರು ತಮ್ಮ ಸೃಷ್ಟಿಕರ್ತನನ್ನು ಗುರುತಿಸಿ ಅವನನ್ನು ಆರಾಧಿಸುವವರಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಜಝಾಕುಮುಲ್ಲಾಹ್, ಅಲ್ಲಾಹನು ನಿಮಗೆಲ್ಲರಿಗೂ ಉತ್ತಮ ಪ್ರತಿಫಲ ನೀಡಲಿ. ನಿಮಗೆ ಧನ್ಯವಾದಗಳು.

♦

# LOVE FOR ALL

# HATRED FOR NONE

# LET'S MAKE IT HEAVEN

# ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವನ ಚರಿತ್ರೆ

* ಜಹೀರ ಅನಸ್, ಬೆಂಗಳೂರು

ಮುಹಮ್ಮದ್ ಪೈಗಂಬರರ(ಸ) ಜೀವನವು ಅತ್ಯಂತ ಯಶಸ್ಸಿನ ಜೀವನವಾಗಿತ್ತು. ಅವರ ಉನ್ನತ ನೈತಿಕ ಗುಣಗಳಲ್ಲಿ, ಅವರ ಆಧ್ಯಾತ್ಮಿಕ ಶಕ್ತಿ, ಅವರ ಉನ್ನತ ನಿರ್ಣಯ, ಅವರ ಬೋಧನೆಯ ಶ್ರೇಷ್ಠತೆ ಮತ್ತು ಪರಿಪೂರ್ಣತೆ, ಸಂಕ್ಷಿಪ್ತವಾಗಿ ಹೇಳುವುದಾದರೆ, ಅವರ ಜೀವನದ ಪ್ರತಿಯೊಂದು ಅಂಶದಲ್ಲೂ, ಅವರು ಅಪಾರ ಪ್ರಕಾಶಮಾನವಾದ ಚಿಹ್ನೆಗಳನ್ನು ಪ್ರದರ್ಶಿಸಿದರು. ಅವರು ದೈವಿಕ ಗುಣಗಳ ಅಭಿವ್ಯಕ್ತಿಗೆ ಓರ್ವ ಪರಿಪೂರ್ಣ ಉದಾಹರಣೆಯಾಗಿದ್ದರು.

ಮುಹಮ್ಮದ್ ಪೈಗಂಬರ್(ಸ) ಮಕ್ಕಾದಲ್ಲಿ ಜನಿಸಿದರು. ಎಳೆವಯಸಿನಲ್ಲೇ ತಂದೆ-ತಾಯಿಯನ್ನು ಕಳೆದುಕೊಂಡು, ತಾತ ಅಬ್ದುಲ್ ಮುತ್ತಲಿಬ್‌ರ ಪೋಷಣೆಯಲ್ಲಿ ಬೆಳೆದರು. ನಂತರ ಚಿಕ್ಕಪ್ಪ ಅಬೂತಾಲಿಬ್ ಬಹಳ ಪ್ರೀತಿ-ವಾತ್ಸಲ್ಯದಿಂದ ಅವರನ್ನು ಸಾಕಿದರು. ವ್ಯಾಪಾರದಲ್ಲಿ ಅತ್ಯಂತ ಪ್ರಾಮಾಣಿಕತೆಯನ್ನು ಮೆರೆದು ಮಕ್ಕಾದ ಎಲ್ಲ ಗೋತ್ರಗಳ ಜನರಿಗೂ ಅಚ್ಚುಮೆಚ್ಚಿನವರಾಗಿದ್ದರು. ಬಾಲ್ಯದಿಂದಲೇ ಇವರ ಸತ್ಯಸಂಧತೆ, ವಿನಯಶೀಲತೆ ಜನರ ಗಮನ ಸೆಳೆದಿತ್ತು.

ಅಂದಿನ ಕಾಲದಲ್ಲಿ ಅರಬ್‌ನ ವಾತಾವರಣವು ಸಾಮಾಜಿಕವಾಗಿ ಕಲುಷಿತವಾಗಿತ್ತು. ಮದ್ಯಪಾನ, ಅಶ್ಲೀಲ ನೃತ್ಯ, ಜೂಜು ಯುವಕರ ಮನಸ್ಸನ್ನು ರಂಜಿಸುತ್ತಿದ್ದವು. ಬಲಶಾಲಿಯಾದವನು ದುರ್ಬಲನನ್ನು ದೋಚುವುದು ಸಕ್ರಮವೆಂಬಂತೆ ನಡೆಯುತಿತ್ತು. ಸ್ತ್ರೀಯರನ್ನು ಜಾನುವಾರುಗಳಂತೆ ಮಾರುವುದು, ಕೆಲವೆಡೆ ಹೆಣ್ಣುಮಗುವನ್ನು ಜೀವಂತ ಹೂಳುವುದು ಸಾಮಾನ್ಯವಾಗಿತ್ತು. ಅಂತಹ ಸಂದರ್ಭದಲ್ಲಿ ಉತ್ತಮ ಚಾರಿತ್ರ್ಯ, ಗುಣನಡತೆ, ಸತ್ಯ ಮತ್ತು ನ್ಯಾಯಪಾಲನೆಯ ಮನೋಭಾವದಿಂದ ಮುಹಮ್ಮದ್ ಪೈಗಂಬರ್(ಸ) ಗೌರವಾರ್ಹರಾಗಿದ್ದರು.

ಮುಹಮ್ಮದ್ ಪೈಗಂಬರ್(ಸ) ಸಮಯ ಸಿಕ್ಕಿದಾಗ ಮಕ್ಕಾ ಹೊರವಲಯದ ಹಿರಾ ಎಂಬ ಗುಹೆಯಲ್ಲಿ ಧ್ಯಾನಮಗ್ನರಾಗುತ್ತಿದ್ದರು. ದೇವದೂತ ಜಿಬ್ರೀಲರ ಮೂಲಕ ಪೈಗಂಬರ್ ಅವರಿಗೆ ಅವತೀರ್ಣಗೊಂಡ ಪವಿತ್ರ ಖುರ್‌ಆನ್, ಮಾನವನ ಸಮಗ್ರ ಆಧ್ಯಾತ್ಮಿಕ ಮತ್ತು ಲೌಕಿಕ ಉನ್ನತಿಯ ಕುರಿತು ಉಪದೇಶಿಸುತ್ತದೆ.

ಮುಹಮ್ಮದ್ ಪೈಗಂಬರ್(ಸ) ಅನಕ್ಷರಸ್ಥರಾದರೂ, ಅವರು ಮನುಕುಲಕ್ಕೆ ನೀಡಿರುವ ಸಮಗ್ರ ಜೀವನಪದ್ಧತಿಯ ಪಾಠ ಒಂದು ಅದ್ಭುತವೇ ಸರಿ. ತಿನ್ನುವುದು, ನಿದ್ರಿಸುವುದು, ಸಂತಾನೋತ್ಪತ್ತಿ ಮತ್ತು ಲೌಕಿಕ ಜೀವನದ ಏರಿಕೆಯಷ್ಟೇ ಬದುಕಿನ ಗುರಿಯಲ್ಲ, ಕೆಡುಕನ್ನು ತಡೆಯುವ, ಅನ್ಯಾಯದ ವಿರುದ್ಧ ಹೋರಾಡುವ, ಮಾನವೀಯತೆಯೊಂದಿಗೆ ಜನಸೇವೆ ಮಾಡುವುದು ಬದುಕಿನ ಉದ್ದೇಶ ಆಗಿರಬೇಕೆಂದು ಅವರು ಸಾರಿದರು.

ಇಡೀ ಪ್ರಪಂಚಕ್ಕೆ ಪ್ರವಾದಿಯಾಗಿದ್ದರೂ ಪುಣ್ಯ ಪ್ರವಾದಿ ಮುಹಮ್ಮದ್(ಸ) ಸರಳತೆಯಿಂದ ಜೀವನ ನಡೆಸಿದರು. ಅವರು ಚಾಪೆಯ ಮೇಲೆ ಮಲಗುತ್ತಿದ್ದರು, ತಮ್ಮ ಚಪ್ಪಲಿ ತಾವೇ ಹೊಲಿದುಕೊಳ್ಳುತ್ತಿದ್ದರು. ದನದ ಹಾಲು ಕರೆಯುತ್ತಿದ್ದರು, ಮನೆಯನ್ನು ಗುಡಿಸಿ ಶುಚಿ ಮಾಡುತ್ತಿದ್ದರು. ಪತ್ನಿಗೆ ಅಡುಗೆಯಲ್ಲಿ ನೆರವಾಗುತ್ತಿದ್ದರು.

ಮನುಷ್ಯರಲ್ಲಿ ಭೇದ ಸೃಷ್ಟಿಸುವುದನ್ನು ಮುಹಮ್ಮದ್ ಪೈಗಂಬರ್(ಸ) ಒಪ್ಪುತ್ತಿರಲಿಲ್ಲ. ಇದಕ್ಕಾಗಿ ಅವರು ಅನೇಕ ಜನರ ತಿರಸ್ಕಾರ ಬಹಿಷ್ಕಾರಗಳನ್ನು, ಅವಮಾನಗಳನ್ನು, ದೈಹಿಕ ಹಲ್ಲೆಯನ್ನು ಅನುಭವಿಸಬೇಕಾಯಿತು. ಹಾಗಿದ್ದರೂ ದೇವಭಯವೊಂದನ್ನು ಬಿಟ್ಟು ಅವರು ಇನ್ನ್ಯಾವುದಕ್ಕೂ ಹೆದರುತ್ತಿರಲಿಲ್ಲ.

ಮುಹಮ್ಮದ್ ಪೈಗಂಬರ್(ಸ) ಸಂಪತ್ತಿನ ಬಲವರ್ಧನೆ ಸಲ್ಲದು, ಅದು ಸಮಾಜದ ಬಡವರಿಗೂ ತಲುಪಬೇಕು ಎನ್ನುವುದಕ್ಕಾಗಿ ಸಂಪತ್ತಿನ ಕಡ್ಡಾಯ ದಾನ (ಝುಕಾತ್) ವ್ಯವಸ್ಥೆ ಜಾರಿಗೆ ತಂದರು. ಬಡ್ಡಿಯನ್ನು ನಿಷೇಧಿಸಿದರು. 'ಕಾರ್ಮಿಕರ ಬೆವರು ಭೂಮಿಗೆ ಬೀಳುವ ಮುನ್ನ ಅವನ ಕೂಲಿಯನ್ನು ಕೊಡಿರಿ' ಎಂದು ಆದೇಶಿಸಿದರು.

ಮುಹಮ್ಮದ್ ಪೈಗಂಬರ್(ಸ) ಶಿಶುಹತ್ಯೆಯನ್ನೂ ಕೊನೆಗೊಳಿಸಿದರು ಮತ್ತು ಮಹಿಳೆಯರ ಹಲವು ಹಕ್ಕುಗಳನ್ನು ಸ್ಥಾಪಿಸಿದರು. ಮೂವರು ಹೆಣ್ಣುಮಕ್ಕಳನ್ನು ಹೆತ್ತು, ಉತ್ತಮ ಶಿಕ್ಷಣ ನೀಡಿ, ಯೋಗ್ಯ ವರನಿಗೆ ವಿವಾಹ ಮಾಡಿಕೊಡುವ ಹೆತ್ತವರಿಗೆ ಸ್ವರ್ಗದ ಭರವಸೆ ನೀಡಿದರು. ಆಸ್ತಿಯಲ್ಲಿ ಮಹಿಳೆಗೆ ಹಕ್ಕು ನೀಡಿ ಎಂದು ಉಪದೇಶಿಸಿದರು. ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು.

ಮುಹಮ್ಮದ್ ಪೈಗಂಬರ್(ಸ) ಅವರು ಇಡೀ ಮನುಕುಲವೇ ಒಂದು ಎಂದು ಸಾರಿದರು. ಧರ್ಮ, ಮೈಬಣ್ಣ, ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ಪರಸ್ಪರ ಮನುಷ್ಯರ ನಡುವೆ ಮೇಲು ಕೀಳು ಇಲ್ಲ ಎಂದು ಸಾರಿದರು. ಗುಲಾಮ ಪದ್ಧತಿಯನ್ನು ತೊಲಗಿಸಲು ಯತ್ನಿಸಿದರು. 'ನೆರೆಮನೆಯಲ್ಲಿ ಹಸಿದವರಿದ್ದರೆ ಹೊಟ್ಟೆ ತುಂಬಾ ಉಣ್ಣುವವನು ನಮ್ಮವನಲ್ಲ' ಎಂದು ಉಪದೇಶಿಸಿದರು. ಸರ್ವಶಕ್ತ, ನಿರಾಕಾರ, ಸ್ವಯಂಸಂಪೂರ್ಣನೂ ಆಗಿರುವ ಏಕದೇವನನ್ನು ಆರಾಧಿಸಿ ಎನ್ನುವುದೇ ಅವರ ಧರ್ಮಪ್ರಚಾರದ ತಿರುಳಾಗಿತ್ತು.


ಶಾಂತಿಯ ಸಂದೇಶವಾಹಕರಾದ ಮುಹಮ್ಮದ್ ಪೈಗಂಬರ್(ಸ) 'ಗಡಿ ಮತ್ತು ಪ್ರಜೆಗಳ ರಕ್ಷಣೆಗಾಗಿ ಮಾತ್ರವೇ ಯುದ್ಧ ಮಾಡಬೇಕು' ಎಂಬ ಧೋರಣೆಯನ್ನು ಹೊಂದಿದ್ದರು. ಅಲ್ಲಾಹನ ಸಂದೇಶವನ್ನು ಜಗತ್ತಿಗೆ ಸಾರುವ ಸಂದರ್ಭದಲ್ಲಿ ಅನೇಕರು, ಪ್ರವಾದಿವರ್ಯರಿಗೆ ಮತ್ತು ಅವರ ಅನುಯಾಯಿಗಳಿಗೆ ಹಿಂಸೆಯಿಂದ ತಡೆಯೊಡ್ಡಲು ಪ್ರಯತ್ನಿಸುತ್ತಿದ್ದರು. ಆಗ ಅನಿವಾರ್ಯವಾಗಿ ಅವರೊಡನೆ ಹೋರಾಡಬೇಕಾಗುತ್ತಿತ್ತು. ಅಂತಹ ಯುದ್ಧ ಸಂದರ್ಭಗಳಲ್ಲಿ ಪ್ರವಾದಿವರ್ಯರು ತಮ್ಮ ಅನುಯಾಯಿಗಳಿಗೆ "ನೀವು ಯಾರಿಗೂ ಮೋಸಮಾಡಬಾರದು. ಹೆಂಗಸರನ್ನು, ವೃದ್ಧರನ್ನು ಕೂಸುಗಳನ್ನು ಕೊಲ್ಲಕೂಡದು. ಯುದ್ಧವನ್ನು ಮಾಡದೆ ಮನೆಯಲ್ಲಿ ಇರುವ ನಾಗರಿಕರಿಗೆ ತೊಂದರೆಮಾಡಬಾರದು. ಜನರ ಆಹಾರ, ವಸ್ತ್ರಗಳನ್ನು ನಾಶ ಮಾಡಬಾರದು. ಸತ್ಯವನ್ನು ಸ್ಥಾಪಿಸುವುದಕ್ಕಾಗಿ ಮಾತ್ರ ನಮ್ಮ ಹೋರಾಟ" ಎಂದು ಉಪದೇಶಿಸುತ್ತಿದ್ದರು. ಹೀಗೆಯೇ ಹಲವು ಮಹಾ ಮಾನವೀಯತೆಯನ್ನು ಮುಹಮ್ಮದ್ ಪೈಗಂಬರ್(ಸ) ಸಾರಿದರು.

35ನೇ ಪುಟಕ್ಕೆ

# ಶಾಂತಿ ಮತ್ತು ಪರಸ್ಪರ ಗೌರವದ ಸ್ಥಾಪನೆ ಇಸ್ಲಾಮಿನ ಅಧ್ಯಾಪನೆಗಳ ಬೆಳಕಿನಲ್ಲಿ

**ಯುನೆಸ್ಕೋದಲ್ಲಿ ನಡೆದ ಗೌರವಾರ್ಥ ಸಮಾರಂಭದಲ್ಲಿ ಜಾಗತಿಕ ಅಹ್ಮದಿಯಾ ಸಂಘಟನೆಯ ನೇತಾರ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹಿಬ್‌ರ ಭಾಷಣದ ಸಂಗ್ರಹ**

**8 ಅಕ್ಟೋಬರ್, 2019; ಪ್ಯಾರಿಸ್**




ಯುನೆಸ್ಕೋದ ಮೂಲಭೂತ ಉದ್ದೇಶಗಳು ಅತ್ಯುತ್ತಮ ಮತ್ತು ಪ್ರಶಂಸಾರ್ಹ. ಲೋಕದಲ್ಲಿಡೀ ಶಾಂತಿ ಮತ್ತು ಪರಸ್ಪರ ಗೌರವವನ್ನು ಸ್ಥಾಪಿಸುವುದು, ಕಾನೂನು ಮತ್ತು ಮಾನವ ಹಕ್ಕುಗಳ ಪಾಲನೆ, ಶಿಕ್ಷಣವನ್ನು ಪ್ರೋತ್ಸಾಹಿಸುವುದು, ಬಡತನವನ್ನು ಕೊನೆಗೊಳಿಸುವುದು, ಜಾಗತಿಕ ಮಟ್ಟದಲ್ಲಿ ದೀರ್ಘಕಾಲೀನ ಪ್ರಗತಿ ಮತ್ತು ಬೆಳವಣಿಗೆ ಎಂಬೀ ಕಾರ್ಯಗಳು ಯುನೆಸ್ಕೋದ ಉದ್ದೇಶಗಳಾಗಿವೆ. ಮುಂದಿನ ಪೀಳಿಗೆಗೆ ಪ್ರಯೋಜನಕರವಾದುದನ್ನು ಮನುಷ್ಯನು ಬಿಟ್ಟು ಹೋಗಬೇಕು ಎಂಬುದನ್ನು ಖಚಿತಪಡಿಸಲು ಕೂಡ ಯುನೆಸ್ಕೋ ಪ್ರಯತ್ನಿಸುತ್ತದೆ.

## ಇಸ್ಲಾಮಿನ ಅಧ್ಯಾಪನೆಗಳು ಮನುಷ್ಯನ ಪ್ರಗತಿಗಾಗಿ ನಿರಂತರ ಪ್ರಯತ್ನ ಮಾಡಲು ಅವಶ್ಯಪಡುತ್ತದೆ

ಇಸ್ಲಾಮಿನ ಅಧ್ಯಾಪನೆಗಳು ಕೂಡ ಇದೇ ಉದ್ದೇಶಗಳನ್ನು ಈಡೇರಿಸಲು ಮತ್ತು ಮನುಷ್ಯನ ಪ್ರಗತಿಗಾಗಿ ನಿರಂತರ ಪ್ರಯತ್ನ ಮಾಡಲು ಅವಶ್ಯಪಡುತ್ತದೆ ಎಂದು ಗೊತ್ತಾಗುವಾಗ ಬಹುಶಃ ನಿಮಗೆ ಆಶ್ಚರ್ಯವಾಗಬಹುದು. ಇಂತಹ ಸೇವೆಯು ಪವಿತ್ರ ಖುರ್‌ಆನಿನ ಮೊದಲ ಅಧ್ಯಾಯವನ್ನು ಆಧರಿಸಿದೆ. ಅತ್ಯುನ್ನತನಾದ ಅಲ್ಲಾಹನು ಸಕಲ ಲೋಕಗಳ ಪ್ರಭು ಎಂದು ಅದರಲ್ಲಿ ಪ್ರಸ್ತಾಪಿಸಲಾಗಿದೆ. ಈ ವಚನ ಇಸ್ಲಾಮಿನ ವಿಶ್ವಾಸಾದರ್ಶಗಳ ಕೇಂದ್ರಬಿಂದುವಾಗಿದೆ. ಅಲ್ಲಾಹನು ಅವರ ಪ್ರಭು ಮತ್ತು ಅವರ ಅನ್ನದಾತ ಮಾತ್ರವಲ್ಲ, ಬದಲಾಗಿ ಇಡೀ ಮನುಕುಲದ ಪ್ರಭು ಮತ್ತು ಪೋಷಕ ಅವನೇ ಆಗಿದ್ದಾನೆ ಎಂದು ಇದರಲ್ಲಿ ಮುಸ್ಲಿಮರಿಗೆ ತಿಳಿಸಲಾಗಿದೆ. ಅವನು ದಯಾವಂತನೂ ಕಾರುಣ್ಯವಂತನೂ ಆಗಿದ್ದಾನೆ. ಜಾತಿ, ಪಂಥ ಮತ್ತು ಬಣ್ಣಗಳನ್ನು ಲೆಕ್ಕಿಸದೆ ಅವನು ತನ್ನ ಎಲ್ಲ ಸೃಷ್ಟಿಗಳ ಆವಶ್ಯಕತೆಗಳನ್ನು ಈಡೇರಿಸುವವನಾಗಿದ್ದಾನೆ. ಇದನ್ನು ಮುಂದಿರಿಸಿಕೊಂಡು ಇಡೀ ಮನುಕುಲವನ್ನು ಸಮಾನವಾಗಿ ಸೃಷ್ಟಿಸಲಾಗಿದೆ ಎಂದು ಯಥಾರ್ಥ ಮುಸ್ಲಿಮನು ದೃಢವಾಗಿ ನಂಬುತ್ತಾನೆ. ಆದ್ದರಿಂದ ವಿಶ್ವಾಸಗಳ ಭಿನ್ನತೆಯನ್ನು ಕಡೆಗಣಿಸಿ ಪರಸ್ಪರ ಗೌರವ, ಸಹೋದರತೆ ಎಂಬೀ ಗುಣಗಳು ಸಮಾಜದಲ್ಲಿ ರೂಢಮೂಲವಾಗಿರಬೇಕು.

ಮುಸ್ಲಿಮರು ಅಲ್ಲಾಹನ ಮಾರ್ಗದಲ್ಲಿ ಚಲಿಸಬೇಕು ಮತ್ತು ಅವನ ಗುಣಗಳನ್ನು ಅಳವಡಿಸಿಕೊಳ್ಳಬೇಕು ಎಂಬ ಸುಂದರವಾದ ತತ್ವವನ್ನು ಪವಿತ್ರ ಖುರ್‌ಆನಿನ ಎರಡನೇ ಅಧ್ಯಾಯದ 139ನೇ ವಚನದಲ್ಲಿ ಪ್ರಸ್ತಾಪಿಸಲಾಗಿದೆ. ಅಲ್ಲಾಹನ ಕಾರುಣ್ಯ ಎಲ್ಲವನ್ನು ಆವರಿಸಿದೆ. ಅವನು ಎಲ್ಲರಿಗೂ ಜೀವನಾಧಾರ ದಯಪಾಲಿಸುವವನಾಗಿದ್ದಾನೆ. ಅವನ ಅಸ್ತಿತ್ವವನ್ನೇ ನಿರಾಕರಿಸುವವರಿಗೂ ಅವನು ದಯಪಾಲಿಸುತ್ತಾನೆ. ಅಲ್ಲಾಹನ ವಿರುದ್ಧ ಕೆಟ್ಟದ್ದಾಗಿ ಮಾತನಾಡುವವರ ಅಥವಾ ಲೋಕದಲ್ಲಿ ದೌರ್ಜನ್ಯ ನಡೆಸುವವರ ಮೇಲೂ ಅಲ್ಲಾಹನು ಕೃಪೆದೋರುತ್ತಾನೆ.

ಇಸ್ಲಾಮಿನಲ್ಲಿ ದೇವನು ಸ್ಥಾಪಿಸಿದ ರಕ್ಷೆ ಮತ್ತು ಶಿಕ್ಷೆಯ ತತ್ವಶಾಸ್ತ್ರಕ್ಕೆ ಪರಲೋಕದೊಂದಿಗೆ ಹೆಚ್ಚಿನ ಸಂಬಂಧವಿದೆ. ಇಹಲೋಕ ಜೀವಿತದಲ್ಲಿ ಅಲ್ಲಾಹನು ತನ್ನ ಕೃಪೆ ಮತ್ತು ಕರುಣೆಯನ್ನು ತೋರಿಸುತ್ತಾ ಇರುತ್ತಾನೆ. ದೈವಿಕ ಗುಣಗಳನ್ನು ಅಳವಡಿಸಿಕೊಂಡು ಇತರ ಜನರೊಡನೆ ಕರುಣೆ ಮತ್ತು ಸಹಾನುಭೂತಿಯಿಂದ ವರ್ತಿಸಲು ಅಲ್ಲಾಹನು ಮುಸ್ಲಿಮರನ್ನು ಉಪದೇಶಿಸಿರುವನು. ಆದ್ದರಿಂದ ವಿಶ್ವಾಸ, ಸಂಸ್ಕೃತಿ, ವರ್ಣ ಮತ್ತು ಜನಾಂಗೀಯತೆಯ ವ್ಯತ್ಯಾಸವನ್ನು ಕಡೆಗಣಿಸಿ ಸದಾ ಇತರರ ಆವಶ್ಯಕತೆಗಳನ್ನು ಪೂರೈಸುವುದು ಮತ್ತು ಅವರೊಂದಿಗೆ ಯಾವಾಗಲೂ ಸಹಾನುಭೂತಿಯಿಂದ ವರ್ತಿಸುವುದು ಹಾಗೂ ಅವರ ಭಾವನೆಗಳನ್ನು ಅರಿಯುವುದು ಮುಸ್ಲಿಮರ ಧಾರ್ಮಿಕ

ಬಾಧ್ಯತೆಯಾಗಿದೆ.

## ಇಸ್ಲಾಂ ಮುಂದಿರಿಸುವ ನಿಷ್ಪಕ್ಷ ನ್ಯಾಯಾಂಗ ವ್ಯವಸ್ಥೆ

ಜಗಳಗಳನ್ನು ಬಗೆಹರಿಸಲು ಪಕ್ಷಪಾತರಹಿತವಾದ ನ್ಯಾಯದ ಏರ್ಪಾಡನ್ನು ಇಸ್ಲಾಮಿನ ಪ್ರವಾದಿ ಮುಹಮ್ಮದ್ ಪೈಗಂಬರ್(ಸ) ಸ್ಥಾಪಿಸಿದರು. ಶ್ರೀಮಂತ, ಶಕ್ತಿಶಾಲಿ, ಬಡವ, ನಿರ್ಗತಿಕ, ಎಲ್ಲರಿಗೂ ಒಂದೇ ಕಾನೂನು ಇರುವುದು ಹಾಗೂ ಎಲ್ಲರೊಂದಿಗೂ ಆ ರಾಜ್ಯದ ಕಾನೂನಿನ ಪ್ರಕಾರವೇ ವರ್ತಿಸಲಾಗುವುದು ಎಂದು ಪ್ರವಾದಿ(ಸ) ಸ್ಪಷ್ಟಪಡಿಸಿದರು. ಉದಾಹರಣೆಗೆ, ಒಮ್ಮೆ ಪ್ರಭಾವಶಾಲಿ ಕುಟುಂಬದ ಮಹಿಳೆಯೊಬ್ಬಳು ಒಂದು ಅಪರಾಧವನ್ನು ಮಾಡಿದ್ದಳು. ಅವಳ ಅಪರಾಧವನ್ನು ಕಡೆಗಣಿಸಬೇಕು ಎಂದು ಅನೇಕರು ಅಭಿಪ್ರಾಯಪಟ್ಟರು. ಆದರೆ ಪವಿತ್ರ ಪ್ರವಾದಿ(ಸ) ಆ ಸಲಹೆಯನ್ನು ಅಂಗೀಕರಿಸಲಿಲ್ಲ. "ನನ್ನ ಪುತ್ರಿ ಅಪರಾಧ ಮಾಡಿದರೆ ಕೂಡ ಅವಳಿಗೂ ಯಾವುದೇ ರಿಯಾಯಿತಿ ಲಭಿಸದು ಮತ್ತು ಅವಳನ್ನೂ ಕಾನೂನಿನ ಪ್ರಕಾರ ಶಿಕ್ಷಿಸಲಾಗುವುದು" ಎಂದು ಹಝ್ರತ್ ಪೈಗಂಬರ್(ಸ) ವ್ಯಕ್ತಪಡಿಸಿದರು.

## ಇಸ್ಲಾಂ ಮುಂದಿರಿಸುವ ವ್ಯಾಪಾರದ ನೈತಿಕತೆ

ನ್ಯಾಯವಾಗಿ ಮತ್ತು ಪ್ರಾಮಾಣಿಕತೆಯಿಂದ ವ್ಯಾಪಾರ ನಡೆಯಲಿಕ್ಕಾಗಿ ಪವಿತ್ರ ಖುರ್‌ಆನಿನ ಬೋಧನೆಗಳ ಪ್ರಕಾರ ಇಸ್ಲಾಮಿನ ಪ್ರವಾದಿ(ಸ) ವ್ಯಾಪಾರಕ್ಕಾಗಿಯೂ ಒಂದು ನೀತಿಶಾಸ್ತ್ರವನ್ನು ಸ್ಥಾಪಿಸಿದರು. ಗುಲಾಮಗಿರಿ ವ್ಯಾಪಕವಾಗಿ ಹರಡಿದ್ದ ಮತ್ತು ಗುಲಾಮರೊಂದಿಗೆ ಅತ್ಯಂತ ಕ್ರೂರವಾಗಿ ವರ್ತಿಸಲಾಗುತ್ತಿದ್ದ ಆ ಕಾಲದಲ್ಲಿ ಇಸ್ಲಾಮಿನ ಪ್ರವಾದಿ(ಸ) ಸಮಾಜದಲ್ಲಿ ಒಂದು ಕ್ರಾಂತಿಯನ್ನು ಉಂಟುಮಾಡಿದ್ದರು. ಗುಲಾಮರೊಂದಿಗೆ ಅನುಕಂಪ ಮತ್ತು ಗೌರವದಿಂದ ವರ್ತಿಸಲು ಯಜಮಾನರಿಗೆ ಆದೇಶ ನೀಡಲಾಯಿತು. ಗುಲಾಮರನ್ನು ಸ್ವತಂತ್ರಗೊಳಿಸಲಿಕ್ಕಾಗಿಯೂ ಹಝ್ರತ್ ಪೈಗಂಬರ್(ಸ) ಅನೇಕ ಬಾರಿ ಶಕ್ತವಾಗಿ ಉಪದೇಶಿಸಿದರು.

## ಸಾರ್ವಜನಿಕ ಆರೋಗ್ಯದ ಕುರಿತು ಇಸ್ಲಾಮಿನ ಅಧ್ಯಾಪನೆಗಳು

ಹಝ್ರತ್ ಪೈಗಂಬರರ(ಸ) ನೇತೃತ್ವದಲ್ಲಿ ಸಾರ್ವಜನಿಕ ಆರೋಗ್ಯ ಸಂರಕ್ಷಣೆಯ ವ್ಯವಸ್ಥೆಯನ್ನು ಸಹ ಸ್ಥಾಪಿಸಲಾಯಿತು. ನಗರಗಳ ಸ್ವಚ್ಛತೆ ಮತ್ತು ಶುಚಿತ್ವದ ಪದ್ಧತಿಯನ್ನು ತಯಾರು ಮಾಡಲಾಯಿತು. ವೈಯಕ್ತಿಕ ಶುಚಿತ್ವ ಮತ್ತು ಆರೋಗ್ಯ ಸಂರಕ್ಷಣೆಯ ಬಗ್ಗೆಯೂ ಜನರಿಗೆ ಬೋಧನೆ ನೀಡಲಾಯಿತು. ನಗರದ ರಸ್ತೆಗಳನ್ನು ವಿಶಾಲ ಮತ್ತು ಉತ್ತಮಗೊಳಿಸಲಾಯಿತು. ಪ್ರಜೆಗಳ ಆವಶ್ಯಕತೆಗಳನ್ನು ಗೊತ್ತುಮಾಡಲು ಮತ್ತು ಇತರ ವಿವರಗಳನ್ನು ಪಡೆಯಲಿಕ್ಕಾಗಿ ಜನಗಣತಿ ನಡೆಸಲಾಯಿತು.

## ಬಡವರ ಹಕ್ಕುಗಳನ್ನು ಪೂರೈಸುವುದಕ್ಕೆ ಸಂಬಂಧಿಸಿ ಇಸ್ಲಾಮಿನ ಶಿಕ್ಷಣ

ದರಿದ್ರರ ಮತ್ತು ನಿರ್ಗತಿಕರ ಸಾಮಾಜಿಕ ನೆಲೆ ಉತ್ತಮಗೊಳ್ಳಲಿಕ್ಕಾಗಿ ಮತ್ತು ಅವರು ಘನತೆಯಿಂದ ಇರಲಿಕ್ಕಾಗಿ ಅವರ ಹಕ್ಕುಗಳನ್ನು ಪೂರೈಸುವುದಕ್ಕೆ ಸಂಬಂಧಿಸಿ ಹಝ್ರತ್ ಪೈಗಂಬರ್(ಸ) ಅನೇಕ ವಿಧಾನಗಳನ್ನು ಮತ್ತು ಯೋಜನೆಗಳನ್ನು ಆರಂಭಿಸಿದರು. ಜನರು ಹೆಚ್ಚಾಗಿ ಶ್ರೀಮಂತರನ್ನು ಮತ್ತು ಶಕ್ತಿಶಾಲಿಗಳನ್ನು ಗೌರವಿಸುತ್ತಾರೆ. ಆದರೆ ಇತರರ ಭಾವನೆಗಳ ಬಗ್ಗೆ ಕಾಳಜಿವಹಿಸದ ಮತ್ತು ತನ್ನ ಸ್ವಂತ ಕಾರ್ಯಗಳ ಕುರಿತು ಮಾತ್ರ ಗಮನವಿರಿಸುವ ಶ್ರೀಮಂತ ವ್ಯಕ್ತಿಗಿಂತ ಸಭ್ಯ ಮತ್ತು ಸದ್ಗುಣಗಳನ್ನು ಹೊಂದಿರುವ ಬಡವ ಅನೇಕ ಪಟ್ಟು ಉತ್ತಮ ಎಂದು ಪ್ರವಾದಿ(ಸ) ಹೇಳಿದರು.

ಗುಲಾಮಗಿರಿಯನ್ನು ಕೊನೆಗೊಳಿಸಲು ಪವಿತ್ರ ಪ್ರವಾದಿ(ಸ) ಸದಾ ಪರಿಶ್ರಮಿಸಿದರು. ಗುಲಾಮರನ್ನು ಸ್ವತಂತ್ರಗೊಳಿಸಲು ಅವರು ತನ್ನ ಅನುಚರರಿಗೆ ಪದೇ ಪದೇ ಉಪದೇಶ ನೀಡಿದರು. ಬೇಗನೇ ತಮ್ಮ ಗುಲಾಮರನ್ನು ಸ್ವತಂತ್ರಗೊಳಿಸಲು ಸಾಧ್ಯವಿಲ್ಲವೆಂದಾದರೆ ಕನಿಷ್ಠ ಪಕ್ಷ ತಮ್ಮ ಊಟ ಮತ್ತು ಉಡಿಗೆಯ ಬಗ್ಗೆ ಕಾಳಜಿವಹಿಸುವ ರೀತಿಯಲ್ಲೇ ಗುಲಾಮರ ಊಟ ಮತ್ತು ಉಡಿಗೆಯ ಬಗ್ಗೆ ಕಾಳಜಿ ವಹಿಸಬೇಕು ಎಂದು ಪವಿತ್ರ ಪ್ರವಾದಿ(ಸ) ಹೇಳಿದರು.

## ಇಸ್ಲಾಮಿನ ಶಿಕ್ಷಣ ಮಹಿಳೆಯರ ಹಕ್ಕುಗಳ ಧ್ವಜವಾಹಕವಾಗಿದೆ

ಹೆಚ್ಚಾಗಿ ಎತ್ತಿ ಹಿಡಿಯಲಾಗುವ ಮತ್ತೊಂದು ಸಮಸ್ಯೆ ಮಹಿಳೆಯರ ಹಕ್ಕುಗಳ ಕುರಿತಾಗಿದೆ. ಇಸ್ಲಾಂ ಮಹಿಳೆಯರ ಹಕ್ಕುಗಳನ್ನು ಪೂರೈಸುವುದಿಲ್ಲ ಎಂದು ಆಕ್ಷೇಪಿಸಲಾಗುತ್ತದೆ. ಈ ಆಕ್ಷೇಪಕ್ಕೆ ಸತ್ಯದೊಂದಿಗೆ ದೂರದ ಸಂಬಂಧ ಕೂಡ ಇಲ್ಲ. ಬದಲಾಗಿ, ಮಹಿಳೆಯರ ಮತ್ತು ಹುಡುಗಿಯರ ಹಕ್ಕುಗಳನ್ನು ಮೊತ್ತಮೊದಲಾಗಿ ಸ್ಥಾಪಿಸಿದ್ದು ಇಸ್ಲಾಮ್ ಧರ್ಮವಾಗಿದೆ. ಸ್ತ್ರೀಯರೊಡನೆ ಮತ್ತು ಹುಡುಗಿಯರೊಡನೆ ತಾರತಮ್ಯದಿಂದ ವರ್ತಿಸಲಾಗುತ್ತಿದ್ದ ಮತ್ತು ಅವರನ್ನು ಕೀಳು ದೃಷ್ಟಿಯಿಂದ ನೋಡಲಾಗುತ್ತಿದ್ದ ಕಾಲಘಟ್ಟದಲ್ಲಿ ಈ ಹಕ್ಕುಗಳನ್ನು ಇಸ್ಲಾಂ ಸ್ಥಾಪಿಸಿತು. ಮಹಿಳೆಯರಿಗೆ ಶಿಕ್ಷಣ ನೀಡುವುದನ್ನು ಮತ್ತು ಅವರಿಗೆ ಗೌರವಾದರ ನೀಡುವುದನ್ನು ಖಾತರಿಪಡಿಸಬೇಕು ಎಂದು ಇಸ್ಲಾಮಿನ ಪ್ರವಾದಿ(ಸ) ತನ್ನ ಅನುಚರರಿಗೆ ನಿರ್ದೇಶನ ನೀಡಿದರು. ಯಾರಿಗಾದರೂ ಮೂವರು ಪುತ್ರಿಯರಿದ್ದು ಅವರಿಗೆ ಶಿಕ್ಷಣ ನೀಡಿ, ಅವರನ್ನು ನೇರಮಾರ್ಗದಲ್ಲಿ ನಡೆಸಿದರೆ ಅವರಿಗೆ ಸ್ವರ್ಗದ ಸುವಾರ್ತೆಯಿದೆ ಎಂದೂ ಅವರು ಹೇಳಿದರು. ಈ ಕಾಲದಲ್ಲಿ ಜಿಹಾದ್ ನಡೆಸುವವನು ಮತ್ತು ಮುಸ್ಲಿಮೇತರರನ್ನು ವಧಿಸುವವನು ಸ್ವರ್ಗದಲ್ಲಿ ಪ್ರವೇಶಿಸುವನು ಎಂಬ ಉಗ್ರಗಾಮಿಗಳ ವಾದಕ್ಕೆ ಪ್ರವಾದಿಯ ಈ ನುಡಿ ವಿರುದ್ಧವಾಗಿದೆ. ಹುಡುಗಿಯರಿಗೆ ಶಿಕ್ಷಣ ನೀಡುವುದು ಮತ್ತು ಅವರಿಗೆ ಶಿಷ್ಟಾಚಾರಗಳನ್ನು ಕಲಿಸುವುದು ಸ್ವರ್ಗ ಪ್ರವೇಶದ ಮಾರ್ಗವಾಗಿದೆ ಎಂಬ ಸಂಗತಿಯನ್ನು ಇಸ್ಲಾಮಿನ ಪ್ರವಾದಿ(ಸ) ಬೋಧಿಸಿದರು.

## ಇಸ್ಲಾಮಿನ ಅಧ್ಯಾಪನೆಗಳ ಪ್ರಕಾರ ನೆರೆಹೊರೆಯವರ ಹಕ್ಕುಗಳು

ನೆರೆಹೊರೆಯವರ ಹಕ್ಕುಗಳಿಗೆ ಹಝ್ರತ್ ಪೈಗಂಬರ್(ಸ) ಬಹಳ ಒತ್ತುನೀಡಿದ್ದರು. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: "ನೆರೆಹೊರೆಯವರ ಹಕ್ಕುಗಳ ಕುರಿತು ಅಲ್ಲಾಹನು ಎಷ್ಟು ತಾಕೀತು ಮಾಡಿರುವನು ಎಂದರೆ, ನೆರೆಹೊರೆಯವರಿಗೆ ಬಹುಶಃ ವಾರಸು ಹಕ್ಕುಗಳು ಲಭಿಸುವುವು ಎಂದು ನನಗೆ ಅನಿಸಿತು." ಒಟ್ಟಿನಲ್ಲಿ ವರ್ಣ, ವರ್ಗ, ಜಾತಿಯನ್ನು ಲೆಕ್ಕಿಸದೆ ಮನುಷ್ಯನ ಹಕ್ಕುಗಳನ್ನು ಹಝ್ರತ್ ಪೈಗಂಬರ್(ಸ) ಲೋಕದಲ್ಲಿ ಸ್ಥಾಪಿಸಿದರು.




## ವಿದ್ಯಾರ್ಜನೆಯ ಮಹತ್ವ ಮತ್ತು ಇಸ್ಲಾಂ

ಇಸ್ಲಾಂ ಪ್ರಾಚೀನತೆಯನ್ನು ಇಷ್ಟಪಡುವ ಮತ್ತು ಹಿಂದುಳಿದ ಧರ್ಮವಾಗಿದೆ ಅಥವಾ ವಿಶಾಲ ಮನೋಭಾವವನ್ನು ಪ್ರೋತ್ಸಾಹಿಸದ ಒಂದು ಧರ್ಮವಾಗಿದೆ ಎಂದು ಕೆಲವು ಆಕ್ಷೇಪಕರು ಇಸ್ಲಾಮಿನ ಕುರಿತು ಆರೋಪಿಸುತ್ತಾರೆ. ಇದು ಮೂರ್ಖತನದ ಮತ್ತು ಹಗೆಯಿಂದ ಕೂಡಿದ ಚಿಂತನೆಯಾಗಿದೆ. ಇದರ ಬುನಾದಿ ಸತ್ಯಕ್ಕೆ ಬದಲಾಗಿ ಕಟ್ಟುಕಥೆಗಳ ಮೇಲಿದೆ. ಇದು ಆಧಾರರಹಿತವಾದ ಆರೋಪವಾಗಿದೆ. "ಹೇ ಪ್ರಭೂ, ನನ್ನ ಅರಿವನ್ನು ವರ್ಧಿಸು" ಎಂಬ ಪ್ರಾರ್ಥನೆಯನ್ನು ಪವಿತ್ರ ಖುರ್‌ಆನ್ ಸ್ವತಃ ಕಲಿಸಿ ಶಿಕ್ಷಣದ ಮಹತ್ವವನ್ನು ವಿವರಿಸಿದೆ. ಈ ಪ್ರಾರ್ಥನೆಯು ಜ್ಞಾನ ಗಳಿಕೆಗಾಗಿ ಸಹಾಯಕವಾಗಿರುವುದರ ಜೊತೆಗೆ ಜ್ಞಾನ ಸಂಪಾದನೆಯನ್ನು ಮತ್ತು ಅದರಲ್ಲಿ ಇನ್ನಷ್ಟು ಅಭಿವೃದ್ಧಿ ಹೊಂದಲು ಪ್ರೇರೇಪಿಸುತ್ತದೆ. ಸತ್ಯವೇನೆಂದರೆ, ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಪೈಗಂಬರರ(ಸ) ಅಧ್ಯಾಪನೆಗಳಿಂದ ಸ್ಫೂರ್ತಿ ಪಡೆದು ಮಧ್ಯೆ ಕಾಲದ ಮುಸ್ಲಿಂ ಚಿಂತಕರು, ತತ್ವಜ್ಞಾನಿಗಳು ಮತ್ತು ಸಂಶೋಧಕರು ಸಂಶೋಧನೆಗಳನ್ನು ಮಾಡಿದ್ದರು.

## ಮುಸ್ಲಿಮರ ವೈಜ್ಞಾನಿಕ ಕಾರ್ಯಸಾಧನೆಗಳು

ಮುಸ್ಲಿಂ ಸಂಶೋಧಕರು ಮತ್ತು ವಿಜ್ಞಾನಿಗಳು ಜ್ಞಾನವನ್ನು ಉನ್ನತಿಗೇರಿಸಲು ಯಾವ ರೀತಿಯಲ್ಲಿ ಒಂದು ಮುಖ್ಯವಾದ ಪಾತ್ರವನ್ನು ವಹಿಸಿದ್ದರು ಎಂದು ನೀವು ಒಂದು ಸಾವಿರ ವರ್ಷಕ್ಕೆ ಮುಂಚಿನ ಚರಿತ್ರೆಯನ್ನು ನೋಡಿದರೆ ಗೊತ್ತಾಗುವುದು. ಅವರು ಎಂತಹ ತಂತ್ರಜ್ಞಾನವನ್ನು ತಯಾರು ಮಾಡಿದರು ಎಂದರೆ, ಅವುಗಳಿಂದ ಲೋಕವೇ ಬದಲಾಯಿತು. ಈ ತಂತ್ರಜ್ಞಾನಗಳನ್ನು ಈಗಲೂ ಉಪಯೋಗಿಸಲಾಗುತ್ತಿದೆ. ಉದಾಹರಣೆಗೆ, ಮೊದಲ ಕ್ಯಾಮೆರಾದ ಆವಿಷ್ಕಾರವನ್ನು ಇಬ್ನು ಹೈಸಮ್ ಮಾಡಿದ್ದರು. ಯುನೆಸ್ಕೋ ಕೂಡ ಅದನ್ನು ಒಪ್ಪಿಕೊಂಡಿದೆ. ಅವರನ್ನು ಹೊಸ 'ಒಪ್ಟಿಕ್ಸ್'ನ (ಬೆಳಕಿನ ಅಧ್ಯಯನ ಮಾಡುವ ಶಾಖೆ) ಸ್ಥಾಪಕ ಎಂದು ಕರೆಯಲಾಗಿದೆ. ಕ್ಯಾಮೆರ ಎಂಬ ಪದ ಕೂಡ "ಖುಮ್‌ರ" ಎಂಬ ಅರಬೀ ಪದದಿಂದ ವ್ಯುತ್ಪತ್ತಿಯಾಗಿದೆ ಎಂಬುದು ರಸವತ್ತಾದ ಒಂದು ಸಂಗತಿಯಾಗಿದೆ. ಹನ್ನೆರಡನೇ ಶತಮಾನದಲ್ಲಿ ಒಬ್ಬ ಮುಸ್ಲಿಂ ನಕ್ಷೆಗಾರ ಮಧ್ಯಕಾಲ ಲೋಕದ ಬಹಳ ನಿಖರವಾದ ನಕಾಶೆ (World Map) ತಯಾರಿಸಿದ್ದರು. ಅದನ್ನು ಅನೇಕ ಶತಮಾನಗಳ ತನಕ ಯಾತ್ರಿಕರು ಉಪಯೋಗಿಸುತ್ತಿದ್ದರು.

ಅದೇ ರೀತಿಯಲ್ಲಿ ವೈದ್ಯಶಾಸ್ತ್ರದ ಮೈದಾನದಲ್ಲೂ ಮುಸ್ಲಿಂ ವೈದ್ಯರು ಮತ್ತು ವಿಜ್ಞಾನಿಗಳು ಅನೇಕ ಸಂಶೋಧನೆಗಳನ್ನು ಮಾಡಿದ್ದರು ಮತ್ತು ಇಂದು ಸಹ ಉಪಯೋಗಿಸಲ್ಪಡುತ್ತಿರುವ ಅನೇಕ ಆವಿಷ್ಕಾರಗಳನ್ನು ಮಾಡಿದ್ದರು. ಶಸ್ತ್ರಕ್ರಿಯೆಯ ಅನೇಕ ಉಪಕರಣಗಳನ್ನು ಮುಸ್ಲಿಂ ವೈದ್ಯರಾದ ಅಝ್ಝುಹ್‌ರ್ವೀ ಹತ್ತನೇ ಶತಮಾನದಲ್ಲಿ ನಿರ್ಮಿಸಿದರು. ಹದಿನೇಳನೇ ಶತಮಾನದಲ್ಲಿ ಒಬ್ಬ ಆಂಗ್ಲೇಯ ವೈದ್ಯರಾದ ವಿಲಿಯಂ ಹಾರ್‌ವೇ ಎಂಬವರು ರಕ್ತಪರಿಚಲನೆ ಮತ್ತು ಹೃದಯ ಹೇಗೆ ಕೆಲಸ ಮಾಡುತ್ತದೆ ಎಂಬುದರ ಬಗ್ಗೆ ಒಂದು ಮುಖ್ಯವಾದ ಸಂಶೋಧನೆ ನಡೆಸಿದರು ಮತ್ತು ಅದು ಬಹಳ ಪ್ರಸಿದ್ಧವಾಯಿತು. ಆದರೆ ನಾನ್ನೂರು ವರ್ಷಗಳ ಹಿಂದೆಯೇ ಒಬ್ಬ ಅರಬ್ ವೈದ್ಯನಾದ ಇಬ್ನು ನಫೀಸ್ ರಕ್ತಪರಿಚಲನೆ ಕುರಿತು ಮೂಲಭೂತ ಸಂಗತಿಗಳನ್ನು ಅರಬಿ ಭಾಷೆಯಲ್ಲಿ ವಿಶದವಾಗಿ ವಿವರಿಸಿದ್ದರು.

ಒಂಬತ್ತನೇ ಶತಮಾನದಲ್ಲಿ ಜಾಬಿರ್ ಬಿನ್ ಹಯಾನ್ ರಸಾಯನ ಶಾಸ್ತ್ರದಲ್ಲಿ ಕ್ರಾಂತಿ ಮಾಡಿದರು. ಅವರು ಅನೇಕ ಪ್ರಯೋಗಗಳನ್ನು ಮತ್ತು ಉಪಕರಣಗಳನ್ನು ಮುಂದಿರಿಸಿದರು. ಅವುಗಳನ್ನು ಈಗಲೂ ಉಪಯೋಗಿಸಲಾಗುತ್ತದೆ. ಅಲ್‌ಜಿಬ್ರ (Algebra) ತತ್ವಗಳನ್ನು ಮತ್ತು ಟ್ರಿಗೊನೋಮೇಟ್ರಿಯ (Trigonometry) ಹೆಚ್ಚಿನ ವಿವರಣೆಗಳು ಮೊತ್ತಮೊದಲಾಗಿ ಒಬ್ಬ ಮುಸ್ಲಿಮನು ಮುಂದಿರಿಸಿದ್ದನು. ಆಧುನಿಕ ಲೋಕದಲ್ಲಿ ಕಂಪ್ಯೂಟರ್ ತಂತ್ರಜ್ಞಾನದಲ್ಲಿ ಅಲ್‌ಗೊರಿದಮಿನ (Algorithms) ಬಹಳ ಸ್ವಾಧೀನವಿದೆ. ಇದನ್ನೂ ಮೊದಲು ಮುಸ್ಲಿಮರು ಮುಂದಿರಿಸಿದ್ದರು. ಬೌದ್ಧಿಕ ವಿಕಾಸದಲ್ಲಿ ಮುಸ್ಲಿಮರ ಸೇವೆಗಳನ್ನು ಇಂದು ಕೂಡ ಒಪ್ಪಲಾಗುತ್ತದೆ. ಉದಾಹರಣೆಗೆ, ನ್ಯೂಯೋರ್ಕ್ ಟೈಮ್ಸ್‌ನಲ್ಲಿ ಒಬ್ಬ ಸೈನ್ಸ್ ರಿಪೋರ್ಟರ್ ಡೆನಿಸ್ ಓವರ್‌ಬೈ (Denis Overbye) ಅವರ ಲೇಖನ ಪ್ರಕಟವಾಯಿತು. ಅನೇಕ ಜ್ಞಾನಗಳಲ್ಲಿ ನುರಿತರಾಗಿದ್ದ ನಾಸಿರುದ್ದೀನ್ ಅತ್ತೂಸಿ ಎಂಬ ಹೆಸರಿನ ಒಬ್ಬ ಮುಸ್ಲಿಮನ ಪಾತ್ರವನ್ನು ಲೇಖಕ ಪ್ರಸ್ತಾಪಿಸಿದ್ದಾನೆ. ಖಗೋಳಶಾಸ್ತ್ರ, ನೀತಿಶಾಸ್ತ್ರ, ಗಣಿತ ಮತ್ತು ತತ್ವಜ್ಞಾನಕ್ಕೆ ಸಂಬಂಧಿಸಿ ಅತ್ತೂಸಿಯ ಅನೇಕ ಕೆಲಸಗಳ ಬಗ್ಗೆ ಲೇಖಕ ಪ್ರಸ್ತಾಪಿಸಿರುವನು ಮತ್ತು ಅತ್ತೂಸಿಯನ್ನು ಅವರ ಕಾಲದ ಅತ್ಯುತ್ತಮ ಚಿಂತಕ ಎಂದು ಹೇಳಿರುವನು. ಮಧ್ಯಕಾಲ ಯುಗದಲ್ಲಿ ಮುಸ್ಲಿಮರು



ಎಂತಹ ಸಮಾಜವನ್ನು ಸ್ಥಾಪಿಸಿದ್ದರು ಎಂದರೆ, ಅದು ಲೋಕದಲ್ಲಿ ವಿಜ್ಞಾನದ ಕೇಂದ್ರವಾಗಿತ್ತು. ಜ್ಞಾನ ಮತ್ತು ವಿಜ್ಞಾನಕ್ಕಾಗಿ ಅರಬಿ ಭಾಷೆ ಐನೂರು ವರ್ಷಗಳ ಕಾಲ ಮುಖ್ಯ ಭಾಷೆಯಾಗಿತ್ತು. ಅದೊಂದು ಸುವರ್ಣ ಕಾಲಘಟ್ಟವಾಗಿತ್ತು. ಅದು ಇಂದಿನ ಹೊಸ ವಿಶ್ವವಿದ್ಯಾನಿಲಯಗಳಿಗೆ ಮಾದರಿಯಾಗಿತ್ತು. ಒಟ್ಟಿನಲ್ಲಿ, ಆರಂಭದಿಂದಲೇ ಮನುಷ್ಯನ ಅರಿವು ವರ್ಧನೆ ಮತ್ತು ಜ್ಞಾನಾರ್ಜನೆಗೆ ಇಸ್ಲಾಂ ಬಹಳ ಒತ್ತು ನೀಡಿದೆ.

## ಶೈಕ್ಷಣಿಕ ಮೈದಾನದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ಪ್ರಯತ್ನ

ಕ್ರಿ.ಶ. 1889ರಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತ್ ಸ್ಥಾಪನೆಗೊಂಡಿತು. ಅಹ್ಮದಿಯಾ ಜಮಾಅತ್ ಯಾವಾಗಲೂ ಜಮಾಅತಿನ ಸದಸ್ಯರೊಡನೆ ಅರಿವು ಗಳಿಸುವ ಬಗ್ಗೆ ಗಮನ ಸೆಳೆಯುತ್ತದೆ. ಅಲ್ಲಾಹನ ಅನುಗ್ರಹದಿಂದ ಮೊತ್ತ ಮೊದಲ ಮುಸ್ಲಿಂ ನೋಬೆಲ್ ವಿಜೇತ ವಿಜ್ಞಾನಿಯಾದ ಪ್ರೊಫೆಸರ್ ಡಾಕ್ಟರ್ ಅಬ್ದುಸ್ಸಲಾಂ ಅಹ್ಮದಿಯಾಗಿದ್ದರು. ಅವರು ಪ್ರಸಿದ್ಧ ವಿಜ್ಞಾನಿಯಾಗಿದ್ದರು. ಅವರು ಕ್ರಿ.ಶ. 1979ರಲ್ಲಿ ಭೌತಶಾಸ್ತ್ರದಲ್ಲಿ ನೋಬೆಲ್ ಪುರಸ್ಕಾರ ಗಳಿಸಿದರು. ಯಾವ ರೀತಿಯಲ್ಲಿ ಅವರ ಸಂಶೋಧನೆಗಳ ಹಿಂದೆ ಇಸ್ಲಾಂ ಮತ್ತು ವಿಶೇಷವಾಗಿ ಪವಿತ್ರ ಖುರ್‌ಆನಿನ ಅನುಗ್ರಹ ಹಾಗೂ ಪ್ರಕಾಶ ಕಾರ್ಯ ನಿರ್ವಹಿಸಿತ್ತು ಎಂಬುದನ್ನು ಪ್ರೊಫೆಸರ್ ಅಬ್ದುಸ್ಸಲಾಂ ಜೀವನಪೂರ್ತಿ ವ್ಯಕ್ತಪಡಿಸುತ್ತಿದ್ದರು. ಪವಿತ್ರ ಖುರ್‌ಆನಿನ 750 ವಚನಗಳು ವಿಜ್ಞಾನಕ್ಕೆ ಸಂಬಂಧಿಸಿವೆ ಎಂದು ಅವರು ಹೇಳುತ್ತಿದ್ದರು. ಅವುಗಳು ನಿಸರ್ಗ ಮತ್ತು ಪ್ರಪಂಚವನ್ನು ಅರಿಯಲು ನಮಗೆ ಸಹಾಯಕವಾಗಿವೆ.

ಶ್ರೇಷ್ಠ ಮುಸ್ಲಿಂ ವಿಜ್ಞಾನಿಗಳ ಮತ್ತು ವಿದ್ವಾಂಸರ ಒಂದು ಹೊಸ ಉದಯವನ್ನು ಬಯಸುವುದಾಗಿ ಅಹ್ಮದಿಯಾ ಜಮಾಅತಿನ ಮೂರನೇ ಖಲೀಫರು ಹೇಳಿದರು ಮತ್ತು ತನ್ನ ಜಮಾಅತಿನಲ್ಲಿ ವಿದ್ಯಾಭ್ಯಾಸದ ಮೈದಾನದಲ್ಲಿ ಉನ್ನತ ಮಟ್ಟದ ವಿಜಯ ಗಳಿಸಿದವರಿಗೆ ಸ್ವರ್ಣ ಪದಕ ನೀಡುವ ಸಂಪ್ರದಾಯವನ್ನು ಅವರು ಆರಂಭಿಸಿದರು. ಹೀಗೆ ಪ್ರತಿ ವರ್ಷ ನೂರಾರು ಅಹ್ಮದೀ ಮುಸ್ಲಿಂ ಹುಡುಗ – ಹುಡುಗಿಯರಿಗೆ ಸ್ವರ್ಣ ಪದಕ ನೀಡಲಾಗುತ್ತದೆ. ಅನೇಕ ಪೀಳಿಗೆಗಳಿಂದ ಹಿಂದುಳಿದ ದೇಶಗಳನ್ನು ಬಂಧಿಸಿರುವ ಬಡತನವನ್ನು ತೊಡೆದು ಹಾಕಲಿಕ್ಕಾಗಿ ವಿದ್ಯೆ ಒದಗಿಸುವುದು ಬಹಳ ಮುಖ್ಯವೆಂದು ನಾವು ತಿಳಿಯುತ್ತೇವೆ.

## ಇಸ್ಲಾಂ ಮತ್ತು ಮನುಕುಲದ ಸೇವೆ

ಆಧ್ಯಾತ್ಮಿಕ ಪ್ರಗತಿಗೆ ಮನುಕುಲದ ಸೇವೆಯೊಂದಿಗೆ ಒಂದು ಆಳವಾದ ಸಂಬಂಧವಿದೆ ಎಂದು ಹಝ್ರತ್ ಪೈಗಂಬರ್(ಸ) ನಮಗೆ ಕಲಿಸಿಕೊಟ್ಟಿದ್ದಾರೆ. ಒಬ್ಬ ಮುಸ್ಲಿಂ ಕೇವಲ ಅಲ್ಲಾಹನ ಆರಾಧನೆ ಮತ್ತು ನಮಾಝ್‌ಗಳ ಮೂಲಕ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಾರನು. ಬದಲಾಗಿ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಮನುಷ್ಯನು ಮನುಕುಲದ ಸೇವೆ ಕೂಡ ಮಾಡುವುದು ಅಗತ್ಯ. ಒಟ್ಟಿನಲ್ಲಿ, ಪವಿತ್ರ ಖುರ್‌ಆನಿನ ಅಲ್‌ಬಲದ್ ಎಂಬ ಅಧ್ಯಾಯದ 15ರಿಂದ 17ನೇ ವಚನಗಳಲ್ಲಿ ಮುಸ್ಲಿಮರೊಡನೆ ಬಡತನ, ಹಸಿವು ನೀಗಿಸಲು, ಅನಾಥರ ಅಗತ್ಯಗಳನ್ನು ಪೂರೈಸಲು, ಬಡ ಮತ್ತು ದರಿದ್ರ ಮಕ್ಕಳಿಗೆ ವಿದ್ಯಾಭ್ಯಾಸ ಒದಗಿಸಲು ಆದೇಶ ನೀಡಲಾಗಿದೆ. ಇಂತಹ ಜನರ ಬೆಳವಣಿಗೆ ಮತ್ತು ಅಭಿವೃದ್ಧಿ ಉಂಟಾಗಲು ಹೀಗೆ ಆಜ್ಞಾಪಿಸಲಾಗಿದೆ.

ಮಾನವೀಯ ಸಹಾನುಭೂತಿಯ ಆಧಾರದಲ್ಲಿ ಬಡತನ ಮತ್ತು ದಾರಿದ್ರ್ಯವನ್ನು ಕೊನೆಗೊಳಿಸಲಿಕ್ಕಾಗಿ ನಾವು ಪ್ರಯತ್ನಿಸುತ್ತಿದ್ದೇವೆ. ಇವು ಲೋಕದಲ್ಲಿ ದೀರ್ಘಕಾಲೀನ ಶಾಂತಿ ಸ್ಥಾಪನೆಗೆ ಒಂದು ಕೀಲಿಗೈಯಂತೆ ಕೆಲಸ ಮಾಡುತ್ತವೆ ಎಂದೂ ನಾವು ತಿಳಿಯುತ್ತೇವೆ. ಜನರಿಗೆ ತಿನ್ನಲು ಆಹಾರ, ಕುಡಿಯಲು ನೀರು, ವಾಸಿಸಲು ವಸತಿ, ಮಕ್ಕಳಿಗಾಗಿ ಶಾಲೆ ಮತ್ತು ವೈದ್ಯಕೀಯ ಸೌಕರ್ಯಗಳು ಒದಗಿಸಿದರೆ ಜನರು ಶಾಂತಿಪೂರ್ಣವಾಗಿ ತಮ್ಮ ಜೀವಿತಗಳನ್ನು ಸಾಗಿಸಬಹುದಾಗಿದೆ ಹಾಗೂ ಜನರನ್ನು ಉಗ್ರವಾದದ ಕಡೆಗೆ ಕೊಂಡು ಹೋಗುವ ನಿರಾಶೆ ಮತ್ತು ಹಗೆಯ ನಾಶಕಾರಿ ಹಿಡಿತದಿಂದ ಜನರು ರಕ್ಷಣೆ ಪಡೆಯುವರು. ಇವು ಮೂಲಭೂತ ಮಾನವೀಯ ಹಕ್ಕುಗಳಾಗಿವೆ. ಆದ್ದರಿಂದ ಎಲ್ಲಿಯ ತನಕ ನಾವು ಜನರ ಜೀವಗಳನ್ನು ಬಡತನ ಮತ್ತು ದಾರಿದ್ರ್ಯದಿಂದ ಪಾರುಮಾಡುವುದಿಲ್ಲವೋ ಅಲ್ಲಿಯ ತನಕ ನಾವು ಈ ಲೋಕದಲ್ಲಿ ನೈಜವಾದ ಶಾಂತಿಯನ್ನು ಕಾಣಲಾರೆವು.

ಲಾಲಸೆ ಮತ್ತು ಸ್ವಾರ್ಥವನ್ನು ಹಿಂದಕ್ಕೆಸೆದು ಈ ಲೋಕದಲ್ಲಿ ಕಷ್ಟದಲ್ಲಿರುವ ಜನರ ಕಷ್ಟತೆಗಳನ್ನು ನೀಗಿಸಲು ನಾವು ಗಮನಹರಿಸುವವರಾಗಲಿ ಎಂದು ಕೊನೆಯದಾಗಿ ಪ್ರಾರ್ಥಿಸುತ್ತೇವೆ. ದೇವನು ನಮಗೆಲ್ಲರಿಗೂ ಅದರ ಸೌಭಾಗ್ಯ ದಯಪಾಲಿಸಲಿ. ಆಮೀನ್.

**(ಕನ್ನಡಕ್ಕೆ: ಮೌಲವಿ ಇನಾಮುಲ್ಲಾ)**

# ನೀನು ಮಾಡು – ಮಾಡಬೇಡ

♦ಹಝ್ರತ್ ಡಾ॥ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ)

## 8 – ಧರ್ಮಕ್ಕೆ ಸಂಬಂಧಿಸಿದ ವಿಷಯಗಳು

243. ನೀನು ಅಲ್ಲಾಹನೊಂದಿಗೆ ಯಾರನ್ನೂ ಭಾಗೀದಾರನನ್ನಾಗಿ ಮಾಡಬೇಡ.

244. ನೀನು ಅಲ್ಲಾಹನ ವಿಶೇಷ ಗುಣಗಳು ಬೇರೆಯವರಿಗೆ ಇರುವುದಾಗಿ ನಂಬಬೇಡ.

245. ನೀನು ಅಲ್ಲಾಹನ ಕಾರ್ಯದಲ್ಲಿ ಬೇರೆ ಯಾರಾದರೂ ಸಹಭಾಗಿಯಾಗಿರುವರು ಎಂದು ನಂಬಬೇಡ.

246. ನೀನು ಅಲ್ಲಾಹನನ್ನು ಗೌರವಿಸುವಂತೆ ಮತ್ತು ಆರಾಧಿಸುವಂತೆ ಬೇರೆ ಯಾರನ್ನೂ ಗೌರವಿಸಿ ಆರಾಧಿಸಬೇಡ.

247. ವಿಶ್ವಾಸದೊಂದಿಗೆ ಸತ್ಕಾರ್ಯ ಜೊತೆಗೂಡದಿದ್ದರೆ ನೀರಿಲ್ಲದ ಮರದ ಹಾಗೆ ಎಂದು ನಂಬು.

248. ಸಂದರ್ಭ ದೊರೆತರೆ ರಮಝಾನ್ ತಿಂಗಳಲ್ಲಿ ಇಅ್‌ತಿಕಾಫ್ ಕುಳಿತುಕೋ.

249. ನೀನು ರಮಝಾನ್ ತಿಂಗಳಲ್ಲಿ ಲೈಲತುಲ್ ಖದ್ರ್ ಅನ್ವೇಷಿಸು ಮತ್ತು ಅದರಿಂದ ಅನುಗ್ರಹ ಪಡೆಯಲು ಯತ್ನಿಸು.

250. ನೀನು ನೆನಪಿಡು – ಈಗ ಅಲ್ಲಾಹನಿಂದ ಇಸ್ಲಾಮ್ ಹೊರತು ಬೇರೆ ಯಾವ ಧರ್ಮವೂ ಅಂಗೀಕರಿಸಲ್ಪಡಲಾರದು.

251. ನೀನು ಪವಿತ್ರ ಖುರ್‌ಆನಿಗೆ ಮೊದಲು ಅವತೀರ್ಣವಾದ ಗ್ರಂಥಗಳನ್ನು ನಂಬು. ಆದರೆ ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರಬೇಕು. ಏಕೆಂದರೆ ಹಿಂದಿನ ಗ್ರಂಥಗಳನ್ನು ರದ್ದುಪಡಿಸಲಾಗಿದೆ.

252. ನೀನು ಒಳ್ಳೆಯ ಕೆಲಸಗಳನ್ನು ಕೇವಲ ಒಳ್ಳೆಯ ಕೆಲಸಗಳೆಂದು ಭಾವಿಸಿ ಮಾಡಬೇಡ. ಇದು ನಾಸ್ತಿಕರ ಮನೋಭಾವವಾಗಿದೆ.

253. ನೀನು ಒಳ್ಳೆಯ ಕೆಲಸಗಳನ್ನು ಅಲ್ಲಾಹನ ಪ್ರೀತಿ ಮತ್ತು ಪ್ರತಿಫಲ ಗಳಿಸಲು ಮಾಡು. ಇದು ಮುಸ್ಲಿಮನ ಧರ್ಮವಾಗಿದೆ.

254. ಧಾರ್ಮಿಕ ಅಭಿಪ್ರಾಯ ವ್ಯತ್ಯಾಸಗಳ ಸಂದರ್ಭದಲ್ಲಿ ನೀನು ಅಲ್ಲಾಹನ ಮತ್ತು ಹಝ್ರತ್ ಪೈಗಂಬರರ(ಸ) ತೀರ್ಪುಗಳ ಮುಂದೆ ತಲೆಬಾಗು.

255. ನೀನು ಪವಿತ್ರ ಖುರ್‌ಆನಿನ ಕೆಲವು ವಚನಗಳನ್ನು ಬಾಯಿಪಾಠ ಮಾಡು.

256. ಅಲ್ಲಾಹನ ಸಂದೇಶವಾಹಕ ಆಗಮಿಸಿದರೆ ಅವರನ್ನು ನೀನು ಕೂಡಲೇ ನಂಬು.

257. ನೀನು ಅಲ್ಲಾಹನನ್ನು ಪ್ರೀತಿಸುವಿಯಾದರೆ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸು.

258. ನೀನು ಪ್ರತಿಯೊಂದು ಜಗಳದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಿನ್ನ ನ್ಯಾಯಾಧೀಶನಾಗಿ ಅಂಗೀಕರಿಸಿ, ಅವರ ತೀರ್ಪುಗಳನ್ನು ಹೃತ್ಪೂರ್ವಕವಾಗಿ ಒಪ್ಪಿಕೊಳ್ಳುವ ತನಕ ನೀನು ಮುಸ್ಲಿಮನಾಗಲಾರೆ.

259. ನೀನು ಎಲ್ಲ ಪ್ರವಾದಿಗಳನ್ನು ನಿಷ್ಕಳಂಕರೆಂದು ನಂಬು. ಅಂದರೆ, ಅವರು ತಿಳಿದುಕೊಂಡು ಯಾವ ಪಾಪವನ್ನೂ ಮಾಡಲಿಲ್ಲ ಮತ್ತು ಅಲ್ಲಾಹನ ಆಜ್ಞೆಗಳ ವಿರುದ್ಧ ವರ್ತಿಸಲಿಲ್ಲ.

260. ನೀನು ಎಂದಿಗೂ ಅಲ್ಲಾಹನ ಅನುಗ್ರಹದ ಬಗ್ಗೆ ನಿರಾಶೆಹೊಂದಬೇಡ.

261. ನಿನ್ನ ಎದುರಿಗೆ ಪವಿತ್ರ ಖುರ್‌ಆನ್ ಪಾರಾಯಣ ಮಾಡಲ್ಪಟ್ಟರೆ ನೀನು ಲಕ್ಷ್ಯವಿಟ್ಟು ಆಲಿಸು ಮತ್ತು ಮೌನವಾಗಿರು.

262. ನೀನು ಆಯಾ ಕಾಲದ ಖಲೀಫರನ್ನು ಅನುಸರಿಸು.

263. ನೀನು ಎಲ್ಲ ಪ್ರವಾದಿಗಳ ಉತ್ತಮ ಮಾದರಿಗಳ ಬಗ್ಗೆ ಅಧ್ಯಯನ ನಡೆಸು.

264. ನೀನು ಕೆಟ್ಟವರ ಅಂತಿಮ ಸ್ಥಿತಿಯ ಬಗ್ಗೆ ಅಧ್ಯಯನ ನಡೆಸು. ಅದರಿಂದ ಪಾಠಕಲಿ.

265. ನೀನು ನವೀನಾಚರಗಳನ್ನು ಅನುಷ್ಠಿಸಬೇಡ.

266. ನೀನು ತಪ್ಪು ಅಥವಾ ಪಾಪ ಮಾಡಿದ ಕೂಡಲೆ ಪಶ್ಚಾತ್ತಾಪದಿಂದ ಕ್ಷಮೆಗೋಸ್ಕರ ಪ್ರಾರ್ಥಿಸು. ಏಕೆಂದರೆ ಮೃತನಾಗುವಾಗ ಕ್ಷಮೆಗೋಸ್ಕರ ಪ್ರಾರ್ಥಿಸಿದರೆ ಸ್ವೀಕರಿಸಲ್ಪಡದು.

267. ನೀನು ಅಲ್ಲಾಹನ ಸಾಮೀಪ್ಯ ಗಳಿಸುವ ಮಾರ್ಗಗಳನ್ನು ಹುಡುಕು. ಅದಕ್ಕೋಸ್ಕರ ಕಷ್ಟಪಡುವ ಸ್ವಭಾವ ಬೆಳೆಸಿಕೊಳ್ಳು.

268. "ನಾನು ಪರಲೋಕಕ್ಕೋಸ್ಕರ ಏನು ಸಿದ್ಧತೆ ನಡೆಸಿದ್ದೇನೆ" ಎಂದು ನೀನು ಪರಿಶೀಲಿಸುತ್ತಾ ಇರಬೇಕು.

269. ನೀನು ಆಚಾರಗಳನ್ನು ಬಿಟ್ಟು ಹಝ್ರತ್ ಪೈಗಂಬರರ(ಸ) ನಡೆವಳಿಕೆಗಳನ್ನು ಅನುಸರಿಸು.

270. ನಿನ್ನ ಎಲ್ಲ ಆರಾಧನೆಗಳು ನಿನಗೋಸ್ಕರ ಮಾತ್ರವಾಗಿವೆ ಎಂದೂ ಅಲ್ಲಾಹನಿಗೆ ಅದರ ಒಂದಿಷ್ಟು ಆವಶ್ಯಕತೆ ಇಲ್ಲ ಎಂದೂ ನಂಬು.

271. ನೀನು ನಿನ್ನ ಎಲ್ಲ ಶಕ್ತಿಸಾಮರ್ಥ್ಯಗಳನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡು.

272. ನೀನು ನಿನ್ನ ನಮಾಝ್‌ಗಳಲ್ಲಿ ಶ್ರದ್ಧೆಯನ್ನೂ ಭಕ್ತಿಯನ್ನೂ ಹೊಂದು.

273. ನೀನು ಧರ್ಮ ರಹಿತರ ಮತ್ತು ಅಜ್ಞಾನಿಗಳ ಸಹವಾಸದಿಂದ ದೂರಸರಿ.

274. ನೀನು ಧಾರ್ಮಿಕ ವಿಷಯಗಳಲ್ಲಿ ಇತರರಿಗಿಂತ ಮುಂದೆ ಸಾಗಲು ಸ್ಪರ್ಧಿಸು.

275. ನೀನು ನಿನ್ನ ಹರಕೆಗಳನ್ನು ಅವು ಶರೀಅತಿಗೆ

ವಿರುದ್ಧವಾಗಿಲ್ಲವಾದರೆ ಈಡೇರಿಸು.

276. ನೀನು ಧರ್ಮದ ವಿಷಯದಲ್ಲಿ ಧರ್ಮರಹಿತ ತೀರ್ಪು ಅಂಗೀಕರಿಸಬೇಡ.

277. ನೀನು ಅಲ್ಲಾಹನ ಪರೀಕ್ಷೆಗೆ ಗುರಿಯಾದಾಗ ಗಾಬರಿಗೊಳ್ಳಬೇಡ. ಸ್ಥಿರಚಿತ್ತನಾಗಿ ಮುಂದೆ ಸಾಗು.

278. ನೀನು ಆರಾಧನೆ ಮತ್ತು ದಾನಧರ್ಮ ತೋರಿಕೆಗೋಸ್ಕರ ಮಾಡಬೇಡ.

279. ನೀನು ಅಮಿತವಾಗಿ ನಗದಿರು. ನಗುತ್ತಾ ಇದ್ದರೆ ನಿನ್ನ ಹೃದಯ ಮೃತಸಮಾನವಾಗುವುದು.

280. ನೀನು ಸಂತೋಷದಿಂದಿರು. ಇಲ್ಲದಿದ್ದರೆ ನಿನ್ನ ಹೃದಯ ನಿರಾಸೆ ಹೊಂದುವುದು.

281. ನೀನು ಧಾರ್ಮಿಕ ವಿಷಯಗಳ ಬಗ್ಗೆ ಪರಿಹಾಸ ಮಾಡಬೇಡ.

282. ನೀನು ಅರ್ಥಮಾಡಿಕೊಂಡು ಸಾವಧಾನದಿಂದ ನಮಾಝ್ ಅನುಷ್ಠಿಸು.

283. ನೀನು ವಾಗ್ದಾನಗಳಲ್ಲಿ ಸತ್ಯಕ್ಕೆ ವಿರುದ್ಧವಾಗಿ ಮಾತನಾಡಬೇಡ.

284. ನಿನಗೆ ನಮಾಝ್ ವಾಕ್ಯಗಳ ಅರ್ಥ ತಿಳಿದಿರಬೇಕಾದುದು ಆವಶ್ಯಕವಾಗಿದೆ.

285. ನೀನು ನಿನ್ನ ಕುಟುಂಬದವರಿಗೆ ನಮಾಝ್ ಮಾಡಲು ಆಜ್ಞಾಪಿಸುತ್ತಾ ಇರಬೇಕು.

286. ನೀನು ಜನರಿಗೆ ಉತ್ತಮ ಮಾದರಿಯಾಗು.

287. ಜುಮುಅದ ಅಝಾನ್ ಕೇಳಿದ ಕೂಡಲೇ ನಿನ್ನ ಎಲ್ಲ ಕೆಲಸಗಳನ್ನು ಮತ್ತು ವ್ಯಾಪಾರಗಳನ್ನು ಬಿಟ್ಟು ಮಸ್‌ಜಿದ್ ಕಡೆಗೆ ಹೋಗು.

288. ನೀನು ಸಂಪಾದಿಸಿದ ಪರಿಶುದ್ಧ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚುಮಾಡು.

289. ನೀನು ಹೆಚ್ಚು ಹೆಚ್ಚಾಗಿ ಧಾರ್ಮಿಕ ಜ್ಞಾನ ಗಳಿಸು. ವಿದ್ವಾಂಸರೇ ಅಲ್ಲಾಹನಿಗೆ ಭಯಪಡುತ್ತಾರೆ.

290. ನೀನು ನಿನ್ನ ಸಂಬಂಧಿಕರಿಗೆ ತಬ್ಲೀಗ್ (ಧರ್ಮ ಬೋಧನೆ) ಮಾಡಲು ಆದ್ಯತೆ ನೀಡು.

291. ನೀನು ಅಲ್ಲಾಹನ ಹೊರತು ಅನ್ಯರ ಹೆಸರು ಹೇಳಿ ವಧಿಸಿದ ಮೃಗದ ಮಾಂಸ ತಿನ್ನಬೇಡ. ಅದು ನಿಷಿದ್ಧವಾಗಿದೆ.

292. ಇಸ್ಲಾಮಿನಲ್ಲಿ ಸನ್ಯಾಸ ನಿಷಿದ್ಧವಾಗಿದೆ ಎಂದು ನೆನಪಿಡು.

293. ನೀನು ಭಯಭಕ್ತಿ ಕಾಪಾಡಲು ಮತ್ತು ಉತ್ತಮ ಸಂತಾನ ಪಡೆಯಲು ವಿವಾಹವಾಗು.

294. ಹೇ ಮಹಿಳೆ, ನೀನು ಶರೀಅತ್ ಪ್ರಕಾರ ಪರ್ದಾ ಅನುಷ್ಠಿಸು.

295. ನೀನು ಅಲ್ಲಾಹನ ದೃಷ್ಟಾಂತಗಳನ್ನು ಪರಿಹಾಸ ಮಾಡುವವರ ಸಭೆಯಲ್ಲಿ ಕುಳಿತುಕೊಳ್ಳಬೇಡ.

296. ನೀನು ಎಂದಿಗೂ ಸುಳ್ಳು ಪ್ರಮಾಣ ಮಾಡಬಾರದು. ಶರೀಅತ್ ಆವಶ್ಯ ಪ್ರಕಾರವಲ್ಲದೆ ನೀನು ಪ್ರಮಾಣ ಮಾಡಲೇಬಾರದು.

297. ನೀನು ನಿರರ್ಥಕ ಪ್ರಮಾಣ ಮಾಡದಿರು.

298. ನೀನು ಮುಂದೆ ಈಡೇರಿಸುವ ವಾಗ್ದಾನದ ಬಗ್ಗೆ ಇನ್‌ಶಾ ಅಲ್ಲಾಹ್ (ಅಲ್ಲಾಹನು ಇಚ್ಛಿಸಿದರೆ) ಎಂದು ಹೇಳಿ ವಾಗ್ದಾನ ಮಾಡು.

299. ನೀನು ಅಲ್ಲಾಹನನ್ನು ಆಕ್ಷೇಪಿಸಿ ಮಾತನಾಡದಿರು.

300. ನೀನು ಎಂದಿಗೂ ಅಲ್ಲಾಹನ ಗುಣಗಳ ಸೂಕ್ಷ್ಮತೆಗಳ ಬಗ್ಗೆ ಚರ್ಚಿಸಬೇಡ.

301. ನೀನು ಅಲ್ಲಾಹನ ಅನುಗ್ರಹಗಳ ಬಗ್ಗೆ ಚಿಂತಿಸು. ಅವುಗಳನ್ನು ನೆನಪಿಸುವುದು ಅಲ್ಲಾಹನ ಸಂಪ್ರೀತಿ ಗಳಿಸುವುದಾಗಿದೆ.

302. ನೀನು ಅಲ್ಲಾಹನ ಗುಣಗಳನ್ನು ವರ್ಣಿಸುವವನಾಗು ಮತ್ತು ಅವನ ಧರ್ಮದ ಹಿತೈಷಿಯಾಗು.

303. ನೀನು ಮುಸ್ಲಿಮರಿಗೆ ಒಳಿತನ್ನು ಆಶಿಸುವವನಾಗು.

304. ನೀನು ಹಝ್ರತ್ ಪೈಗಂಬರರ(ಸ) ಗೌರವವನ್ನು ಕಾಪಾಡಿ ಅವರ ಉಪದೇಶಗಳನ್ನು ಪ್ರಚಾರ ಮಾಡುವವನಾಗು.

305. ನೀನು ಎಲ್ಲರಿಗೆ ಒಳಿತನ್ನು ಉಪದೇಶಿಸುವವನೂ ಅವರಿಂದ ಕೆಡುಕನ್ನು ತಡೆಯುವವನೂ ಆಗು.

306. ನೀನು ನಿನ್ನ ಮೃತ ತಂದೆ ತಾಯಂದಿರಿಗೋಸ್ಕರ ಮತ್ತು ನಿನಗೆ ಉಪಕಾರ ಮಾಡಿದವರಿಗೋಸ್ಕರ ಪ್ರಾರ್ಥಿಸು.

307. ನೀನು ಅಲ್ಲಾಹನ ಬಗ್ಗೆ ಉತ್ತಮ ಪ್ರತೀಕ್ಷೆ ಮಾಡು.

308. ನೀನು ಏಕಾಂತದಲ್ಲಿ ಅಲ್ಲಾಹನೊಂದಿಗೆ ನಿನ್ನ ಸ್ನೇಹಿತರ ಜೊತೆ ಮಾತನಾಡುವ ಹಾಗೆ ಮಾತನಾಡು. ಇದರ ಹೆಸರು ಮುನಾಜಾತ್ ಎಂದು.

309. ನೀನು ಅಲ್ಲಾಹನನ್ನು ಎಲ್ಲ ಕಾರಣಗಳನ್ನು ಉಂಟು ಮಾಡುವವನೂ ನಿಜವಾಗಿ ಪ್ರಭಾವಶಾಲಿಯಾದವನೂ ಎಂದು ದೃಢವಾಗಿ ನಂಬು.

310. ನೀನು ಸಂಶಯಗಳಲ್ಲಿ ಮುಳುಗಬೇಡ.

311. ನೀನು ಇಹಲೋಕವನ್ನೇ ಸ್ವರ್ಗವನ್ನಾಗಿ ಮಾಡಲು ಪ್ರಯತ್ನಿಸಬೇಡ. ಇದು ಅಸಾಧ್ಯವಾದುದಾಗಿದೆ.

312. ನೀನು ಪೀರನಿಗೆ ಅಥವಾ ಹಿರಿಯನಿಗೆ ಸಾಷ್ಟಾಂಗ ಪ್ರಣಾಮ ಮಾಡಬೇಡ.

313. ನೀನು ಗೋರಿಯ ಮುಂದೆ ಬಾಗಬೇಡ. ಅದರ ಸುತ್ತಲೂ ಪ್ರದಕ್ಷಿಣೆ ಮಾಡಬೇಡ. ಅದರಲ್ಲಿ ಇಅ್‌ತಿಕಾಫ್‌ಗೋಸ್ಕರ ಕುಳಿತುಕೊಳ್ಳಬೇಡ.

314. ನೀನು ಹಝ್ರತ್ ಪೈಗಂಬರರ(ಸ) ನಡೆವಳಿಕೆಗೆ ವಿರುದ್ಧವಾಗಿ ವರ್ತಿಸಬೇಡ.

315. ನೀನು ಸೂಫಿಗಳ ಮೆಸ್ಮರಿಸಂ ಮತ್ತು ಅವರು ದೃಷ್ಟಿ ಕೇಂದ್ರೀಕರಿಸಿ ಮಾಡುವ ಕ್ರಿಯೆಗಳನ್ನು ಇಸ್ಲಾಮಿನ ಭಾಗ ಎಂದು ಭಾವಿಸಬೇಡ.

316. ನೀನು ಸ್ವತಃ ಪೀರನಾಗು (ಸಾತ್ವಿಕನಾಗು), ಪೀರನ ಪೂಜಕನಾಗಬೇಡ. ನೀನು ಸಂತನಾಗು. ಸಂತನ ಆರಾಧಕನಾಗಬೇಡ.

317. ನಿನ್ನ ಮತ್ತು ಅಲ್ಲಾಹನ ಮಧ್ಯೆ ನೇರ ಸಂಬಂಧವಿದೆ. ಯಾರನ್ನೂ ಮಧ್ಯಸ್ಥನನ್ನಾಗಿ ಮಾಡಬೇಡ.

ಓದಿದ್ದು

## 100 ಭಾಷೆಗಳ ಅನುವಾದಕ್ಕೂ ಸೈ !

ದೇಶ–ವಿದೇಶಗಳ ಪ್ರಯಾಣದಲ್ಲಿ ಪ್ರಮುಖ ಪಾತ್ರ ವಹಿಸುವುದೇ ಭಾಷೆ ! ಯಾವುದೋ ರಾಷ್ಟ್ರದ ಯಾವುದೋ ಊರಿನ ಭಾಷೆಗೆ ನಮ್ಮ ಭಾವವನ್ನು ಅನುವಾದಿಸಿ, ಅರ್ಥೈಸುವುದು ಕಷ್ಟ ಸಾಧ್ಯ. ಈಗಿರುವ ತಂತ್ರಜ್ಞಾನವು ಕೆಲವು ಸೀಮಿತ ಭಾಷೆಗೆ ಅನ್ವಯಿಸುತ್ತಾದರೂ, ಬರೆಯಲು, ಓದಲು ಬಾರದವರಿಗೆ ಅದರ ಪ್ರಯೋಜನವೂ ಅಷ್ಟಕ್ಕಷ್ಟೇ. ಆದರೀಗ ಕೃತಕ ಬುದ್ಧಿಮತ್ತೆ ಚಾಲಿತ ಸೀಮ್‌ಲೆಸ್ ಎಂ4ಟಿ ಎನ್ನುವ ತಂತ್ರಜ್ಞಾನ ಈ ಸಮಸ್ಯೆಗೆ ಪರಿಹಾರ ತಂದಿದೆ. ಬರಹದಿಂದ ಬರಹಕ್ಕೆ, ಬರಹದಿಂದ–ಮಾತಿಗೆ, ಮಾತಿನಿಂದ–ಮಾತಿಗೆ ಹೀಗೆ ಯಾವುದೇ ಮೂಲದಲ್ಲಿ ನೀವು ವಿಚಾರವನ್ನು ಹೇಳಿದರೆ ಸಾಕು, ಅದನ್ನು ನಿಮಗೆ ಬೇಕಾದ ಭಾಷೆಗೆ ಕರಾರುವಕ್ಕಾಗಿ ಅನುವಾದಿಸಲಿದೆ. ಸರಿಸುಮಾರು 100 ಭಾಷೆಗಳಿಗೆ ಅನುವಾದಿಸುವ ಸಾಮರ್ಥ್ಯವನ್ನು ಸೀಮ್‌ಲೆಸ್ ಎಂ4ಟಿ ಹೊಂದಿದ್ದು, ಮೆಟಾ ಎಐ ಸಂಸ್ಥೆ ಇದನ್ನು ಪರಿಚಯಿಸಿದೆ. **(ಉದಯವಾಣಿ 25–08–2023)**

=====================================================================

## ಪ್ರಧಾನಿಗೆ 265 ಪತ್ರ ಬರೆದ ಗೃಹಿಣಿ!

**ಕೊಯಮತ್ತೂರು:** ಸಾರ್ವಜನಿಕ ಸಮಸ್ಯೆಗಳನ್ನು ಹೇಳಿಕೊಂಡು ಅದರ ಪರಿಹಾರಕ್ಕಾಗಿ ಸರಕಾರಕ್ಕೆ ಪತ್ರ ಬರೆಯುವ ನಾಗರಿಕರನ್ನು ನೋಡಿರುತ್ತೀರಿ. ಅಂಥವರು ಹೆಚ್ಚೆಂದರೆ ಎಷ್ಟು ಪತ್ರ ಬರೆಯಬಹುದು? 10, 20, 30...!

ತಮಿಳುನಾಡಿನ ಕೊಯಮತ್ತೂರಿನ 36 ವರ್ಷದ ಮಹಿಳೆಯೊಬ್ಬರು ಬರೋಬ್ಬರಿ 265 ಪತ್ರಗಳನ್ನು ಬರೆಯುವ ಮೂಲಕ ವಿವಿಧ, ಸಾರ್ವಜನಿಕ ವಿಚಾರಗಳನ್ನು ಪ್ರಧಾನಿ ಕಾರ್ಯಾಲಯದ ಗಮನಕ್ಕೆ ತಂದಿದ್ದಾರೆ.

2023ರ ಮಾರ್ಚ್ 8ರಿಂದಲೂ ನಿರಂತರವಾಗಿ ಪ್ರಧಾನಿ ಕಾರ್ಯಾಲಯಕ್ಕೆ ಪತ್ರ ಬರೆಯುತ್ತಿರುವುದು ಕೊಯಮತ್ತೂರಿನ ಗಾಂಧಿಮಾ ನಗರದ ಕೃತಿಕಾ. ಇವರು ಬಿಎಸ್‌ಸಿ ಕಂಪ್ಯೂಟರ್ ಸೈನ್ಸ್ ಪದವೀಧರೆ. 2012ರಲ್ಲಿ ಪಳನಿಸಾಮಿ ಎಂಬವರನ್ನು ವಿವಾಹವಾದ ಬಳಿಕ ನಗರದಲ್ಲೇ ನೆಲೆಸಿದ್ದಾರೆ. **(ಉದಯವಾಣಿ 29–11–2023)**

=====================================================================

## ಸುಪ್ರೀಂನ ಮೊದಲ ಮಹಿಳಾ ನ್ಯಾ ಮೂರ್ತಿ ಫಾತಿಮಾ ನಿಧನ

**ಹೊಸದಿಲ್ಲಿ:** ಸುಪ್ರೀಂ ಕೋರ್ಟ್‌ನ ಮೊದಲ ಮಹಿಳಾ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದ ಎಂ. ಫಾತಿಮಾ ಬೀವಿ (96) ಅವರು ಗುರುವಾರ ನಿಧನ ಹೊಂದಿದ್ದಾರೆ. ತಮಿಳುನಾಡಿನ ಮಾಜಿ ರಾಜ್ಯಪಾಲೆಯೂ ಆಗಿದ್ದ ಅವರು ವಯೋಸಹಜ ಕಾಯಿಲೆ ಹಿನ್ನೆಲೆಯಲ್ಲಿ ಕೊಲ್ಲಂನ ಖಾಸಗಿ ಆಸ್ಪತ್ರೆಯೊಂದರಲ್ಲಿ ಫಾತಿಮಾ ಚಿಕಿತ್ಸೆ ಪಡೆಯುತ್ತಿದ್ದರು. ಈ ವೇಳೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ದೇಶದ ಉನ್ನತ ನ್ಯಾಯಾಂಗ ವ್ಯವಸ್ಥೆಯಲ್ಲಿ ಇತಿಹಾಸ ಸೃಷ್ಟಿಸಿದ್ದ ಅವರು ಇತಿಹಾಸದ ಪುಟಗಳನ್ನು ಸೇರಿದ್ದು, ಬೀವಿ ನಿಧನಕ್ಕೆ ಗಣ್ಯರು ಸಂತಾಪ ಸೂಚಿಸಿದ್ದಾರೆ. ಸುಪ್ರೀಂನ ಮೊದಲ ಮಹಿಳಾ ನ್ಯಾಯಾಧೀಶೆ ಎನ್ನುವ ಖ್ಯಾತಿಯ ಜತೆಗೆ, ಇಂತಹ ಮಹತ್ವದ ಸಾಧನೆ ಮಾಡಿದ ಮುಸ್ಲಿಂ ಸಮುದಾಯದ ಮೊದಲ ಮಹಿಳೆ ಎಂಬ ಗರಿಯೂ ಅವರಿಗಿತ್ತು.

**(ಉದಯವಾಣಿ: 24–11–23)**

=====================================================================

## ಹಾವು ಬಿಟ್ಟು ಪತ್ನಿ, ಪುತ್ರಿಯನ್ನು ಕೊಂದ!

**ಭುವನೇಶ್ವರ:** ಒಡಿಶಾದ ಗಂಜಾಮ್ ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬ ತನ್ನ ಹೆಂಡತಿ ಮತ್ತು ಮಗಳು ಮಲಗಿದ್ದ ಕೋಣೆಗೆ ವಿಷದ ಹಾವನ್ನು ಬಿಟ್ಟು ಪತ್ನಿ ಮಗಳನ್ನು ಕೊಂದಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಕಬಿಸೂರ್ಯನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ವರದಿಯಾಗಿದೆ. ಆರೋಪಿ ಕೆ. ಗಣೇಶ್ ಪಾತ್ರಾಗೂ ಪತ್ನಿ ಕೆ. ಬಸಂತಿ ಪಾತ್ರಾಗೂ ವೈಮನಸ್ಸು ಇತ್ತು. ಇದೇ ಕಾರಣಕ್ಕಾಗಿ ಹಾವಾಡಿಗನಿಂದ ವಿಷದ ಹಾವನ್ನು ಪೂಜೆಗೆಂದು ತರಿಸಿದ ಆತ, ತನ್ನ ಪತ್ನಿ ಮತ್ತು ಮಗಳು ದೇಬಸ್ಮಿತ ಮಲಗಿದ್ದ ಕೋಣೆಗೆ ಹಾವನ್ನು ಬಿಟ್ಟಿದ್ದಾನೆ. ಹಾವು ಕಚ್ಚಿ ಬೆಳಗಾಗುವ ವೇಳೆಗೆ ತಾಯಿ ಮಗಳಿಬ್ಬರೂ ಮೃತಪಟ್ಟಿದ್ದಾರೆ. ಮೊದಲಿಗೆ ಪೊಲೀಸರು ಅಸಹಜ ಸಾವು ಎಂದು ಪ್ರಕರಣ ದಾಖಲಿಸಿದ್ದರು. ಆದರೆ ಮೃತ ಮಹಿಳೆಯ ತಂದೆ ನೀಡಿದ ದೂರು ಆಧರಿಸಿ ವಿಚಾರಣೆ ನಡೆಸಿದಾಗ ಕೃತ್ಯ ಬೆಳಕಿಗೆ ಬಂದಿದೆ.

**(ಉದಯವಾಣಿ 25–11–2023)**

=====================================================================

## ಡ್ರಗ್ಸ್‌ಗಾಗಿ ಮಕ್ಕಳ ಮಾರಿದ ದಂಪತಿ!

**ಮುಂಬಯಿ:** ಮಾದಕವಸ್ತು ಖರೀದಿಸುವುದಕ್ಕಾಗಿ ತಿಂಗಳ ಹಸುಗೂಸು ಹಾಗೂ 2 ವರ್ಷದ ಮಗನನ್ನು ಮಾರಾಟ ಮಾಡಿರುವ ದಂಪತಿ ಸೇರಿ ಮೂವರನ್ನು ಮುಂಬಯಿ ಪೊಲೀಸರು ಬಂಧಿಸಿದ್ದಾರೆ. 1 ತಿಂಗಳ ಮಗುವನ್ನು ರಕ್ಷಿಸಲಾಗಿದ್ದು, ಮಾರಾಟವಾದ ಮತ್ತೊಂದು ಮಗುವಿಗಾಗಿ ಶೋಧ ಕಾರ್ಯ ನಡೆಸಲಾಗುತ್ತಿದೆ. ಮುಂಬಯಿ ಕ್ರೈಂಬ್ರ್ಯಾಂಚ್ ಮಾಹಿತಿಯ ಪ್ರಕಾರ, ಅಂಧೇರಿ ನಿವಾಸಿಗಳಾದ ಶಬೀರ್ ಹಾಗೂ ಸಾನಿಯಾ ಖಾನ್ ಎಂಬ ದಂಪತಿ ಮಾದಕವ್ಯಸನಿಗಳಾಗಿದ್ದರು. ಮಾದಕವಸ್ತು ಖರೀದಿಸುವುದಕ್ಕಾಗಿ ಶಕೀಲ್ ಮಕ್ರಾನಿ

ಎಂಬವನ ಜತೆ ಸೇರಿ 2 ವರ್ಷದ ಗಂಡು ಮಗುವನ್ನು 60 ಸಾವಿರ ರೂ.ಗೆ, 1 ತಿಂಗಳ ಹೆಣ್ಣು ಮಗುವನ್ನು 14,000 ರೂ.ಗೆ ಮಾರಾಟ ಮಾಡಿದ್ದಾರೆ. ಕುಟುಂಬಸ್ಥರಿಗೆ ವಿಚಾರ ತಿಳಿಯುತ್ತಿದ್ದಂತೆ ಪೊಲೀಸರಿಗೆ ಮಾಹಿತಿ ನೀಡಿದ್ದು, ಪ್ರಕರಣ ಬೆಳಕಿಗೆ ಬಂದಿದೆ.

**(ಉದಯವಾಣಿ 25–11–2023)**

===========================================================

## ಚಪ್ಪಲಿ ಬಾಯಲ್ಲಿಟ್ಟು ಥಳಿತ!

**ಗಾಂಧಿನಗರ:** ಬಾಕಿ ಉಳಿಸಿಕೊಂಡಿದ್ದ ವೇತನವನ್ನು ಕೇಳಿದ್ದಕ್ಕಾಗಿ ದಲಿತ ಉದ್ಯೋಗಿಯೊಬ್ಬರನ್ನು ಮನಸೋ ಇಚ್ಛೆ ಥಳಿಸಿ, ಮಾಲಕಿಯ ಚಪ್ಪಲಿಯನ್ನು ಬಾಯಲ್ಲಿ ಇಟ್ಟುಕೊಳ್ಳುವಂತೆ ಪೀಡಿಸಿರುವ ಆರೋಪ ಸಂಬಂಧ ಮಹಿಳಾ ಉದ್ಯಮಿ ಹಾಗೂ 6 ಮಂದಿ ವಿರುದ್ಧ ಗುಜರಾತ್‌ನ ಮೊರ್ಬಿ ಪೊಲೀಸರು ಕೇಸು ದಾಖಲಿಸಿದ್ದಾರೆ. ರಾಣಿಬಾ ಇಂಡಸ್ಟ್ರೀಸ್ ಪ್ರೈ.ಲಿ. ಮಾಲಕರಾದ ವಿಭೂತಿ ಪಟೇಲ್ ಅವರು ನೀಲೇಶ್ ದಲ್ಸಾನಿಯಾ(21) ಎಂಬ ಯುವಕನನ್ನು ಮಾಸಿಕ 12,000ರೂ. ವೇತನಕ್ಕೆ ಕೆಲಸಕ್ಕೆ ತೆಗೆದುಕೊಂಡಿದ್ದರು. ಆದರೆ 18 ದಿನಗಳಲ್ಲೇ ಒಪ್ಪಂದವನ್ನು ಕೊನೆಗೊಳಿಸಲಾಯಿತು. ಹೀಗಾಗಿ ಅವರೆಗಿನ 16 ದಿನಗಳ ಸಂಬಳ ನೀಡುವಂತೆ ನೀಲೇಶ್ ಕೇಳಿದ್ದಾರೆ. ಅದನ್ನು ಕೊಡಲು ನಿರಾಕರಿಸಿದ ವಿಭೂತಿ, ಆಕೆಯ ಅಣ್ಣ ಹಾಗೂ ಇತರ 5 ಮಂದಿ ಸೇರಿ ನೀಲೇಶ್‌ನನ್ನು ಥಳಿಸಿ ಆಕೆಯ ಚಪ್ಪಲಿಯನ್ನು ಬಾಯಲ್ಲಿ ಕಚ್ಚಿಕೊಳ್ಳುವಂತೆ ಹಿಂಸಿಸಿದ್ದಾರೆ ಎನ್ನಲಾಗಿದೆ. **(ಉದಯವಾಣಿ 25–11–2023)**

===========================================================

## ಬರ್ತ್‌ಡೇಗೆ ದುಬ್ಯಾಗೆ ಕರೆದೊಯ್ಯದ ಪತಿಯನ್ನು ಗುದ್ದಿ–ಗುದ್ದಿ ಕೊಂದ ಪತ್ನಿ!

**ಮುಂಬಯಿ:** ಬರ್ತ್‌ಡೇ ಆಚರಣೆಗೆ ದುಬ್ಯಾಗೆ ಕರೆದುಕೊಂಡು ಹೋಗಲಿಲ್ಲವೆನ್ನುವ ಕೋಪದಲ್ಲಿ ಪುಣೆಯ ಮಹಿಳೆಯೊಬ್ಬರು ತಮ್ಮ ಪತಿಯ ಮೂಗಿಗೆ ಗುದ್ದಿ ಗಾಯಗೊಳಿಸಿ ಕೊಂದಿರುವ ಘಟನೆ ವರದಿಯಾಗಿದೆ. ವನ್ವಾಡಿ ನಗರದ ಅಪಾರ್ಟ್‌ಮೆಂಟ್ ನಿವಾಸಿಗಳಾಗಿದ್ದ ರೇಣುಕಾ (38) ಮತ್ತು ನಿಖಿಲ್ ಖನ್ನಾ (36) ದಂಪತಿ 6 ವರ್ಷದ ಹಿಂದೆ ಪ್ರೀತಿಸಿ ಮದುವೆಯಾಗಿದ್ದರು. ಇತ್ತೀಚೆಗೆ ರೇಣುಕಾ ಹುಟ್ಟುಹಬ್ಬಕ್ಕೆ ಪತಿ ದುಬ್ಯಾಗೆ ಕರೆದುಕೊಂಡು ಹೋಗಬಹುದೆಂದು ನಿರೀಕ್ಷಿಸಿದ್ದರು. ಪತಿ ಅದನ್ನು ನೆರವೇರಿಸದೇ ಇದ್ದಾಗ ಇಬ್ಬರ ಮಧ್ಯೆ ಜಗಳ ಆರಂಭವಾಗಿ ರೇಣುಕಾ, ನಿಖಿಲ್ ಮೂಗಿಗೆ ಗುದ್ದಿದ್ದಾರೆ. ಇದರಿಂದ ತೀವ್ರ ರಕ್ತಸ್ರಾವವಾಗಿ ಪತಿ ಮೃತಪಟ್ಟಿದ್ದಾರೆ.

**(ಉದಯವಾಣಿ 26–11–2023)**

===========================================================

## ಎಂಟು ಮಕ್ಕಳನ್ನು ಪಡೆಯಿರಿ
## ರಷ್ಯಾದ ಮಹಿಳೆಯರಿಗೆ ಅಧ್ಯಕ್ಷ ವ್ಲಾದಿಮಿರ್ ಪುತಿನ್ ಕರೆ

**ಮಾಸ್ಕೋ:** 'ರಷ್ಯಾದ ಮಹಿಳೆಯರು ಎಂಟು ಮಕ್ಕಳನ್ನು ಪಡೆಯುವ ಬಗ್ಗೆ ಆಲೋಚಿಸಬೇಕು' – ಹೀಗೆಂದು ಆ ದೇಶದ ಅಧ್ಯಕ್ಷ ವ್ಲಾದಿಮಿರ್ ಪುತಿನ್ ಕರೆ ನೀಡಿದ್ದಾರೆ.

ಎರಡು ವರ್ಷಗಳಿಂದ ನಡೆಯುತ್ತಿರುವ ಉಕ್ರೇನ್ ಜತೆಗಿನ ಕಾಳಗದಲ್ಲಿ 3 ಲಕ್ಷ ಮಂದಿ ಅಸುನೀಗಿರುವುದು, 1990ರಿಂದ ಸತತವಾಗಿ ಇಳಿಮುಖವಾಗುತ್ತಿರುವ ಜನನ ಪ್ರಮಾಣ ರಷ್ಯಾ ಅಧ್ಯಕ್ಷರನ್ನು ಕಂಗೆಡಿಸಿದೆ. ಅದಕ್ಕೆ ಪೂರಕವಾಗಿ ಪುತಿನ್ ಈ ಮಾತುಗಳನ್ನಾಡಿದ್ದಾರೆ ಎಂದು ಹೇಳಲಾಗುತ್ತಿದೆ. ಇದರ ಜತೆಗೆ 8.20 ಲಕ್ಷದಿಂದ 9.20 ಲಕ್ಷ ಮಂದಿ ದೇಶ ಬಿಟ್ಟು ಪರಾರಿಯಾಗಿರುವ ವರದಿಗಳೂ ಇವೆ.

ಇದರಿಂದ ಆತಂಕಕ್ಕೆ ಒಳಗಾಗಿರುವ ಅವರು ಸ್ತ್ರೀಯರು ಕನಿಷ್ಠ 8 ಮಕ್ಕಳನ್ನಾದರೂ ಹೆರಬೇಕು. ಮುಂದಿನ ದಶಕಗಳಲ್ಲಿ ರಷ್ಯಾದ ಜನಸಂಖ್ಯೆಯನ್ನು ವೃದ್ಧಿಸುವುದೇ ನಮ್ಮ ಗುರಿ ಎಂದಿದ್ದಾರೆ! ನಮ್ಮ ಹಲವು ಜನಾಂಗಗಳು ಈಗಲೂ 4ರಿಂದ 8 ಮಕ್ಕಳನ್ನು ಹೆರುವ ಕ್ರಮವನ್ನು ಉಳಿಸಿಕೊಂಡು ಬಂದಿವೆ. ನಮ್ಮ ಹಿಂದಿನ ಎಷ್ಟೋ ಅಜ್ಜಿ ಮುತ್ತಜ್ಜಿಯರು 7, 8 ಅಥವಾ ಅದಕ್ಕಿಂತ ಹೆಚ್ಚು ಮಕ್ಕಳನ್ನು ಹೆರುತ್ತಿದ್ದರು. ಅದನ್ನು ಪುನಃಸ್ಥಾಪಿಸಬೇಕಿದೆ ಎಂದು ವಿಶ್ವ ರಷ್ಯಾ ಜನಸಮಿತಿ ಸಭೆಯಲ್ಲಿ ಹೇಳಿದ್ದಾರೆ. ಅವರು ಆನ್‌ಲೈನ್ ಮೂಲಕ ಮಾಸ್ಕೋದಲ್ಲಿ ನಡೆದ ಸಮಾವೇಶದಲ್ಲಿ ಮಾತನಾಡಿದರು.

ದೊಡ್ಡ ಕುಟುಂಬಗಳು ಮತ್ತೆ ನಮ್ಮ ಸಹಜ ಜೀವನಕ್ರಮವಾಗಬೇಕು. ಕುಟುಂಬಗಳು ದೇಶ ಮತ್ತು ಸಮಾಜದ ಅಡಿಪಾಯ ಮಾತ್ರವಲ್ಲ, ಇದೊಂದು ಆಧ್ಯಾತ್ಮಿಕ ಲಕ್ಷಣ. ಸ್ಫೂರ್ತಿಯ ಮೂಲವೂ ಹೌದು. ರಷ್ಯಾ ಸಂತತಿಯನ್ನು ಕಾಪಾಡಿಕೊಳ್ಳುವುದು, ಬೆಳೆಸುವುದು ನಮ್ಮ ಗುರಿ. ಅದೇ ಸಾವಿರಾರು ವರ್ಷಗಳ, ಶಾಶ್ವತ ರಷ್ಯಾ ಪ್ರಪಂಚದ ಗುರಿ ಎಂದು ಪುತಿನ್ ಹೇಳಿದ್ದಾರೆ.

**(ಉದಯವಾಣಿ: 02–12–2023)**

===========================================================

## ಲೈಂಗಿಕ ಕಿರುಕುಳ: 189 ವರ್ಷ ಸಜೆ

**ಕಾಸರಗೋಡು, ಡಿ.1:** ಏಳುವರ್ಷದ ಬಾಲಕಿ ಹಾಗೂ ಅಪ್ರಾಪ್ತ ವಯಸ್ಕ ಇಬ್ಬರು ಆಕೆಯ ಸಹೋದರರಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣಕ್ಕೆ ಸಂಬಂಧಿಸಿ ಬಳಾಲ್ ಅರಿಂಜಲ್‌ನ ಟಿ.ಜಿ. ಸುಧೀಶ್ ಆಲಿಯಾಸ್ ಪಪ್ಪು(25)ಗೆ ಹೊಸದುರ್ಗ ಕ್ಷಿಪ್ರ ವಿಶೇಷ ನ್ಯಾಯಾಲಯ

ವಿವಿಧ ಸೆಕ್ಷನ್‌ಗಳಲ್ಲಿ ಒಟ್ಟು 189 ವರ್ಷ ಸಜೆ ಹಾಗೂ 4.05 ಲಕ್ಷ ರೂ. ದಂಡ ವಿಧಿಸಿದೆ. ದಂಡ ಪಾವತಿಸದಿದ್ದಲ್ಲಿ 2 ವರ್ಷ ನಾಲ್ಕು ತಿಂಗಳು ಹೆಚ್ಚುವರಿಯಾಗಿ ಸಜೆ ಅನುಭವಿಸುವಂತೆ ಹಾಗೆಯೇ ಶಿಕ್ಷೆಯನ್ನು 50 ವರ್ಷವಾಗಿ ಅನುಭವಿಸಿದರೆ ಸಾಕೆಂದು ತೀರ್ಪಿನಲ್ಲಿ ತಿಳಿಸಿದೆ. **(ಉದಯವಾಣಿ: 02–12–2023)**

==========================================================

## 'ಜೈ ಶ್ರೀರಾಮ್' ಹೇಳುವಂತೆ ಅಂಧ ವೃದ್ದನ ಮೇಲೆ ದೌರ್ಜನ್ಯ ಆರೋಪ

**ಗಂಗಾವತಿ, ಡಿ. 1:** 'ಜೈ ಶ್ರೀರಾಮ್' ಘೋಷಣೆ ಕೂಗುವಂತೆ ಒತ್ತಾಯಿಸಿ ನಗರದಲ್ಲಿ ಅಂಧ ಮುಸ್ಲಿಂ ವೃದ್ಧರೊಬ್ಬರ ಮೇಲೆ ಹಲ್ಲೆ ನಡೆಸಿದ ಆರೋಪ ಕೇಳಿ ಬಂದಿದೆ. ಗಂಗಾವತಿ ಮೆಹಬೂಬನಗರದ ನಿವಾಸಿ ಹುಸೇನಸಾಬ ಅವರು ಹೊಸಪೇಟೆಯಿಂದ ನ. 25ರಂದು ಬೆಳಗ್ಗಿನ ಜಾವ ಆಗಮಿಸಿ ಮನೆಗೆ ತೆರಳಲು ಆಟೋಗಾಗಿ ಕಾಯುತ್ತಿದ್ದರು. ಆಗ ಕೆಲವು ಯುವಕರು ಆಗಮಿಸಿ ಬೈಕ್‌ನಲ್ಲಿ ಕೂರಿಸಿಕೊಂಡು ಸಿದ್ದಿಕೇರಿಗೆ ಹೋಗುವ ಮಾರ್ಗದ ರೈಲ್ವೆ ಸೇತುವೆ ಕೆಳಗಡೆ ಕರೆದುಕೊಂಡು ಹೋಗಿದ್ದಾರೆ. ಅಲ್ಲಿ 'ಜೈ ಶ್ರೀರಾಮ್' ಹೇಳುವಂತೆ ಒತ್ತಾಯಿಸಿ ನನ್ನ ಮೇಲೆ ಹಲ್ಲೆ ಮಾಡಿದ್ದಲ್ಲದೆ, ನನ್ನ ಗಡ್ಡಕ್ಕೆ ಬೆಂಕಿ ಹಚ್ಚಿದ್ದಾರೆ. ಬೆಳಗಿನ ಜಾವ ಕುರಿ ಕಾಯುವ ಹುಡುಗರು ನನ್ನನ್ನು ಮನೆಗೆ ತಲುಪಿಸಿದ್ದಾರೆ ಎಂದು ಹುಸೇನಸಾಬ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. **(ಉದಯವಾಣಿ: 08–12–23)**

==========================================================

## ಎಂಜಲು ತಟ್ಟೆ ಮೈ ಸೋಕಿಸಿದ್ದಕ್ಕೆ ಕೊಲೆ!

**ಲಕ್ನೋ:** ಮದುವೆ ಮನೆಯೊಂದರಲ್ಲಿ ಎಂಜಲು ತಟ್ಟೆಗಳನ್ನು ಕೊಂಡೊಯ್ಯುತ್ತಿದ್ದ ಕೆಲಸಗಾರ ಅಚಾನಕ್ಕಾಗಿ ಕೆಲವು ಅತಿಥಿಗಳಿಗೆ ತಟ್ಟೆಗಳನ್ನು ಮೈ ಸೋಕಿಸಿದನೆಂಬ ಕಾರಣಕ್ಕೆ ಆತನನ್ನು ಹೊಡೆದು ಕೊಂದಿರುವ ಅಮಾನವೀಯ ಘಟನೆ ಉತ್ತರಪ್ರದೇಶದ ಘಾಜಿಯಾಬಾದ್‌ನಲ್ಲಿ ನಡೆದಿದೆ. ಘಟನೆ ಸಂಬಂಧ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ಮೃತನನ್ನು ಪಂಕಜ್ ಕುಮಾರ್ ಎಂದು ಗುರುತಿಸಲಾಗಿದೆ. ಮದುವೆ ಸಮಾರಂಭದಲ್ಲಿ ಅಚಾನಕ್ಕಾಗಿ ತಟ್ಟೆಗಳು ಕೈಜಾರಿ ಅತಿಥಿಗಳ ಮೇಲೆ ಬಿದ್ದಿದೆ. ಇದರಿಂದ ಕೋಪಗೊಂಡ ಮನೋಜ್ ಗುಪ್ತಾ, ಅಮಿತ್ ಕುಮಾರ್ ಹಾಗೂ ಮತ್ತೋರ್ವ ಯುವಕ ಸೇರಿ ಪಂಕಜ್‌ಗೆ ಥಳಿಸಿದ್ದಾರೆ. ಆತ ಸ್ಥಳದಲ್ಲೇ ಮೃತಪಟ್ಟಿದ್ದು, ಶವವನ್ನು ಆರೋಪಿಗಳು ತೋಪೊಂದರಲ್ಲಿ ಎಸೆದು ಹೋಗಿದ್ದಾರೆ. **(ಉದಯವಾಣಿ: 08–12–2023)**

==========================================================

## ಅಯೋಧ್ಯೆ ಮಸೀದಿಯಲ್ಲಿ ವಿಶ್ವದ ಅತೀದೊಡ್ಡ ಕೇಸರಿ ಕುರಾನ್‌ಗೆ ಸ್ಥಾನ

**ಲಕ್ನೋ:** ಅಯೋಧ್ಯೆಯ ಧನ್ನಿಪುರದಲ್ಲಿ ನಿರ್ಮಾಣವಾಗಲಿರುವ ಮಸೀದಿಯು ತಾಜ್ ಮಹಲ್‌ಗಿಂತಲೂ ಸುಂದರವಾಗಿರಲಿದ್ದು ವಿಶ್ವದಲ್ಲೇ ಅತೀದೊಡ್ಡ ಗಾತ್ರದ ಕೇಸರಿ ಬಣ್ಣದ ಕುರಾನ್ ಪ್ರತಿಯನ್ನು ಹೊಂದಿರಲಿದೆ ಎಂದು ಮಸೀದಿ ಅಭಿವೃದ್ಧಿ ಸಮಿತಿ ತಿಳಿಸಿದೆ. ಮಸೀದ್ ಮೊಹಮ್ಮದ್ ಬಿನ್ ಅಬ್ದುಲ್ಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರೂ, ಬಿಜೆಪಿ ನಾಯಕರೂ ಆಗಿರುವ ಹಜಿ ಅರ್ಫತ್ ಶೇಖ್ ಈ ಕುರಿತು ಮಾಹಿತಿ ನೀಡಿ, ಕೇಸರಿ ಬಣ್ಣದ ಕುರಾನ್ 21 ಅಡಿ ಎತ್ತರ, 36 ಅಡಿ ಅಗಲವಿರಲಿದೆ. ಈ ಜಾಗ ಮಸೀದಿಗಷ್ಟೇ ಅಲ್ಲ, ಆಸ್ಪತ್ರೆಗೂ ಮೀಸಲಾಗುವ ಮೂಲಕ ದವಾ ಹಾಗೂ ದುವಾ ಎರಡಕ್ಕೂ ಸ್ಥಾನ ಕಲ್ಪಿಸಲಿದೆ ಎಂದಿದ್ದಾರೆ. **(ಉದಯವಾಣಿ: 22–12–2023)**

==========================================================

## ನಾಲ್ಕು ಸ್ನಾತಕೋತ್ತರ ಪದವಿ, ಪಿಎಚ್‌ಡಿ ಪದವೀಧರನಿಂದ ತರಕಾರಿ ಮಾರಾಟ!

**ಚಂಡೀಗಢ:** ನಾಲ್ಕು ಸ್ನಾತಕೋತ್ತರ ಪದವಿಗಳು ಮತ್ತು ಪಿಎಚ್‌ಡಿ ಮಾಡಿರುವ ಪಂಜಾಬಿನ ವ್ಯಕ್ತಿಯೊಬ್ಬರು ಜೀವನ ನಿರ್ವಹಣೆಗಾಗಿ ಮನೆ ಮನೆಗೆ ತೆರಳಿ ತರಕಾರಿ ಮಾರಾಟ ಮಾಡುತ್ತಿದ್ದಾರೆ. ಡಾ. ಸಂದೀಪ್ ಸಿಂಗ್(39) ಪಟಿಯಾಲದ ಪಂಜಾಬ್ ವಿವಿಯ ಕಾನೂನು ವಿಭಾಗದಲ್ಲಿ 11 ವರ್ಷ ಗುತ್ತಿಗೆ ಆಧಾರದಲ್ಲಿ ಅತಿಥಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದರು, ಆದರೆ ಸಂಬಳದಲ್ಲಿ ಕಡಿತ, ಅನಿಯಮಿತ ವೇತನ ಕಾರಣಕ್ಕಾಗಿ ಕೆಲಸ ಬಿಡುವಂತಾಯಿತು. ಅವರು ಪಂಜಾಬಿ, ಪತ್ರಿಕೋದ್ಯಮ, ರಾಜಕೀಯ ವಿಜ್ಞಾನ ಮತ್ತು ಕಾನೂನಿನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಕಾನೂನು ವಿಷಯದಲ್ಲಿ ಪಿಎಚ್‌ಡಿ ಪಡೆದಿದ್ದಾರೆ. 'ಪಿಎಚ್‌ಡಿ ಸಬ್ಜಿವಾಲಾ' (ಪಿಎಚ್‌ಡಿ ತರಕಾರಿ ಮಾರಟಗಾರ) ಎಂಬ ನಾಮಫಲಕ ಹಾಕಿಕೊಂಡು, ಸೈಕಲ್‌ಗಾಡಿಯಲ್ಲಿ ಮನೆ ಮನೆಗೆ ತೆರಳಿ ತರಕಾರಿ ಮಾರಾಟ ಮಾಡುತ್ತಿದ್ದಾರೆ.

**(ಉದಯವಾಣಿ: 02–01–2024)**

==========================================================

## ಮನುಷ್ಯನ ದೇಹಕ್ಕೆ ತೀವ್ರ ಹಾನಿಕಾರಕ: ಸಂಶೋಧನೆ

## 1 ಲೀ. ಬಾಟಲಿ ನೀರಲ್ಲಿ 2.40 ಲಕ್ಷ ಪ್ಲಾಸ್ಟಿಕ್ ಕಣ!

### 2.40 ಲಕ್ಷ ನ್ಯಾನೋ ಪ್ಲಾಸ್ಟಿಕ್ ಕಣಗಳಿರುವುದು ಸಂಶೋಧನೆಯಲ್ಲಿ ಪತ್ತೆ

**ಹೊಸದಿಲ್ಲಿ:** ಒಂದು ಲೀಟರ್ ಪ್ಲಾಸ್ಟಿಕ್ ಬಾಟಲಿಯಲ್ಲಿನ ನೀರಿನಲ್ಲಿ 2,40,000 ಅತೀಸೂಕ್ಷ್ಮ ಪ್ಲಾಸ್ಟಿಕ್ (ನ್ಯಾನೋಪ್ಲಾಸ್ಟಿಕ್) ಕಣಗಳಿರುತ್ತವೆ! ಹೀಗೆಂದು ಅಮೆರಿಕದ ನ್ಯಾಶನಲ್ ಅಕಾಡೆಮಿ ಆಫ್ ಸೈನ್ಸಸ್ ನಿಯತಕಾಲಿಕೆಯಲ್ಲಿ ಪ್ರಕಟವಾದ ಲೇಖನದಲ್ಲಿ ಸಂಶೋಧಕರು ತಿಳಿಸಿದ್ದಾರೆ.

ಈ ಹಿಂದೆ ಪ್ಲಾಸ್ಟಿಕ್ ಬಾಟಲಿಯಲ್ಲಿ ಇರುತ್ತವೆ ಎಂದು ಅಂದಾಜಿಸಿದ್ದ ಸೂಕ್ಷ್ಮ ಕಣಗಳಿಗಿಂತ, 100 ಪಟ್ಟು ಹೆಚ್ಚು ಅಪಾಯಕಾರಿ ಕಣಗಳು ಒಂದು ಲೀ. ಬಾಟಲಿಯಲ್ಲಿ ಇರುವುದನ್ನು ವಿಜ್ಞಾನಿಗಳು ಈಗ ಪತ್ತೆಹಚ್ಚಿದ್ದಾರೆ.

ಈ ನ್ಯಾನೋಪ್ಲಾಸ್ಟಿಕ್‌ಗಳು ಮನುಷ್ಯನ ಜೀವಕೋಶಗಳು, ರಕ್ತದಲ್ಲಿ ನುಗ್ಗಿ ಗಂಭೀರ ಅನಾರೋಗ್ಯಗಳಿಗೆ ಕಾರಣವಾಗಬಹುದು ಎಂದು ವಿಜ್ಞಾನಿಗಳು ಎಚ್ಚರಿಕೆ ನೀಡಿದ್ದಾರೆ. ಮಾತ್ರವಲ್ಲ ಇನ್ನೂ ಗರ್ಭದಲ್ಲೇ ಇರುವ ಮಗುವಿನ ದೇಹದೊಳಕ್ಕೂ ಈ ಸೂಕ್ಷ್ಮ ಕಣಗಳು ಪ್ರವೇಶಿಸಿ ಅನಾರೋಗ್ಯಕ್ಕೆ ಕಾರಣವಾಗುವ ಶಕ್ತಿ ಹೊಂದಿವೆ. ಈ ಹಿಂದೆ ಮೈಕ್ರೋಮೀಟರ್ ಗಾತ್ರದ ಪ್ಲಾಸ್ಟಿಕ್ ಕಣಗಳಿರುವುದನ್ನು ವಿಜ್ಞಾನಿಗಳು ತಿಳಿಸಿದ್ದರು. ಇದೀಗ ಅದಕ್ಕೂ ಸೂಕ್ಷ್ಮವಾದ ನ್ಯಾನೋ ಪ್ಲಾಸ್ಟಿಕ್ ಕಣಗಳನ್ನು ಪತ್ತೆಹಚ್ಚಿದ್ದಾರೆ. **(ಉದಯವಾಣಿ: 10–01–2024)**

==========================================================================

## ದೇವರೆದುರು ಎಲ್ಲರೂ ಸಮಾನರು

ಸರಳ ಸುಲಭ ಬೋಧನೆಯೇ ಇಸ್ಲಾಂ ಧರ್ಮದ ವೈಶಿಷ್ಟ್ಯ ಅರ್ಥವಾಗದ ತತ್ವ ಜ್ಞಾನದ ಸಿದ್ಧಾಂತಗಳ ಚರ್ಚೆ ಆ ಧರ್ಮದಲ್ಲಿ ಇಲ್ಲ. ಸಮತೆ ಎರಡನೆಯ ವೈಶಿಷ್ಟ್ಯ ದೇವರೆದುರು ಎಲ್ಲರೂ ಸಮಾನರು, ದೇವರ ಮತ್ತು ಮಾನವರ ನಡುವೆ ಯಾವ ಪುರೋಹಿತರೂ ಅಲ್ಲಿಲ್ಲ. –ಸ್ವಾಮಿ ವಿವೇಕಾನಂದ (ಮಾರ್ಚ್ 25, 1900ರಲ್ಲಿ ಕ್ಯಾಲಿಫೋರ್ನಿಯದಲ್ಲಿ ಮುಹಮ್ಮದ್ ಪೈಗಂಬರ್ ಕುರಿತ ಉಪನ್ಯಾಸದಲ್ಲಿ).

**(ವಾರ್ತಾಭಾರತಿ: 12–01–2024)**

==========================================================================

## ಬ್ಯಾಟರಿ, ಸ್ಕ್ರೂ ತಿನ್ನಿಸಿ ಸ್ನೇಹಿತನ ಮಗುವನ್ನೇ ಕೊಂದ ಪಾಪಿ ಮಹಿಳೆ!

**ವಾಷಿಂಗ್ಟನ್:** ಒಂದೂವರೆ ವರ್ಷದ ಮಗುವಿಗೆ ಮಹಿಳೆಯೊಬ್ಬಳು ಬ್ಯಾಟರಿ, ಸ್ಕ್ರೂ, ನೈಲ್‌ಪಾಲಿಶ್ ರಿಮೂವರ್‌ನಂಥ ವಿಷಕಾರಿ ವಸ್ತುಗಳನ್ನು ತಿನ್ನಿಸಿ ಹತ್ಯೆಗೈದಿರುವ ಅಮಾನುಷ ಘಟನೆ ಅಮೆರಿಕದ ಪೆನ್ಸಿಲ್ವೇನಿಯಾದಲ್ಲಿ ವರದಿಯಾಗಿದೆ. 2023ರ ಜೂನ್‌ನಲ್ಲಿ ಬೈಲಿ ಜಾಕೋಬಿ ಅವರ 18 ತಿಂಗಳ ಮಗುವನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆ ಮಗು ಅಂಗಾಂಗ ವೈಫಲ್ಯದಿಂದ ಆಗಲೇ ಮೃತಪಟ್ಟಿತ್ತು. ಇದ್ದಕ್ಕಿದ್ದಂತೆ ಮಗು ಅನಾರೋಗ್ಯಕ್ಕೀಡಾಗಿ ಮೃತಪಟ್ಟಿದ್ದ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗಿದ್ದು, ಇದೀಗ ನಿಜಾಂಶ ಬಯಲಿಗೆ ಬಂದಿದೆ. ಜಾಕೋಬಿ ಅವರ ಗೆಳತಿ ಅಲೆಸಿಯಾ ಓವೆನ್ಸ್ ಮಗುವನ್ನು ಕೊಲ್ಲುವ ಉದ್ದೇಶದಿಂದಲೇ ಈ ವಿಷಕಾರಿ ಅಂಶಗಳ ಬಗ್ಗೆ ಎಲ್ಲ ಸಂಶೋಧಿಸಿ, ಮಗುವಿಗೆ ತಿಂಗಳುಗಟ್ಟಲೆ ವಿಷಪ್ರಾಶನ ಮಾಡಿದ್ದಾಳೆ. ಇದರಿಂದ ಮಗುವಿನ ರಕ್ತದಲ್ಲಿ ಅಸಿಟೋನ್ ಎಂಬ ಅಂಶ ಹೆಚ್ಚಾಗಿ ಮಗು ಮೃತಪಟ್ಟಿದೆ ಎಂದು ಪೊಲೀಸರು ತಿಳಿಸಿದ್ದಾರೆ. **(ಉದಯವಾಣಿ: 15–01–2024)**

==========================================================================

## ಭಾರತದ ಹಿಂಸಾ ಕೃತ್ಯಗಳು ಕಳವಳಕರ ಯುರೋಪಿಯನ್ ಸಂಸತ್ ನಿರ್ಣಯ

**ಬ್ರಸೆಲ್ಸ್ (ಬೆಲ್ಜಿಯಮ್), ಜ.18:** ಭಾರತದಲ್ಲಿ "ಹೆಚ್ಚುತ್ತಿರುವ ಹಿಂಸಾ ಕೃತ್ಯಗಳು, ರಾಷ್ಟ್ರೀಯವಾದಿ ಅಬ್ಬರ ಮತ್ತು ವಿಭಜನವಾದಿ ನೀತಿಗಳ" ಬಗ್ಗೆ ಕಳವಳ ವ್ಯಕ್ತಪಡಿಸುವ ನಿರ್ಣಯವೊಂದನ್ನು ಯುರೋಪಿಯನ್ ಸಂಸತ್ ಬುಧವಾರ ಅಂಗೀಕರಿಸಿದೆ.

ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧದ ಹಿಂಸಾಚಾರ ಮತ್ತು ತಾರತಮ್ಯದ ಕೃತ್ಯಗಳತ್ತ ನಿರ್ಣಯವು ಗಮನ ಸೆಳೆಯುತ್ತದೆ. ಅದೇ ವೇಳೆ, ನಾಗರಿಕ ಸಮಾಜದ ಮೇಲೆ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ಮತ್ತು ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆಯ "ಹಾನಿಕಾರಕ ಪರಿಣಾಮಗಳ"ತ್ತವೂ ಅದು ಬೆಟ್ಟು ಮಾಡಿದೆ.

"ಮಣಿಪುರದಲ್ಲಿ ಹಿಂಸಾಚಾರ ಸೇರಿದಂತೆ ದೇಶದ ಸಾಮಾಜಿಕ ಸಂಘರ್ಷಗಳನ್ನು ಪರಿಹರಿಸಲು ಸಾಧ್ಯವಾಗುವಂತೆ ಪ್ರಚೋದನಕಾರಿ ಹೇಳಿಕೆಗಳನ್ನು ನೀಡುವುದನ್ನು ನಿಲ್ಲಿಸುವಂತೆ ಭಾರತದ ರಾಜಕೀಯ ನಾಯಕರಿಗೆ ಕರೆ ನೀಡುವಂತೆ ನಿರ್ಣಯವು ಯುರೋಪಿಯನ್ ಕೌನ್ಸಿಲ್ ಮತ್ತು ಯುರೋಪಿಯನ್ ಕಮಿಶನನ್ನು ಒತ್ತಾಯಿಸಿದೆ.

ಮಣಿಪುರದಲ್ಲಿ ಕಳೆದ ವರ್ಷದ ಮೇ ತಿಂಗಳಲ್ಲಿ ಮೈತೈ ಮತ್ತು ಕುಕಿ ಸಮುದಾಯಗಳ ಜನರ ನಡುವೆ ಸ್ಫೋಟ ಗೊಂಡ ಸಂಘರ್ಷವು ಈಗಲೂ ಮುಂದು ವರಿಯುತ್ತಿದೆ.

### ಹಕ್ಕುಗಳ ಹೋರಾಟಗಾರರಿಗೆ ಸುರಕ್ಷಿತ, ಪ್ರಜಾಸತ್ತಾತ್ಮಕ ವಾತಾವರಣ ಮರು ನಿರ್ಮಿಸಿ

ಮಾನವ ಹಕ್ಕುಗಳು ಮತ್ತು ಪರಿಸರ ಹೋರಾಟಗಾರರು, ಬುಡಕಟ್ಟು ಜನರು ಮತ್ತು ದಲಿತ ಹಕ್ಕುಗಳ ಸಂರಕ್ಷಕರು, ರಾಜಕೀಯ ಎದುರಾಳಿಗಳು ಹಾಗೂ ಕಾರ್ಮಿಕ ಹೋರಾಟಗಾರರು, ಪತ್ರಕರ್ತರು ಮತ್ತು ಇತರ ನಾಗರಿಕ ಸಮಾಜದ ಕಾರ್ಯಕರ್ತರು ಸುರಕ್ಷಿತವಾಗಿ ಮತ್ತು ಪ್ರಜಾಸತ್ತಾತ್ಮಕವಾಗಿ ಕೆಲಸ ಮಾಡಲು ಸಾಧ್ಯವಾಗುವ ವಾತಾವರಣವನ್ನು ಮರಳಿ ನಿರ್ಮಿಸಲು ಭಾರತೀಯ ರಾಜಕೀಯ ನಾಯಕರೊಂದಿಗೆ ಯುರೋಪಿಯನ್ ಕೌನ್ಸಿಲ್ ಮತ್ತು ಯುರೋಪಿಯನ್ ಕಮಿಶನ್ ಕೆಲಸ ಮಾಡಬೇಕು ಎಂದು ಯುರೋಪಿಯನ್ ಸಂಸತ್‌ನ ನಿರ್ಣಯವು ಕರೆ ನೀಡಿದೆ.

### ನಾಗರಿಕ ಸಮಾಜದ ಮೇಲೆ ದೇಶದ್ರೋಹ ಮೊಕದ್ದಮೆ ಹೂಡಬೇಡಿ

ನಾಗರಿಕ ಸಮಾಜದ ಕಾರ್ಯಕರ್ತರ ಕಾನೂನುಬದ್ಧ ಚಟುವಟಿಕೆಗಳನ್ನು ದಮನಿಸಲು ಅವರ ವಿರುದ್ಧ ದೇಶದ್ರೋಹ, ವಿದೇಶಿ ನಿಧಿ

ಮತ್ತು ಭಯೋತ್ಪಾದನೆಗೆ ಸಂಬಂಧಿಸಿದ ಕಾನೂನುಗಳನ್ನು ಹೇರುವುದನ್ನು ಭಾರತವು ನಿಲ್ಲಿಸಬೇಕಾದ ಅಗತ್ಯವಿದೆ ಎಂದು ಯುರೋಪಿಯನ್ ಸಂಸತ್ ತನ್ನ ನಿರ್ಣಯದಲ್ಲಿ ಕರೆ ನೀಡಿದೆ.

==========================================================

## ಮುಸ್ಲಿಮೇತರ ರಾಜತಾಂತ್ರಿಕರಿಗಾಗಿ ಮೊದಲ ಮದ್ಯದಂಗಡಿ ತೆರೆಯಲು ಸಜ್ಜಾದ ಸೌದಿ ಅರೇಬಿಯ

**ರಿಯಾದ್, ಜ. 25:** ಮುಸ್ಲಿಮೇತರ ರಾಜತಾಂತ್ರಿಕರಿಗಾಗಿ ಸೌದಿ ಅರೇಬಿಯ ರಿಯಾದ್‌ನಲ್ಲಿ ಮೊದಲ ಮದ್ಯದಂಗಡಿ ತೆರೆಯಲು ಸಜ್ಜಾಗಿದೆ ಎಂದು ರಾಯಿಟರ್ಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಈ ಮದ್ಯದಂಗಡಿಯು ಆಲ್ಕೋಹಾಲ್‌ಯುಕ್ತ ಮದ್ಯವನ್ನು ಸರಬರಾಜು ಮಾಡಲಿದೆ ಎಂದು ತಿಳಿದು ಬಂದಿದೆ. ಮುಸ್ಲಿಮೇತರ ರಾಜತಾಂತ್ರಿಕರಿಗಾಗಿ ಮಾತ್ರ ಈ ಮದ್ಯದಂಗಡಿ ಸೇವೆ ನೀಡಲಿದೆ ಎನ್ನಲಾಗಿದೆ.

ಮದ್ಯದಂಗಡಿಯ ಸೇವೆ ಪಡೆಯಲು ಗ್ರಾಹಕರು ಮೊಬೈಲ್ ಅಪ್ಲಿಕೇಶನ್ ಮೂಲಕ ನೋಂದಾಯಿಸಿಕೊಳ್ಳಬೇಕು. ವಿದೇಶಾಂಗ ಸಚಿವಾಲಯದಿಂದ ಕ್ಲಿಯರೆನ್ಸ್ ಕೋಡ್ ಪಡೆಯಬೇಕು. ಮಾಸಿಕ ಕೋಟಾಗಳನ್ನು ಗಮನದಲ್ಲಿಟ್ಟು ಖರೀದಿ ಮಾಡಬೇಕೆಂಬ ಷರತ್ತು ವಿಧಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಇಸ್ಲಾಮಿನಲ್ಲಿ ಮದ್ಯಪಾನ ನಿಷೇಧಿಸಿದ್ದರೂ, ಪ್ರವಾಸೋದ್ಯಮ ಮತ್ತು ವ್ಯಾಪಾರವನ್ನು ಉತ್ತೇಜಿಸಲು ಸೌದಿ ಯುವರಾಜ ಮುಹಮ್ಮದ್ ಬಿನ್ ಸಲ್ಮಾನ್ ನೇತೃತ್ವದ ರಾಜಾಡಳಿತ ಈ ಕ್ರಮ ಕೈಗೊಂಡಿದೆ ಎನ್ನಲಾಗಿದೆ. ತೈಲದ ಹೊರತಾದ ಆರ್ಥಿಕತೆಯನ್ನು ನಿರ್ಮಿಸಲು ಈಗಾಗಲೇ ಸೌದಿ ಅರೇಬಿಯ ಆರಂಭಿಸಿರುವ 'ವಿಷನ್ 2030'ರ ಭಾಗವಾಗಿ ಈ ನಿರ್ಧಾರ ಬಂದಿರಬಹುದು ಎನ್ನಲಾಗಿದೆ.

ಉದ್ದೇಶಿತ ಮದ್ಯದಂಗಡಿಯು ರಾಯಭಾರಿಗಳು ಮತ್ತು ರಾಜತಾಂತ್ರಿಕರು ವಾಸಿಸುವ ರಿಯಾದ್‌ನ ರಾಜತಾಂತ್ರಿಕ ಕ್ವಾರ್ಟರ್ಸ್‌ನಲ್ಲಿದೆ. ರಾಜತಾಂತ್ರಿಕರಲ್ಲದ ಮುಸ್ಲಿಮೇತರರಿಗೆ ಕಟ್ಟುನಿಟ್ಟಾಗಿ ನಿರ್ಬಂಧಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಮುಂಬರುವ ದಿನಗಳಲ್ಲಿ ಮದ್ಯದಂಗಡಿ ತೆರೆಯುವ ನಿರೀಕ್ಷೆಯಿದೆ ಎಂದು ಯೋಜನೆಗಳ ಬಗ್ಗೆ ತಿಳಿದಿರುವ ಮೂಲವೊಂದು ತಿಳಿಸಿದೆ. ಸೌದಿ ಅರೇಬಿಯದಲ್ಲಿ ಮದ್ಯಪಾನದ ವಿರುದ್ಧ ಕಟ್ಟುನಿಟ್ಟಾದ ಕಾನೂನುಗಳಿವೆ. ಕಾನೂನು ಉಲ್ಲಂಘನೆಗೆ ಗಡಿಪಾರು, ದಂಡ ಅಥವಾ ಸೆರೆವಾಸದಂತಹ ಶಿಕ್ಷೆ ನೀಡಲಾಗುತ್ತಿದೆ. **(ವಾರ್ತಾಭಾರತಿ: 26–01–2024)**

==========================================================

## 18 ವರ್ಷ ಅಧ್ಯಯನ ಮಾಡಿ ಪಿಎಚ್‌ಡಿ ಪಡೆದ 89ರ ಅಜ್ಜ! ಧಾರವಾಡದ ಮಾರ್ಕಂಡೇಯ ದೊಡಮನಿ ಸಾಧನೆ. ರಾಜ್ಯದಲ್ಲೇ ಇದು ಹೊಸ ದಾಖಲೆ

*** ಬಸವರಾಜ್ ಹೊಂಗಲ್**

ಧಾರವಾಡ, ಫೆ. 8: ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಿರಿಯ ವ್ಯಕ್ತಿಗಳಿಗೆ ವಿಶ್ವವಿದ್ಯಾಲಯಗಳೇ ಗೌರವ ಡಾಕ್ಟರೇಟ್ ಕೊಡುವುದು ಸಾಮಾನ್ಯ. ಆದರೆ 89 ವರ್ಷ ವಯಸ್ಸಿನ ವೃದ್ಧರೊಬ್ಬರು ತನ್ನ ಮಕ್ಕಳ ವಯಸ್ಸಿನ ಪ್ರಾಧ್ಯಾಪಕರಿಂದ ಮಾರ್ಗದರ್ಶನ ಪಡೆದು, 18 ವರ್ಷ ಹಠ ಬಿಡದೆ ಸಂಶೋಧನ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪಡೆದುಕೊಂಡು ವಿದ್ವತ್ ಲೋಕದ ಗಮನ ಸೆಳೆದಿದ್ದಾರೆ.

ಈ ಸಾಧನೆ ಮಾಡಿದ್ದು ಧಾರವಾಡದ ಗಾಂಧಿವಾದಿ ಮಾರ್ಕಂಡೇಯ ದೊಡಮನಿ. ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠದಲ್ಲಿ ನೂರಾರು ಜನ ಸಂಶೋಧಕರು ಶಿವಶರಣರ ಬಗ್ಗೆ ಈಗಾಗಲೇ ಪಿಎಚ್‌ಡಿ ಮಾಡಿದ್ದಾರೆ. ಆದರೆ ಡೋಹರ ಕಕ್ಕಯ್ಯನ ಕುರಿತು ಈವರೆಗೆ ಸಿಕ್ಕಿದ್ದು ಕೇವಲ 6 ವಚನಗಳು ಮಾತ್ರ. ಇಷ್ಟನ್ನೇ ಇಟ್ಟುಕೊಂಡು ಡೋಹರ ನೆಲಮೂಲ ಸಂಸ್ಕೃತಿ, ಶರಣರ ಜತೆಗೆ ಕಕ್ಕಯ್ಯ ಹೊಂದಿದ್ದ ಒಡನಾಟ ಸಹಿತ ಎಲ್ಲ ವಿಚಾರಗಳನ್ನು ಮಾರ್ಕಂಡೇಯ ಅವರು ಅತ್ಯಂತ ಶ್ರದ್ಧೆಯಿಂದ ಸಂಶೋಧನಾತ್ಮಕವಾಗಿ ಹೆಕ್ಕಿ ತೆಗೆದು ದಾಖಲಿಸಿಕೊಂಡಿದ್ದಾರೆ.

ರಾಜ್ಯದ ಶೈಕ್ಷಣಿಕ ಇತಿಹಾಸದಲ್ಲೇ ಇಷ್ಟು ಹಿರಿಯರು ಇದೇ ಪ್ರಥಮ ಬಾರಿಗೆ ಪಿಎಚ್‌ಡಿ ಪದವಿ ಪಡೆದುಕೊಳ್ಳುತ್ತಿದ್ದಾರೆ. ಹಿಂದೆ 76 ವರ್ಷ ಮತ್ತು 79 ವಯಸ್ಸಿನವರು ಕ್ರಮವಾಗಿ ಬೆಂಗಳೂರು ಮತ್ತು ಕಲಬುರಗಿ ವಿವಿಯಿಂದ ಪಿಎಚ್‌ಡಿ ಪಡೆದುಕೊಂಡಿದ್ದಾರೆ. ಕವಿವಿ ಕನ್ನಡ ಅಧ್ಯಯನ ಪೀಠದ ಕಲಾ ನಿಕಾಯವು ಮಾರ್ಕಂಡೇಯ ಬರೆದ 'ಶಿವಶರಣ ಡೋಹರ ಕಕ್ಕಯ್ಯ ಒಂದು ಅಧ್ಯಯನ' ಎಂಬ 150 ಪುಟಗಳ ಮಹಾಪ್ರಬಂಧಕ್ಕೆ ಪಿಎಚ್‌ಡಿ ನೀಡಿದೆ.

### ಡಿಜಿಟಲ್‌ಗೆ ಸಡ್ಡು ಹೊಡೆದು ಸಾಧನೆ ಮಾಡಿದ ಅಜ್ಜ

ಹೊಸ ತಲೆಮಾರಿನ ಯುವಕರಿಗೆ ಡಿಜಿಟಲ್ ತಂತ್ರಜ್ಞಾನ ಗೊತ್ತಿದೆ. ಗೂಗಲ್ ಸಹಿತ ಅನೇಕ ಕಳ್ಳದಾರಿಗಳ ಮೂಲಕ ದತ್ತಾಂಶಗಳ ಸಂಗ್ರಹ, ಮಾಹಿತಿ ಪಡೆದುಕೊಳ್ಳುವಿಕೆಯ ವಿಧಾನಗಳು ಗೊತ್ತಿವೆ. ಆದರೆ ಮಾರ್ಕಂಡೇಯ ಅವರು ಡಿಜಿಟಲ್‌ಗೆ ಸಡ್ಡು ಹೊಡೆದು ಸಾಂಪ್ರದಾಯಿಕ ವಿಧಾನಗಳನ್ನೇ ಬಳಸಿಕೊಂಡು, ಅಧಿಕೃತವಾಗಿ ಓದಿ, ಕ್ಷೇತ್ರ ಕಾರ್ಯ ಮಾಡಿ, ಸತತ 18 ವರ್ಷ ಸುತ್ತಾಡಿ ಮಾಹಿತಿಗಳನ್ನು ಕಲೆ ಹಾಕಿ ಈ ಪಿಎಚ್‌ಡಿ ಪ್ರಬಂಧ ಮಂಡಿಸಿದ್ದನ್ನು ಕವಿವಿಯ ವಿದ್ವಾಂಸರ ಸಭೆ ಮೆಚ್ಚಿದೆ. **(ಉದಯವಾಣಿ: 09–02–2024)**

## 103ನೇ ವಯಸ್ಸಿನಲ್ಲಿ 3ನೇ ಮದುವೆ!

**ಭೋಪಾಲ್:** ಮಧ್ಯಪ್ರದೇಶದ ಭೋಪಾಲ್‌ನ 103 ವರ್ಷದ ಸ್ವಾತಂತ್ರ್ಯ ಹೋರಾಟಗಾರರೊಬ್ಬರು, ತಮ್ಮ ಈ ಇಳಿವಯಸ್ಸಿನಲ್ಲಿ ಮೂರನೇ ಮದುವೆಯಾಗಿದ್ದಾರೆ. ಭೋಪಾಲ್‌ನ ಇಟ್ವಾರಾ ನಿವಾಸಿಯಾಗಿರುವ ಹಬೀಬ್ ನಜರ್(103) 49 ವರ್ಷದ ಫಿರೋಜ್ ಜಹಾನ್‌ರನ್ನು ವಿವಾಹವಾಗಿದ್ದಾರೆ. 'ಮಹಾತ್ಮ ಗಾಂಧಿ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದೆ. 50 ವರ್ಷಗಳ ಹಿಂದೆ ನಾಸಿಕ್‌ನಲ್ಲಿ ನಾನು ಮೊದಲ ಮದುವೆಯಾದೆ. ಆಕೆ ನಿಧನ ಹೊಂದಿದ ಬಳಿಕ 2ನೇ ಮದುವೆಯಾದೆ. ಕೊನೆಗೆ ಆಕೆಯೂ ಕೊನೆಯುಸಿರೆಳೆದಳು. ಈಗ ಒಂಟಿತನ ಕಾಡುತ್ತಿದೆ. ಮತ್ತು ಅಡುಗೆ ಮಾಡುವವರು ಯಾರೂ ಇರಲಿಲ್ಲ. ಹೀಗಾಗಿ 3ನೇ ಮದುವೆಯಾದೆ' ಎಂದು ಹೇಳಿಕೊಂಡಿದ್ದಾರೆ.

**(ಉದಯವಾಣಿ: 30–01–2024)**

==========================================================================

## ಮಕ್ಕಳನ್ನು ಹಡೆದರೆ 60 ಲಕ್ಷ ನಗದು!

**ಹೊಸದಿಲ್ಲಿ:** ಭಾರತದಂತಹ ದೇಶಗಳಲ್ಲಿ ಜನಸಂಖ್ಯಾ ನಿಯಂತ್ರಣಕ್ಕೆ ಸರಕಾರಗಳು ಕಸರತ್ತು ನಡೆಸುತ್ತಿದ್ದರೆ, ಜನನ ಪ್ರಮಾಣ ಕುಂಠಿತವಾಗಿರುವ ದಕ್ಷಿಣ ಕೊರಿಯಾದಲ್ಲಿ ಮಕ್ಕಳನ್ನು ಹೆರುವ ಉದ್ಯೋಗಿಗಳಿಗೆ ತಲಾ 60 ಲಕ್ಷ ರೂ.ಗಳನ್ನು ನೀಡುವುದಾಗಿ ಖಾಸಗಿ ಕಂಪೆನಿಯೊಂದು ಘೋಷಿಸಿದೆ. ಮಕ್ಕಳನ್ನು ಹೆತ್ತ ತನ್ನ ಉದ್ಯೋಗಿಗಳಿಗೆ ಹಣಕಾಸಿನ ಹೊರೆ ತಗ್ಗಿಸುವ ನಿಟ್ಟಿನಲ್ಲಿ ನೇರ ಹಣಕಾಸು ಬೆಂಬಲ ನೀಡುವುದಾಗಿ ಕಟ್ಟಡ ನಿರ್ಮಾಣ ಕಂಪೆನಿ ಬೂಯಂಗ್ ಗ್ರೂಪ್‌ನ ಅಧ್ಯಕ್ಷ ಲೀ ಜೋಂಗ್ ಕ್ಯೂನ್ ಘೋಷಿಸಿದ್ದಾರೆ. ದ. ಕೊರಿಯಾದಲ್ಲಿ ಫಲವತ್ತತೆ ದರ 2022ರಲ್ಲಿ ಶೇ. 0.81ರಿಂದ 0.78ಕ್ಕೆ ಇಳಿಕೆಯಾಗಿ, ಜನನ ಪ್ರಮಾಣ 2.60 ಲಕ್ಷದಿಂದ 2.49 ಲಕ್ಷಕ್ಕೆ ಕುಸಿದಿತ್ತು.

**(ಉದಯವಾಣಿ: 12–02–2024)**

==========================================================================

## ನಾಯಿಗೂಡಿನಲ್ಲಿ ಬೆಳೆದ ಓಕ್ಸಾನಾ, ನಾಯಿಯಂತೆಯೇ ಆದಳು!

**ಕೀವ್:** ನೀವೆಲ್ಲರೂ 'ಆಫ್ರಿಕಾದಲ್ಲಿ ಶೀಲಾ', ಹಾಗೆಯೇ 'ಟಾರ್ಜನ್ ಆ್ಯಂಡ್ ಮೋಗ್ಲಿ' ಚಿತ್ರ ನೋಡಿರುತ್ತೀರಿ. 'ಅಯ್ಯೋ, ಪ್ರಪಂಚದಲ್ಲಿ ಹೀಗೂ ಉಂಟೆ?' ಎಂದುಕೊಂಡಿರಬಹುದು. ಆದರೆ ಇದೇ ಕಥೆಗಳನ್ನು ಹೋಲುವ ನೈಜ ಘಟನೆ ಉಕ್ರೇನ್‌ನಲ್ಲಿ ನಡೆದಿದೆ. ಓಕ್ಸಾನಾ ಮಲಾಯಾ 3 ವರ್ಷದವಳಾಗಿದ್ದಾಗ, ತನ್ನ ಹೆತ್ತವರು ಅತಿಯಾಗಿ ಮದ್ಯಪಾನ ಮಾಡಿ ಈಕೆಯನ್ನು ಮನೆಯಿಂದ ಹೊರಗಟ್ಟಿದರು. ಅಂದು ತಮ್ಮ ಮನೆಯ ಸಾಕು ನಾಯಿ ಜತೆ ಮಲಗಿದ್ದ ಆಕೆಯ ಜೀವನವು ಆಘಾತಕಾರಿ ತಿರುವು ಪಡೆಯಿತು. 5 ವರ್ಷ ನಾಯಿಗೂಡಿನಲ್ಲೇ ಬೆಳೆದ ಈಕೆ, ನಾಯಿಗಳ ರೀತಿ 4 ಕಾಲಿನಲ್ಲಿ ನಡೆಯುವುದು, ಬೊಗಳುವುದು, ಕೈಗಳ ಸಹಾಯವಿಲ್ಲದೆ ಬಾಯಿಯಿಂದಲೇ ಆಹಾರ ಸೇವನೆ ಮಾಡುತ್ತಿದ್ದಳು. ದೇಹವನ್ನು ತನ್ನ ನಾಲಗೆಯಲ್ಲಿ ನೆಕ್ಕುವ ಮೂಲಕ ಶುಚಿ ಮಾಡಿಕೊಳ್ಳುತ್ತಿದ್ದ ಆಕೆ, ನೀರನ್ನೂ ನಾಲಗೆಯಲ್ಲಿ ನೆಕ್ಕುತ್ತಿದ್ದಳು. ಇಂಥ ಪರಿಸ್ಥಿತಿಯಲ್ಲಿ ಆಕೆಯನ್ನು ರಕ್ಷಿಸಿದ ಅಧಿಕಾರಿಗಳು, ಸೂಕ್ತ ಮನೋಚಿಕಿತ್ಸೆಯನ್ನು ನೀಡಿದ್ದಾರೆ. ಈಗ ಆಕೆಗೆ 40 ವರ್ಷ ವಯಸ್ಸು.

**(ಉದಯವಾಣಿ: 22–02–2024)**

==========================================================================

## ವಿಶ್ವದ ಅತೀ ದೊಡ್ಡ ಅನಕೊಂಡ ಪತ್ತೆ: 26 ಅಡಿ ಉದ್ದ, 440 ಪೌಂಡ್ಸ್ ತೂಕ

**ಹೊಸದಿಲ್ಲಿ:** ವಿಶ್ವದ ಅತೀ ದೊಡ್ಡ ಸರ್ಪ (ಅನಕೊಂಡ)ವನ್ನು ಅಮೆಜಾನ್ ಕಾಡಿನಲ್ಲಿ ಪತ್ತೆಹಚ್ಚಲಾಗಿದೆ. ನ್ಯಾಶನಲ್ ಜಿಯೋಗ್ರಫಿ ಕಾರ್ಯ ಕ್ರಮವೊಂದರಲ್ಲಿ ವನ್ಯಜೀವಿ ತಜ್ಞ ಪ್ರೊಫೆಸರ್ ಫ್ರೀಕ್ ವೊಂಕ್ ಅವರು ಈ ಬೃಹತ್ ಸರ್ಪವನ್ನು ಪತ್ತೆಹಚ್ಚಿ ಪರಿಚಯಿಸಿದ್ದು, ಅದರ ವೀಡಿಯೋವನ್ನು ಜಾಲತಾಣದಲ್ಲೂ ಹಂಚಿಕೊಂಡಿದ್ದಾರೆ. ಈ ಅನಕೊಂಡವು ಬರೋಬ್ಬರಿ 26 ಅಡಿ ಉದ್ದ, 440 ಪೌಂಡ್ಸ್ ತೂಕವಿದೆ. ಅದರ ತಲೆ ಮನುಷ್ಯರ ತಲೆಯಷ್ಟೇ ದೊಡ್ಡದಾಗಿದೆ ಎಂದು ಹೇಳಲಾಗಿದೆ. **(ಉದಯವಾಣಿ: 22–02–2024)**

==========================================================================

## 900 ಕೈದಿಗಳ ಬಿಡುಗಡೆಗಾಗಿ 2.5 ಕೋಟಿ ದಾನ ಮಾಡಿದ ಭಾರತೀಯ ಉದ್ಯಮಿ

**ದುಬೈ:** ರಮ್ಜಾನ್ ಹಿನ್ನೆಲೆಯಲ್ಲಿ ಯುಎಇ ಜೈಲುಗಳಲ್ಲಿರುವ 900 ಕೈದಿಗಳ ಬಿಡುಗಡೆಗಾಗಿ ಭಾರತೀಯ ಉದ್ಯಮಿ ಫಿರೋಜ್ ಮರ್ಚೆಂಟ್ ಅವರು 2.5 ಕೋಟಿ ರೂ. (10 ಲಕ್ಷ ದಿರ್ಹಾಮ್ಸ್)ಗಳನ್ನು ದಾನ ಮಾಡಿದ್ದಾರೆ. ದುಬೈನಲ್ಲಿ ನೆಲೆಸಿರುವ ಪ್ಯೂರ್ ಗೋಲ್ಡ್ ಜುವೆಲ್ಲರ್ಸ್ ಮಾಲಕ ಫಿರೋಜ್ ಅವರು ದಂಡ ಪಾವತಿಯ ಭಾಗವಾಗಿ ಈ ಹಣವನ್ನು ಯುಎಇ ಅಧಿಕಾರಿಗಳಿಗೆ ನೀಡಿದ್ದಾರೆ. ಮಾನವೀಯತೆಯ ಆಧಾರದ ಮೇಲೆ ಈ ವರ್ಷ 3,000 ಕೈದಿಗಳನ್ನು ಬಿಡುಗಡೆ ಮಾಡಿಸುವ ಗುರಿಯನ್ನು ಹೊಂದಿದ್ದಾರೆ. ಈವರೆಗೆ ಅವರು 20,000 ಕೈದಿಗಳನ್ನು ಬಿಡುಗಡೆಯಾಗುವಂತೆ ಮಾಡಿದ್ದಾರೆ. **(ಉದಯವಾಣಿ: 28–02–2024)**

==========================================================================

## ಅಲರ್ಜಿಯ ಕಾರಣಕ್ಕೆ ಸ್ನಾನವನ್ನೇ ತ್ಯಜಿಸಿದ ಅಮೆರಿಕದ ಯುವತಿ

**ವಾಷಿಂಗ್ಟನ್:** ಅಮೆರಿಕದ ದಕ್ಷಿಣ ಕರೋಲಿನಾದ ನಿವಾಸಿಯಾಗಿರುವ 22 ವರ್ಷದ ಯುವತಿಯೊಬ್ಬಳು ತನಗೆ ನೀರು ಎಂದರೆ

ಆಗುವುದಿಲ್ಲ ಹಾಗಾಗಿ ನಾನು ಸ್ನಾನ ಮಾಡುವುದನ್ನೇ ತ್ಯಜಿಸುತ್ತೇನೆ ಎಂದಿದ್ದಾಳೆ. ಈ ವಿಚಾರವೀಗ ಜಾಲತಾಣದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ. ಹೌದು, ಲೊರೆನ್ ಮಾಂಟೆಫುಸ್ಕೊ ಎಂಬವರಿಗೆ 12ನೇ ವಯಸ್ಸಿನಿಂದಲೂ ಸ್ನಾನ ಮಾಡಿದಾಗ ಅಸಾಧ್ಯವಾದ ಉರಿ ಮತ್ತು ತುರಿಕೆ ಅನುಭವಿಸುತ್ತಿದ್ದಾಳೆ. ಇದು ಅಕ್ವಾಜೆನಿಕ್ ಅರ್ಟಿಕೇರಿಯಾ ಎಂಬ ಅಲರ್ಜಿಗೆ ಸಂಬಂಧಪಟ್ಟ ಕಾಯಿಲೆ ಎಂಬುದು ತಿಳಿದುಬಂದಿದೆ.

**(ಉದಯವಾಣಿ: 06–03–2024)**

==========================================

## ವಿವಾಹ ಯೋಜನೆಯ ಲಾಭಕ್ಕೆ ಸೋದರನ ಜತೆಗೆ ವಿವಾಹವಾದ ಮಹಿಳೆ

**ಹೊಸದಿಲ್ಲಿ:** ಉತ್ತರ ಪ್ರದೇಶದಲ್ಲಿ ಮುಖ್ಯಮಂತ್ರಿ ಸಾಮೂಹಿಕ ವಿವಾಹ ಯೋಜನೆಯಡಿ ನಗದು, ಉಡುಗೊರೆ ಪಡೆಯಲು ವಿವಾಹಿತ ಮಹಿಳೆ ಸ್ವಂತ ಸಹೋದರನನ್ನೇ ವಿವಾಹವಾದ ಘಟನೆ ನಡೆದಿದೆ. ಮಹಾರಾಜ್‌ಗಂಜ್‌ನ ಲಕ್ಷ್ಮೀಪುರದಲ್ಲಿ 38 ಜೋಡಿಗೆ ಸರಕಾರದ ವತಿಯಿಂದ ಸಾಮೂಹಿಕ ವಿವಾಹ ಏರ್ಪಡಿಸಲಾಗಿತ್ತು. ಅದರಲ್ಲಿ ಈ ಘಟನೆ ನಡೆದಿದೆ. ಈ ಯೋಜನೆಯಡಿ ಮದುವೆಯಾದ ಪ್ರತೀ ಬಡ ಜೋಡಿಗೆ 51,000 ರೂ. ನೀಡಲಾಗುತ್ತದೆ. ಈ ಪೈಕಿ 35000 ರೂ.ಗಳನ್ನು ವಧುವಿನ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುತ್ತದೆ. ಉಳಿದ ಹಣವನ್ನು ಉಡುಗೊರೆಗಳನ್ನು ನೀಡಲು ಬಳಸಲಾಗುತ್ತದೆ. ಈಗಾಗಲೇ ಅವರಿಂದ ಉಡುಗೊರೆಗಳನ್ನು ವಶಪಡಿಸಿಕೊಂಡಿದ್ದು, ಇಬ್ಬರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೆಂದು ಅಧಿಕಾರಿಗಳು ಹೇಳಿದ್ದಾರೆ. **(ಉದಯವಾಣಿ: 21–03–2024)**

==========================================

## ಕೆರೆಯಲ್ಲಿ ಬಟ್ಟೆ ತೊಳೆಯುತ್ತಿದ್ದ ದಲಿತರಿಗೆ ಸವರ್ಣೀಯರಿಂದ ತಡೆ

**ಆಲೂರು, ಫೆ. 28:** ಹಾಸನ ಜಿಲ್ಲೆಯ ಆಲೂರು ತಾಲೂಕಿನ ಹಂತನಮನೆ ಗ್ರಾಮದ ಕೆರೆಯಲ್ಲಿ ಮಂಗಳವಾರ ಬಟ್ಟೆ ತೊಳೆಯುತ್ತಿದ್ದ ದಲಿತ ಮಹಿಳೆಯರನ್ನು ಸವರ್ಣೀಯ ಮಹಿಳೆಯರ ತಂಡ ತಡೆದು, ಜಾತಿನಿಂದಿಸಿ ಹಲ್ಲೆ ನಡೆಸಲು ಮುಂದಾಗಿದೆ ಎಂದು ದೂರು ದಾಖಲಾಗಿದೆ. **(ಉದಯವಾಣಿ: 29–02–2024)**

==========================================

## ಮುಸ್ಲಿಮರ 'ಭಾರತ್ ಮಾತಾ ಕಿ ಜೈ ಘೋಷಣೆ' ಬಿಡ್ತೀರಾ?: ಪಿಣರಾಯಿ

**ಮಲಪ್ಪುರಂ:** ಇಬ್ಬರು ಮುಸ್ಲಿಮರು ಠಂಕಿಸಿದ 'ಭಾರತ್ ಮಾತಾ ಕಿ ಜೈ' ಮತ್ತು 'ಜೈ ಹಿಂದ್' ಘೋಷಣೆಗಳನ್ನು ಸಂಘ ಪರಿವಾರ ತ್ಯಜಿಸುತ್ತದೆಯೇ ಎಂದು ಕೇರಳ ಸಿಎಂ, ಸಿಪಿಎಂ ನಾಯಕ ಪಿಣರಾಯಿ ವಿಜಯನ್ ಪ್ರಶ್ನಿಸಿದ್ದಾರೆ. ಸಿಎಎ ವಿರುದ್ಧದ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಈ ಎರಡೂ ಘೋಷಣೆಗಳನ್ನು ಮುಸ್ಲಿಮರು ಠಂಕಿಸಿದ್ದಾರೆಂಬುದು ಸಂಘ ಪರಿವಾರದವರಿಗೆ ಗೊತ್ತಿಲ್ಲ ಎನಿಸುತ್ತದೆ. ಮುಸ್ಲಿಮರು ಠಂಕಿಸಿದ ಘೋಷಣೆಗಳನ್ನು ಕೂಗುವಂತೆ ಅದೇ ಮುಸ್ಲಿಮರಿಗೆ ಈ ಸಂಘ ಪರಿವಾರದವರು ಒತ್ತಾಯಿಸುತ್ತಾರೆ' ಎಂದು ಆರೋಪಿಸಿದರು. 'ಭಾರತ್ ಮಾತಾ ಕಿ ಜೈ ಎಂಬ ಘೋಷಣೆಯನ್ನು ಠಂಕಿಸಿದವರು ಅಝಿಮುಲ್ಲಾ ಖಾನ್. ಆಬಿದ್ ಹಸನ್ ಎಂಬುವವರು ಮೊದಲಿಗೆ ಜೈ ಹಿಂದ್ ಪದ ಬಳಸಿದರು' ಎಂದಿದ್ದಾರೆ. **(ಉದಯವಾಣಿ 26–03–2024)**

==========================================

**22ನೇ ಪುಟದಿಂದ**

ಮುಹಮ್ಮದ್ ಪೈಗಂಬರ್(ಸ) ಅರೇಬಿಯಾದ ಮರುಭೂಮಿಯಲ್ಲಿ ಆಧ್ಯಾತ್ಮಿಕ ಪ್ರವಾಹವನ್ನು ಹರಿಸಿ, ಧಾರ್ಮಿಕ ಬೀಜವನ್ನು ಬಿತ್ತಿ, ಉಚ್ಚ ಸಂಸ್ಕೃತಿಯ ಬೆಳಕನ್ನು ಪಡೆದು ಇಡೀ ಜಗತ್ತಿಗೆ ಹಂಚಿದರು. ಅತ್ಯಂತ ನಿಕೃಷ್ಟವಾಗಿದ್ದ ಸಮುದಾಯವೊಂದನ್ನು ಅಧರ್ಮದಿಂದ ಧರ್ಮದೆಡೆಗೆ, ಅಶಾಂತಿಯಿಂದ ಶಾಂತಿಯೆಡೆಗೆ, ಮೌಢ್ಯದಿಂದ ನೈಜತೆಯೆಡೆಗೆ ಕೊಂಡೊಯ್ದ ಕೀರ್ತಿ ಮುಹಮ್ಮದ್ ಪೈಗಂಬರ್‌ರಿಗೆ(ಸ) ಸಲ್ಲುತ್ತದೆ.

ಮುಹಮ್ಮದ್ ಪೈಗಂಬರರ(ಸ) ವಿಚಾರಧಾರೆಗಳು ಮತ್ತು ಅವರು ಕೈಗೊಂಡ ಕಾರ್ಯಗಳು ಮಾದರಿ ಸಮಾಜ ನಿರ್ಮಾಣಕ್ಕೆ ಅತ್ಯಗತ್ಯ. ಮುಹಮ್ಮದ್ ಪೈಗಂಬರರ(ಸ) ಪವಿತ್ರ ಜೀವನದ ಸಂಪೂರ್ಣ ಚರಿತ್ರೆಯನ್ನು ಈ ಲೇಖನದಲ್ಲಿ ತಿಳಿಸಿಕೊಡುವುದು ಕಠಿಣವಾಗಿದೆ. ಮುಹಮ್ಮದ್ ಪೈಗಂಬರರ(ಸ) ನಡೆ–ನುಡಿ, ರೀತಿ–ನೀತಿ, ಆಚಾರ–ವಿಚಾರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಮಾನವ ಕಲ್ಯಾಣವನ್ನು ಬಯಸುವ ಯಾರಿಗೇ ಆದರೂ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಉತ್ತಮ ಉದಾಹರಣೆ ಎಂದು ಅನಿಸದೆ ಇರಲಾರದು. ಆ ಪುಣ್ಯ ಪುರುಷನ ಪಾವನ ಬದುಕೇ ಮನುಕುಲಕ್ಕೊಂದು ದಾರಿದೀಪವೆಂದರೆ ತಪ್ಪಾಗಲಾರದು.

♦

### ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು

1. ಜ॥ ಅಬ್ದುಲ್ ಗಫೂರ್ ಸಾಹಿಬ್, ಬೆಂಗಳೂರು – ರೂ. 1000/–
2. ಜ॥ ಕೆ.ಎಂ. ಉಮರ್ ಸಾಹಿಬ್, ಮೊಗ್ರಾಲ್ – ರೂ. 500/–

**Statement about ownership and other particulars about the Newspaper Yugarashmi Quarterly (Form IV see Rule 8)**

| | | |
|---|---|---|
| 1. Place of publication | : | Mangalore |
| 2. Period of its publication | : | Quarterly |
| 3. Printer's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore – 575001 |
| 4. Publisher's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore – 575001 |
| 5. Editor's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore - 575001 |
| 6. Name and address of individuals who own the newspaper and partners or share holders holding more than one percent of the Capital | : | Jamath Ahmadiyya, "Darussalam", Near Railway Level Crossing, Pandeshwar, Mangalore – 575001 |

I, Muhammad Yusuf hereby declare that the particulars given above are true to the best of my knowledge and belief.

Date : 1-4-2024 Sd/- Muhammad Yusuf

"ದೇಶಪ್ರೇಮ (ಧಾರ್ಮಿಕ) ವಿಶ್ವಾಸದ ಅಂಶವಾಗಿದೆ."

– ಹಝ್ರತ್ ಮುಹಮ್ಮದ್ ಪೈಗಂಬರ್(ಸ)

**ಇನ್ಸಾನಿಯತ್ ಝಿಂದಾಬಾದ್**

**ಮಾನವೀಯತೆ ಚಿರಕಾಲ ಬಾಳಲಿ**

ಪತ್ರಿಕಾ ಪ್ರಕಟಣೆ

# ಇಸ್ಲಾಮ್ ಧರ್ಮದ ಹಾಗೂ ಅದರ ವಿಶ್ವಾಸದ ಮೂಲ ಸ್ತಂಭಗಳನ್ನು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಹೃತ್ಪೂರ್ವಕವಾಗಿ ನಂಬುತ್ತದೆ ಮತ್ತು ಅವುಗಳನ್ನು ಪಾಲಿಸುತ್ತದೆ. ಸಂಪೂರ್ಣ ನಂಬಿಕೆ, ದೃಢವಿಶ್ವಾಸ ಹಾಗೂ ಪರಿಪೂರ್ಣ ಜ್ಞಾನದೊಂದಿಗೆ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಖಾತಮನ್ನಬಿಯ್ಯೀನ್ ಎಂದು ನಂಬುತ್ತದೆ.

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ವಿರುದ್ಧ ಪತ್ರಿಕೆಗಳಲ್ಲಿ ಸತ್ಯಕ್ಕೆ ವಿರುದ್ಧವಾದ ಲೇಖನಗಳನ್ನು ಪ್ರಕಟಿಸಲಾಗುತ್ತದೆ ಮತ್ತು ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರನ್ನು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಖಾತಮನ್ನಬಿಯ್ಯೀನ್ ಎಂದು ನಂಬದೇ ಇರುವ ಕಾರಣದಿಂದ ಅದನ್ನು ಇಸ್ಲಾಮ್ ಧರ್ಮದ ವಲಯದಿಂದ ಹೊರ ಇಡಲಾಗಿದೆ ಎಂದೂ ಅದು ಬ್ರಿಟಿಷರ ಏಜೆಂಟ್ ಆಗಿದೆ ಎಂದೂ ಅದರ ವಿರುದ್ಧ ಪ್ರಚಾರ ಮಾಡಲಾಗುತ್ತದೆ. (ನಊದುಬಿಲ್ಲಾಹ್)

ಪತ್ರಿಕೆಗಳಲ್ಲಿ ಪ್ರಕಟವಾಗುವ ಈ ಆರೋಪಗಳು ಅಪ್ಪಟ ಸುಳ್ಳು ಮತ್ತು ಆಧಾರರಹಿತವಾಗಿವೆ ಹಾಗೂ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಕುರಿತು ಮಾಡಲಾಗುವ ದೊಡ್ಡ ಅಪಪ್ರಚಾರವಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರನ್ನು ಖಾತಮನ್ನಬಿಯ್ಯೀನ್ ಎಂದು ಸಂಪೂರ್ಣ ನಂಬಿಕೆ, ದೃಢವಿಶ್ವಾಸ, ಮತ್ತು ಪರಿಜ್ಞಾನದಿಂದ ನಂಬುತ್ತದೆ ಹಾಗೂ ಹಝ್ರತ್ ಪೈಗಂಬರರಿಗೆ(ಸ) ಸರ್ವಶಕ್ತನಾದ ಅಲ್ಲಾಹನು ನೀಡಿರುವ ಖಾತಮನ್ನಬಿಯ್ಯೀನಿನ ಕಿರೀಟವನ್ನು ಕಿತ್ತುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲವೆಂದು ಅದು ಘೋಷಿಸುತ್ತದೆ.

ಅಹ್ಮದಿಯಾ ಜಮಾಅತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್(ಅ) ತಮ್ಮನ್ನು ಸ್ವತಃ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರಿಗಿಂತ ಮಿಗಿಲು ಎಂದು ಭಾವಿಸುತ್ತಾರೆ ಎಂದು ಅದರ ವಿರೋಧಿಗಳು ಮತ್ತು ಅವರ ತಥಾಕಥಿತ ವಿದ್ವಾಂಸರು ಅದರ ವಿರುದ್ಧ ಇತರ ಮುಸ್ಲಿಮರ ಭಾವನೆಗಳನ್ನು ಕೆರಳಿಸಲು ಆಪಾದಿಸುತ್ತಾರೆ. ಇದೇ ಆಪಾದನೆಯನ್ನು ಈ ಜನರು ಇಂದು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸದಸ್ಯರ ವಿರುದ್ಧವೂ ಹೊರಿಸುತ್ತಾರೆ. ಆದರೆ ಇದು ಅಪ್ಪಟ ಸುಳ್ಳು ಆಪಾದನೆಯಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ತಮ್ಮನ್ನು ಸ್ವತಃ ಖಾತಮುನ್ನಬಿಯ್ಯೀನ್‌ರಾದ ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ನೈಜ ಸೇವಕ ಹಾಗೂ ಗುಲಾಮ ಎಂದು ಸಾರಿದ್ದಾರೆ ಮತ್ತು ತಮ್ಮ ಆಗಮನದ ಮೂಲೋದ್ದೇಶ ಇಸ್ಲಾಮ್ ಧರ್ಮ ಹಾಗೂ ಅದರ ಸ್ಥಾಪಕರಾದ ಹಝ್ರತ್ ಪೈಗಂಬರರ(ಸ) ವೈಭವ ಹಾಗೂ ಶ್ರೇಷ್ಠತೆಯನ್ನು ಸ್ಥಾಪಿಸುವುದಾಗಿದೆ ಎಂದು ಹೇಳಿದ್ದಾರೆ. ಹಝ್ರತ್ ಪೈಗಂಬರರ(ಸ) ಪ್ರವಾದಿತ್ವದ ಘನತೆಯನ್ನು ಅಹ್ಮದಿಯಾ ಜಮಾಅತಿನ ಸ್ಥಾಪಕರು ಎಷ್ಟು ಭವ್ಯವಾದ ರೀತಿಯಲ್ಲಿ ಕಾಪಾಡಿದರು ಎಂಬುದಕ್ಕೆ ಅವರ ಇಡೀ ಜೀವನವೇ ಸಾಕ್ಷಿ. ಅವರು ಪ್ರವಾದಿತ್ವದ ಘನತೆ ಮತ್ತು ದೇವನ ಏಕತ್ವದ ಹಿರಿಮೆಯನ್ನು ಸ್ಥಾಪಿಸಲಿಕ್ಕಾಗಿ ಮಾತು, ಕೃತ್ಯರೂಪದ ಮತ್ತು ಪ್ರಾಯೋಗಿಕವಾದ ಉದಾಹರಣೆಗಳನ್ನು ಸ್ಥಾಪಿಸಿದರು. ಮಾತ್ರವಲ್ಲ, ಅಹ್ಮದಿಯಾ ಖಿಲಾಫತಿನ ದೈವಿಕ ಮಾರ್ಗದರ್ಶನದ ಅಧೀನದಲ್ಲಿ ಇಡೀ ಜಗತ್ತಿನಲ್ಲಿ ರಸೂಲುಲ್ಲಾಹ್‌ರ(ಸ) ಮಹಿಮೆಯನ್ನು ಸ್ಥಾಪಿಸುವ ಸಕ್ರಿಯ ಜಮಾಅತನ್ನು ಸ್ಥಾಪಿಸಿದರು. ಅವರು ತಮ್ಮ ಗ್ರಂಥಗಳಲ್ಲಿ ನಾಮೂಸೆ ರಿಸಾಲತಿನ (ಪ್ರವಾದಿತ್ವದ ಘನತೆ) ಸ್ಥಾಪನೆ ಮತ್ತು ಶ್ರೇಷ್ಠತೆಯ ಬಗ್ಗೆ ಹೀಗೆ ಹೇಳುತ್ತಾರೆ:

"ಈಗ ಆಕಾಶದ ಕೆಳಗೆ ಒಬ್ಬರೇ ಪ್ರವಾದಿ ಇರುವರು ಮತ್ತು ಒಂದೇ ಗ್ರಂಥವಿರುವುದು. ಎಂದರೆ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರು. ಅವರು ಸಕಲ ಪ್ರವಾದಿಗಳಲ್ಲಿ ಅತ್ಯುನ್ನತರೂ ಅತ್ಯುತ್ತಮರೂ ಅತ್ಯಂತ ಪರಿಪೂರ್ಣರೂ ಪ್ರವಾದಿಗಳ ಮುದ್ರೆಯೂ ಹಾಗೂ ಎಲ್ಲ ಮನುಷ್ಯರಿಗಿಂತ ಅತ್ಯುತ್ತಮರೂ ಆಗಿದ್ದಾರೆ. ಅವರನ್ನು ಅನುಸರಿಸುವುದರಿಂದ ಅತ್ಯುನ್ನತನಾದ ಅಲ್ಲಾಹನು ಲಭಿಸುವುದು ಮತ್ತು ಅಂಧಕಾರದ ಮುಸುಕುಗಳು ತೆರೆಯಲ್ಪಡುವುವು ಹಾಗೂ ಇಹಲೋಕದಲ್ಲೇ ನಿಜವಾದ ಮೋಕ್ಷದ ಚಿಹ್ನೆಗಳು ವ್ಯಕ್ತವಾಗುವುವು." (ಬರಾಹೀನೆ ಅಹ್ಮದಿಯಾ ಭಾಗ 4, ರೂಹಾನೀ ಖಝಾಇನ್ ಸಂಪುಟ 1, ಪುಟ 557–558, ಅಡಿಟಿಪ್ಪಣಿ ಸಂಖ್ಯೆ 3)

ಅವರು ಹೀಗೂ ಹೇಳುತ್ತಾರೆ: "ನಾವು ನ್ಯಾಯ ನೀತಿಯ ದೃಷ್ಟಿಯಿಂದ ಎಲ್ಲ ಪ್ರವಾದಿಗಳನ್ನು ನೋಡಿದರೆ ಅವರಲ್ಲಿ ಎಲ್ಲರಿಗಿಂತಲೂ

ಧೈರ್ಯಶಾಲಿಯೂ ಚೈತನ್ಯಶಾಲಿಯೂ ದೇವನಿಂದ ಅತ್ಯಂತ ಹೆಚ್ಚು ಪ್ರೀತಿಸಲ್ಪಟ್ಟವರೂ ಆದ ಪ್ರವಾದಿಯಾಗಿ ನಾವು ಒಬ್ಬರನ್ನು ಮಾತ್ರ ಕಾಣುತ್ತೇವೆ. ಅವರೇ ಪ್ರವಾದಿಗಳ ನಾಯಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ, ಅಹ್ಮದ್ ಮುಜ್ತಬಾ ಸಲ್ಲಲ್ಲಾಹು ಅಲೈಹಿ ವಸಲ್ಲಮ್. ಅವರ ನೆರಳಿನಲ್ಲಿ ಹತ್ತು ದಿನ ನಡೆಯುವುದರಿಂದ ಸಾವಿರಾರು ವರ್ಷಗಳ ವರೆಗೂ ಸಿಗದ ಪ್ರಕಾಶ ಲಭಿಸುವುದು." (ಸಿರಾಜೆ ಮುನೀರ್; ರೂಹಾನೀ ಖಝಾಇನ್ ಸಂಪುಟ 12, ಪುಟ 82)

ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ಅತ್ಯುನ್ನತ ಮತ್ತು ಶ್ರೇಷ್ಠ ಸ್ಥಾನದ ಬಗ್ಗೆ ಈ ಮಾತುಗಳನ್ನು ಹೇಳುತ್ತಿರುವ ವ್ಯಕ್ತಿ ಅಥವಾ ಅವರ ಜಮಾಅತ್ ಹೇಗೆ ತಾನೆ ಹಝ್ರತ್ ಪೈಗಂಬರರ(ಸ) ಮೇಲೆ ಬೇರೆಯವರಿಗೆ ಸ್ಥಾನವನ್ನು ಕಲ್ಪಿಸಿಕೊಳ್ಳಲು ಸಾಧ್ಯ? ಖಂಡಿತವಾಗಿಯೂ ಇಲ್ಲ, ಬದಲಿಗೆ ಇದು ಅಹ್ಮದಿಯಾ ಜಮಾಅತಿನ ವಿರುದ್ಧ ಅಪ್ಪಟ ಸುಳ್ಳು ಮತ್ತು ನಿರಾಧಾರ ಆರೋಪವಾಗಿದೆ.

ಇದಲ್ಲದೆ, ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬ್ರಿಟಿಷರು ನೆಟ್ಟು ಬೆಳೆಸಿದ ಗಿಡವಾಗಿದೆ ಎಂಬ ಆಕ್ಷೇಪವೂ ಅದರ ವಿರುದ್ಧ ಹೊರಿಸಲಾಗುತ್ತದೆ. ಅದರ ವಿರುದ್ಧ ಹೊರಿಸಲಾಗುವ ಈ ಆಕ್ಷೇಪ ಕೂಡ ಪೂರ್ಣವಾಗಿಯೂ ತಪ್ಪಾಗಿದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ತಮ್ಮ ಬರಹಗಳಲ್ಲಿ ಎಲ್ಲಿಯೂ ಈ ಜಮಾಅತಿಗೆ ಬ್ರಿಟಿಷರೊಂದಿಗೆ ಸಂಬಂಧವಿರುವುದಾಗಿ ಹೇಳಿಲ್ಲ. ಇದಕ್ಕೆ ವಿರುದ್ಧವಾಗಿ, ಅವರು ತಮ್ಮ ಬರಹಗಳ ಮೂಲಕ ಕ್ರೈಸ್ತರನ್ನು ಧೈರ್ಯದಿಂದ ಎದುರಿಸಿದರು ಮತ್ತು ಕ್ರೈಸ್ತ ಧರ್ಮದ ಭಾಗವಾಗಿರುವ ಎಲ್ಲ ಸುಳ್ಳು ನಂಬಿಕೆಗಳನ್ನು ಖಂಡಿಸಿದರು. ಇದಲ್ಲದೆ, ಅವರು ಅನೇಕ ಆಂಗ್ಲೇಯ ಪಾದ್ರಿಗಳೊಂದಿಗೆ ಧಾರ್ಮಿಕ ಸಂವಾದಗಳನ್ನು ನಡೆಸಿ ಅವರನ್ನು ಪರಾಜಿತಗೊಳಿಸಿದರು. ಹೀಗಿರುವಾಗ ಕ್ರೈಸ್ತ ಧರ್ಮವನ್ನು ಮಿಥ್ಯೆ ಎಂದು ಸಾರಿದ ಅಹ್ಮದಿಯಾ ಜಮಾಅತನ್ನು ಆಂಗ್ಲೇಯರು ನೆಟ್ಟು ಬೆಳೆಸಿದ ಗಿಡವೆಂದು ಹೇಳುವುದು ಮೂರ್ಖತನವಲ್ಲದೇ ಮತ್ತೇನು?

ಹಾಗೆಯೇ ಅಹ್ಮದಿಯಾ ಜಮಾಅತ್ ಪರಿಶುದ್ಧ ಕಲಿಮವಾದ ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್ (ಅಲ್ಲಾಹನಲ್ಲದೆ ಬೇರೆ ದೇವನಿಲ್ಲ, ಮುಹಮ್ಮದ್ ಅವನ ಪ್ರವಾದಿ) ಎಂಬುದನ್ನು, ಪವಿತ್ರ ಖುರ್‌ಆನ್ ಮತ್ತು ಹದೀಸನ್ನು ನಂಬುವುದಿಲ್ಲ ಎಂದು ಹೇಳುವುದು ಕೂಡ ಮಹಾ ಸುಳ್ಳಾರೋಪವಾಗಿದೆ. ಈ ಆಕ್ಷೇಪಣೆಗೆ ಪ್ರತಿಕ್ರಿಯೆಯಾಗಿ, ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರಾದ ಹಝ್ರತ್ ಮಸೀಹ್ ಮೌಊದ್‌ರ(ಅ) ಈ ಬರಹ ಸಾಕು. ಅವರು ಹೇಳುತ್ತಾರೆ:

"ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್. ಇದು ನಮ್ಮ ಧರ್ಮದ ಸಾರಾಂಶವಾಗಿದೆ. ನಾವು ನಂಬಿಕೊಂಡು ಬಂದಿರುವುದು ಮತ್ತು ದೇವನ ಅನುಗ್ರಹದಿಂದ ನಂಬುತ್ತಾ ಈ ನಶ್ವರ ಲೋಕದಿಂದ ನಾವು ಅಗಲಿ ಹೋಗಲಿರುವುದು ಈ ವಿಶ್ವಾಸದೊಂದಿಗೆ ಆಗಿದೆ. ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಖಾತಮುನ್ನಬಿಯ್ಯಿನ್ (ಪ್ರವಾದಿಗಳ ಮುದ್ರೆ) ಮತ್ತು ಖೈರುಲ್ ಮುರ್‌ಸಲೀನ್ (ಪ್ರವಾದಿಗಳಲ್ಲಿ ಅತ್ಯಂತ ಶ್ರೇಷ್ಠ) ಆಗಿದ್ದಾರೆ. ಅವರ ಹಸ್ತಗಳಿಂದ ಧರ್ಮವನ್ನು ಪರಿಪೂರ್ಣಗೊಳಿಸಲಾಗಿದೆ. ಪರಿಪೂರ್ಣತೆಗೆ ತಲುಪಿದ ಈ ಅನುಗ್ರಹದ ಮೂಲಕ ಮನುಷ್ಯನು ನೇರವಾದ ಮಾರ್ಗವನ್ನು ಅವಲಂಬಿಸಿ ದೇವನ ಸಮೀಪಕ್ಕೆ ತಲುಪಲು ಸಾಧ್ಯ. ಪವಿತ್ರ ಖುರ್‌ಆನ್ ಎಲ್ಲ ದೈವಿಕ ಗ್ರಂಥಗಳಲ್ಲಿ ಅತ್ಯಂತ ಶ್ರೇಷ್ಠವಾದುದು (ಖಾತಮುಲ್ ಕುತುಬ್) ಎಂದು ನಾವು ನಂಬುತ್ತೇವೆ. ಅದರ ಉಪದೇಶಗಳು, ಅದರ ಆಜ್ಞೆಗಳು, ಅದು ನಿಷಿದ್ಧಗೊಳಿಸಿದ ಕಾರ್ಯಗಳು, ಅದು ಕಡ್ಡಾಯಗೊಳಿಸಿದ ಕಾರ್ಯಗಳು – ಇವುಗಳಲ್ಲಿ ಒಂದಿಷ್ಟು ಕೂಡ ಹೆಚ್ಚು ಕಮ್ಮಿ ಆಗಲಾರದು." (ಇಝಾಲೇ ಔಹಾಮ್; ರೂಹಾನೀ ಖಝಾಇನ್, ಸಂಪುಟ 3, ಪುಟ 169 – 170)

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ನಂಬಿಕೆಯ ಪ್ರಕಾರ, ಬನೀ ಇಸ್ರಾಈಲರಿಗೆ ಮಾರ್ಗದರ್ಶನ ನೀಡಲು ಕಳುಹಿಸಲ್ಪಟ್ಟಿದ್ದರು ಎಂದು ಪವಿತ್ರ ಖುರ್‌ಆನ್ ಹೇಳಿರುವ ಹಝ್ರತ್ ಈಸಾ ಮಸೀಹ್(ಅ) ಪವಿತ್ರ ಖುರ್‌ಆನಿನ ಸಾಕ್ಷ್ಯದ ಪ್ರಕಾರ ನಿಧನಗೊಂಡಿರುವರು. ಪವಿತ್ರ ಖುರ್‌ಆನಿನ 30ಕ್ಕೂ ಹೆಚ್ಚು ಸ್ಪಷ್ಟವಾದ ವಚನಗಳು ಈ ಸತ್ಯಕ್ಕೆ ಸಾಕ್ಷಿಯಾಗಿದೆ. ಯಾ ಈಸಾ ಇನ್ನೀ ಮುತವಫ್ಫೀಕ (ಪವಿತ್ರ ಖುರ್‌ಆನ್, 3:56) ಅಂದರೆ ಎಲೈ ಈಸಾ! ಖಂಡಿತವಾಗಿಯೂ ನಾನು ನಿನ್ನನ್ನು ಮೃತಪಡಿಸುವೆನು ಎಂದು ಅಲ್ಲಾಹನು ಹೇಳಿದ್ದಾಗಿ ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪಿಸಲಾಗಿದೆ. ಅದೇ ರೀತಿಯಲ್ಲಿ ಫಲಮ್ಮಾ ತವಫ್ಫೈತನೀ (ಪವಿತ್ರ ಖುರ್‌ಆನ್, 5:118) ಅಂದರೆ, ನೀನು (ಅಲ್ಲಾಹನು) ನನಗೆ ಮರಣ ನೀಡಿದಾಗ ಎಂದು ಹಝ್ರತ್ ಈಸಾ(ಅ) ಪರಲೋಕದಲ್ಲಿ ಹೇಳುವುದಾಗಿಯೂ ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪವಿದೆ. ಅದೇ ರೀತಿ ಪವಿತ್ರ ಖುರ್‌ಆನ್ ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ಬಗ್ಗೆ ಈ ರೀತಿ ಹೇಳಿದೆ: ವಮಾ ಮುಹಮ್ಮದುನ್ ಇಲ್ಲಾ ರಸೂಲ್ ಖದ್ ಖಲತ್ ಮಿನ್ ಖಬ್ಲಿಹಿರ್ರುಸುಲ್ (ಪವಿತ್ರ ಖುರ್‌ಆನ್, 3:145) ಅಂದರೆ ಹಝ್ರತ್ ಮುಹಮ್ಮದ್(ಸ) ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರೂ ಗತಿಸಿದ್ದಾರೆ. ಖಾತಮನ್ನಬಿಯ್ಯೀನ್ ಹಝ್ರತ್ ಮುಹಮ್ಮದ್(ಸ) ಈ ನಶ್ವರ ಪ್ರಪಂಚವನ್ನು ಬಿಟ್ಟು ಹೋಗಿರುವಾಗ ಬೇರೊಬ್ಬ ಪ್ರವಾದಿಯನ್ನು ಜೀವಂತವಾಗಿ ಇರಿಸುವುದರಲ್ಲಿ ಇರುವ ರಹಸ್ಯವಾದರೂ ಏನು? ಹಝ್ರತ್ ಮುಹಮ್ಮದ್ ಮುಸ್ತಫಾರಿಗಿಂತ(ಸ) ಮುಂಚಿನ ಎಲ್ಲ

ಪ್ರವಾದಿಗಳು ಮೃತಪಟ್ಟಿರುವವರು ಎಂಬುದರ ಬಗ್ಗೆ ಎಲ್ಲ ಸಹಾಬಿಯರು ಒಮ್ಮತಾಭಿಪ್ರಾಯ ಹೊಂದಿದ್ದರು ಎಂಬುದಕ್ಕೆ ಹದೀಸ್ ಮತ್ತು ಚರಿತ್ರೆಯ ಗ್ರಂಥಗಳಲ್ಲಿ ಪುರಾವೆಗಳಿವೆ. ಹಝ್ರ‌ತ್ ಮುಹಮ್ಮದ್ ಮುಸ್ತಫಾ(ಸ) ನಿಧನಗೊಂಡಾಗ ಹಝ್ರ‌ತ್ ಉಮರ್(ರ) ತನ್ನ ಖಡ್ಗವನ್ನು ಎತ್ತಿ "ಯಾರಾದರೂ ಹಝ್ರ‌ತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನಗೊಂಡಿರುವರು ಎಂದು ಹೇಳಿದರೆ ಅವರ ತಲೆಯನ್ನು ಕತ್ತರಿಸುವೆನು" ಎಂದು ಹೇಳಿದಾಗ ಹಝ್ರ‌ತ್ ಅಬೂಬಕರ್ ಸಿದ್ದೀಖ್(ರ) ಇದೇ ವಚನವನ್ನು ಪಠಿಸಿದ್ದರು. ಅಂದರೆ ಮುಹಮ್ಮದ್(ಸ) ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಪ್ರವಾದಿಗಳು ಗತಿಸಿದ್ದಾರೆ. ಹಝ್ರ‌ತ್ ಈಸಾ(ಅ) ಆಕಾಶದಲ್ಲಿ ಜೀವಂತವಾಗಿ ಇರುವರಲ್ಲವೇ ಎಂದು ಆ ವೇಳೆ ಅಲ್ಲಿದ್ದ ಯಾರೂ ಹೇಳಲಿಲ್ಲ.

ಇಸ್ಲಾಮ್ ಪರಿಪೂರ್ಣ ಧರ್ಮವಾಗಿದೆ ಎಂಬುದನ್ನು ನೆನಪಿಡಿರಿ. ಆದಾಗ್ಯೂ ಮುಸ್ಲಿಮರ ದುರವಸ್ಥೆಯ ಬಗ್ಗೆ ಹಝ್ರ‌ತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಭವಿಷ್ಯ ನುಡಿದಿದ್ದರು: ಈಮಾನ್ ಸುರಯ್ಯ (ಕೃತ್ತಿಕಾ) ನಕ್ಷತ್ರಕ್ಕೆ ಹೊರಟುಹೋಗುವ ಸಮಯ ಬರುವುದು (ಎಂದರೆ ಸತ್ಯವಿಶ್ವಾಸ ಜನರ ಹೃದಯಗಳಲ್ಲಿ ಇಲ್ಲವಾಗುವ ಸಮಯ). ಆಗ ಪರ್ಶಿಯಾದ ಓರ್ವ ವ್ಯಕ್ತಿ ಈಮಾನನ್ನು ಜಗತ್ತಿಗೆ ಮರಳಿ ತರುವನು (ಸಹೀಹ್ ಬುಖಾರಿ).

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸಂಸ್ಥಾಪಕ, ಹಝ್ರ‌ತ್ ಮಿರ್ಝಾ ಗ಼ುಲಾಮ್ ಅಹ್ಮದ್ ಸಾಹಿಬ್, ವಾಗ್ದತ್ತ ಮಸೀಹ್ ಹಾಗೂ ಮಹ್‌ದೀ ಅಲೈಹಿಸ್ಸಲಾಮ್ ಯಾವುದೇ ಪ್ರತ್ಯೇಕ ಪ್ರವಾದಿತ್ವ ಅಥವಾ ನಿಯಮಸಂಹಿತೆಯನ್ನು ತಂದದ್ದಾಗಿ ವಾದಿಸಿಲ್ಲ. ಬದಲಾಗಿ, ಸೂರಾ ಅನ್ನಿಸಾದ ವಚನದ ಪ್ರಕಾರ, ಹಝ್‌ರತ್ ಮುಹಮ್ಮದ್ ಮುಸ್ತಫಾರ(ಸ) ಪರಿಪೂರ್ಣ ವಿಧೇಯತೆ ಮತ್ತು ಪರಿಪೂರ್ಣ ಅನುಸರಣೆಯ ಪರಿಣಾಮವಾಗಿ ಹಾಗೂ ಹಝ್ರ‌ತ್ ಪೈಗಂಬರರ(ಸ) ನೈಜ ಸೇವಕ ಮತ್ತು ಗುಲಾಮರಾಗಿದ್ದ ಕಾರಣದಿಂದ ಅವರಿಗೆ ಪ್ರವಾದಿತ್ವದ ಸ್ಥಾನ ಲಭಿಸಿತು. ಇದು ಹಝ್‌ರತ್ ಮುಹಮ್ಮದ್ ಮುಸ್ತಫಾರ(ಸ) ಮಹಿಮೆಯನ್ನು ಹೆಚ್ಚಿಸುತ್ತದೆ. ಹಝ್‌ರತ್ ಪೈಗಂಬರರ(ಸ) ಅಸ್ತಿತ್ವವು ಒಬ್ಬ ಪ್ರವಾದಿಯನ್ನು ಸೃಷ್ಟಿಸುವಂಥದ್ದಾಗಿದೆ. ಅಂದರೆ, ಹಝ್‌ರತ್ ಪೈಗಂಬರರನ್ನು(ಸ) ಪರಿಪೂರ್ಣವಾಗಿ ಅನುಸರಿಸುವ ಮೂಲಕ ಒಬ್ಬ ಅನುಯಾಯಿ ಪ್ರವಾದಿತ್ವದ ಸ್ಥಾನಮಾನವನ್ನು ಪಡೆಯಬಹುದಾಗಿದೆ.

ಆದ್ದರಿಂದ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಮತ್ತು ಅದರ ಸಂಸ್ಥಾಪಕರ ಮೇಲೆ ಸುಳ್ಳಾರೋಪ ಹೊರಿಸುವವರು ತಮ್ಮ ಅಸೂಯೆ ಮತ್ತು ಮತಾಂಧತೆಯನ್ನು ತೊರೆದು ವಾಗ್ದತ್ತ ಮಹ್‌ದೀ ಮತ್ತು ಮಸೀಹ್‌ರಾದ ಹಝ್ರ‌ತ್ ಮಿರ್ಝಾ ಗ಼ುಲಾಂ ಅಹ್ಮದ್‌ರ(ಅ) ಬರಹಗಳ ಮತ್ತು ಅಹ್ಮದಿಯಾ ಜಮಾಅತಿನ ನಂಬಿಕೆಗಳ ಕುರಿತು ಗಮನವಿಟ್ಟು ಆಲೋಚಿಸಬೇಕು ಮತ್ತು ಅನ್ವೇಷಣೆ ಹಾಗೂ ಪರಿಪೂರ್ಣ ಜ್ಞಾನವಿಲ್ಲದೆ ಸುಳ್ಳಾರೋಪಗಳನ್ನು ಮಾಡುವುದರಿಂದ ದೂರ ಸರಿಯಬೇಕು ಎಂದು ನಾವು ವಿನಂತಿಸಿಕೊಳ್ಳುತ್ತೇವೆ.

**(Office of Press & Media, ಅಹ್ಮದಿಯಾ ಮುಸ್ಲಿಮ್ ಜಮಾಅತ್, ಖಾದಿಯಾನ್)**

# LOVE FOR ALL
# HATRED FOR NONE
# ಎಲ್ಲರೊಂದಿಗೆ ಪ್ರೀತಿ,
# ಯಾರೊಂದಿಗೂ ದ್ವೇಷವಿಲ್ಲ

# Ahmadiyya Muslim Community

Apps for mobile devises

Download free apps developed by Ahmadiyya Muslim Community for your iphone,ipode, and Android

**Quran**
Read the Holy Quran in easy Yassarnal Quran Font

**Conditions of Bai'at**
A pocket reference of Shara't-e-Bai'at in 7 languages


**Sermons**
Huzoor's Friday Sermons In 15 languages


**MTA**
Watch MTA Live, view Schedule and much more


**Ahmadiyya News**
Stay up to date with the Latest jama'at news


View these apps at alislam.org/apps or scan the QR code below














**NEW PUBLICATIONS**
**Contact:**
**NAZARAT NASHRO - ISHA'AT**
**Sadr Anjuman Ahmadiyya**
**Qadian – 143516 (Punjab)**
**Phone: 01872 - 500970**

Registered with the Registrar of Newspapers for India No. R.N. 27354/75
**Yugarashmi** Kannada Quarterly, **April - 2024.** Price : **Rs. 15/-**




ಮೂರನೇ ಮಹಾಯುದ್ಧದ ಭೀತಿ ದಿನೇ ದಿನೇ ವರ್ಧಿಸುತ್ತಿದೆ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್
ಅಹ್ಮದಿಯಾ ಮುಸ್ಲಿಂ ಜಮಾಅತಿನ ಜಾಗತಿಕ ನೇತಾರ

#STOPWW3

Ahmadiyya Muslim Community, India

## ಜಾಗತಿಕ ಶಾಂತಿಯ ದೂತ ಮುಂದಿರಿಸಿದ ಶಾಂತಿ ಸ್ಥಾಪನೆಯ ಸುವರ್ಣ ತತ್ವಗಳು

1. ಸೃಷ್ಟಿಕರ್ತನನ್ನು ಅರಿಯಿರಿ
2. ಸಂಪೂರ್ಣ ನ್ಯಾಯಪಾಲನೆ ಸ್ಥಾಪಿಸಿರಿ
3. ಜಾಗತಿಕ ಏಕತೆಗೆ ಪ್ರೋತ್ಸಾಹ ಕೊಡಿರಿ
4. ಅಣ್ವಸ್ತ್ರವನ್ನು ಕೊನೆಗೊಳಿಸಿರಿ
5. ಆಯುಧ ವ್ಯಾಪಾರದಿಂದ ಅತಿಲಾಭ ಪಡೆಯುವುದನ್ನು ವರ್ಜಿಸಿರಿ
6. ಆರ್ಥಿಕ ಸಮಾನತೆಯನ್ನು ಸ್ಥಾಪಿಸಿರಿ ಮತ್ತು ಬಡತನವನ್ನು ತೊಡೆದುಹಾಕಿರಿ
7. ದೇಶದ ಏಳಿಗೆಗಾಗಿ ಪ್ರಯತ್ನಿಸಿರಿ
8. ಉಗ್ರವಾದವನ್ನು ತಿರಸ್ಕರಿಸಿರಿ
9. ಮನುಕುಲದ ಸೇವೆ ಮಾಡಿರಿ
10. ಪರಸ್ಪರರ ವಿಶ್ವಾಸಗಳನ್ನು ಆದರಿಸಿರಿ.

1800-103-2131 (Toll Free)

www.lightofislam.in
www.alislam.org
www.mta.tv
www.stopww3.co.uk

islaminind
islaminindia

Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore